ಸಂಪುಟ: 06 ಸಂಚಿಕೆ: 104 ಪುಟಗಳು: 08 ಶನಿವಾರ 27 ಜೂನ್ 2026
www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com
ಸಂಪಾದಕರು: ಟಿ. ಹೊಂಬೇಗೌಡ
RNI No. KARKAN/2021/80833
9448225696 +91 8035841833 ₹5
# ಉದಯ ವಾಹಿನಿ
ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

**ಮುಂಜಾನೆ ಮಾತು**
ಮುಖದ ಮೇಲಿನ ನಗುವೊಂದು ಸುಂದರ ಸಂಗತಿ. ಕಣ್ಣೀರಿನಿಂದಾಗಲೀ, ಕೋಪದಿಂದಾಗಲೀ ಅದು ಅಳಿಸಿ ಹೋಗದಂತೆ ನೋಡಿಕೊಳ್ಳೋಣ!

# ರಾಮ ಮಂದಿರ ದೇಣಿಗೆ ಅವ್ಯವಹಾರ

ಅಯೋಧ್ಯೆಯಲ್ಲಿನ ರಾಮಮಂದಿರ ಇದು ಕೇವಲ ದೇಗುಲವಲ್ಲ, ನೂರಾರು ವರ್ಷಗಳ ಕನಸು.. ಕೋಟಿ ಕೋಟಿ ಭಾರತೀಯರ ಬೆಲೆಕಟ್ಟಲಾಗದ ಭಾವನೆ. ಅಸಂಖ್ಯಾತ ಭಕ್ತರ ದೈವತ್ವದ ಸ್ಥಳ. ಸಾವಿರಾರು ಹೋರಾಟಗಾರರ ತ್ಯಾಗ, ಸಂಕಲ್ಪದ ಪ್ರತೀಕ. ನೂರಾರು ಸಮಸ್ಯೆಗಳನ್ನು ಮೆಟ್ಟಿ ನೆಲೆ ನಿಂತಿರೋ ಭವ್ಯ ಭೂಮಿ. ಆದ್ರೀಗ ಅಂಥಹಾ ಪುಣ್ಯ ಭೂಮಿಯಲ್ಲೇ ಹೆಗ್ಗಣಗಳು ಬಿಲ ತೋಡಿ ಲೂಟಿ ಹೊಡೆದಿವೆ. ದೇಗುಲದ ನಿರ್ವಹಣೆಗೆ ಅಂತ ಸ್ಥಾಪಿಸಲಾಗಿದ್ದ ಟ್ರಸ್ಟ್‌ನಲ್ಲೇ ಧನದಾಹಿಗಳು ರಾಮಲಲ್ಲಾನಿಗೆ ಭಕ್ತಿಪೂರ್ವಕವಾಗಿ ಹರಕೆ ರೂಪದಲ್ಲಿ ನೀಡಿದ್ದ ಕೋಟಿ ಕೋಟಿ ಹಣ, ಚಿನ್ನ, ಒಡವೆ ವಜ್ರ, ವೈಢೂರ್ಯಗಳನ್ನ ತಿಂದು ತೇಗಿದ್ದಾರೆ. **ಅರುಣ್ ಯೋಗಿರಾಜ್ ರಾಮಲಲ್ಲಾ ವಿಗ್ರಹ ಕೆತ್ತಿದ ಶಿಲ್ಪಿ**



**ಭಕ್ತರಲ್ಲಿ ಬೇಸರ**

- ರಾಮ ಮಂದಿರ ದೇಣಿಗೆ ವಿವಾದ
- ಸಂಜಯ್ ರಾವತ್ ಪ್ರಶ್ನೆ!
- ಬಿಜೆಪಿ ಮೇಲೆ ಅನುಮಾನ
- ಭಕ್ತರಲ್ಲಿ ಮೂಡಿರುವ ಗೊಂದಲ ನಿವಾರಣೆಯಾಗಲಿ
- ಹರಕೆ ರೂಪದಲ್ಲಿ ನೀಡಿದ್ದ ಕೋಟಿ ಕೋಟಿ ಹಣ






**1** ರಾಮ ಮಂದಿರ ನಿರ್ಮಾಣ ಸಮಯದಲ್ಲಿ 4 ಕೆಜಿ ಬೆಳ್ಳಿ ಇಟ್ಟಿಗೆ ನೀಡಿದ್ದ ಶಿವಸೇನೆ (ಯುಬಿಟಿ)

**2** ಉದ್ಧವ್ ಠಾಕ್ರೆ ನೀಡಿದ ಬೆಳ್ಳಿ ಇಟ್ಟಿಗೆಯ ಸ್ವೀಕೃತಿ ಪತ್ರ ಕೇಳಿದ ಸಂಜಯ್ ರಾವತ್.

**3** ರಾಮ ಮಂದಿರ ದೇಣಿಗೆ ಅವ್ಯವಹಾರದಲ್ಲಿ ಭಾಗಿಯಾದವರಿಗೆ ಶಿಕ್ಷೆಯಾಗಲ್ಲ ಎಂದ ಸಂಜಯ್ ರಾವತ್

• ಉದಯವಾಹಿನಿ, ಅಯೋಧ

ರಾಮ ಮಂದಿರಕ್ಕೆ ನೀಡಲಾಗಿದ್ದ ದೇಣಿಗೆ ಹಣ, ಕಾಣಿಕೆ ದುರ್ಬಳಕೆ ಆರೋಪದಡಿ ಎಫ್‌ಐಆರ್‌ನಲ್ಲಿ ಹೆಸರು ಉಲ್ಲೇಖಿಸಲಾಗಿದ್ದ ಎಲ್ಲಾ 8 ಮಂದಿಯನ್ನು ಬಂಧಿಸಲಾಗಿದೆ ಎಂದು ಹಿರಿಯ ಅಧಿಕಾರಿಗಳು ತಿಳಿಸಿದ್ದಾರೆ. ಉತ್ತರಪ್ರದೇಶ ಸರ್ಕಾರ ರಚನೆ ಮಾಡಿದ್ದ ವಿಶೇಷ ತನಿಖಾ ತಂಡದ ಪ್ರಾಥಮಿಕ ವರದಿ ಆಧರಿಸಿ ಈ ಬಂಧನ ಮಾಡಲಾಗಿದೆ. ಬಂಧಿತ ಎಂಟೂ ಮಂದಿಯ ವಿಚಾರಣೆ ನಡೆಸಲಾಗುತ್ತಿದೆ ಎಂದು ಅವರು ತಿಳಿಸಿದ್ದಾರೆ.

ಅವಿನಾಶ್ ಶುಕ್ಲಾ, ಅನುಕಲ್ಸ್ ಮಿಶ್ರಾ, ಲವಕುಶ್ ಮಿಶ್ರಾ, ಮನೀಶ್ ಕುಮಾರ್ ಯಾದವ್, ಕರುಣೇಶ್ ಪಾಂಡೆ, ರಾಮಶಂಕರ್ ಮಿಶ್ರಾ, ಸುಭಾಶ್ ಶ್ರೀವಾಸ್ತವ ಮತ್ತು ರಾಮಶಂಕರ್ ಯಾದವ್ ಅಲಿಯಾಸ್ ಟಿನ್ನು ಬಂಧಿತ ಆರೋಪಿಗಳಾಗಿದ್ದು, ಇವರೆಲ್ಲ ದೇಗುಲಕ್ಕೆ ಬರುವ ಹಣ ಮತ್ತು ಕಾಣಿಕೆಗಳ ಎಣಿಕೆ ಕಾರ್ಯ ನಿರ್ವಹಿಸುತ್ತಿದ್ದರು ಎಂದು ಅಧಿಕಾರಿಗಳು ಹೇಳಿದ್ದಾರೆ. 'ಬಂಧಿತ ಆರೋಪಿಗಳೆಲ್ಲ ಸದ್ಯ ಅಯೋಧ್ಯೆಯಲ್ಲೇ ಇದ್ದು, ಹೆಚ್ಚುವರಿ ವಿಚಾರಣೆ ನಡೆಯುತ್ತಿದೆ. ನ್ಯಾಯಾಲಯದ ಮುಂದೆ ಹಾಜರುಪಡಿಸಲು ಪೊಲೀಸರು ಸಿದ್ಧತೆ ನಡೆಸಿದ್ದಾರೆ ಎಂದು ಅಧಿಕಾರಿ ತಿಳಿಸಿದ್ದಾರೆ. ಆರೋಪಿಗಳ ವಿರುದ್ಧ ಭಾರತೀಯ ನ್ಯಾಯ ಸಂಹಿತೆಯ ಸೆಕ್ಷನ್ 306 (ಗುಮಾಸ್ತ ಅಥವಾ ಸೇವಕನಿಂದ ಆಸ್ತಿಯ ಕಳ್ಳತನ), 316 (ಕ್ರಿಮಿನಲ್ ನಂಬಿಕೆ ದ್ರೋಹ), 317 (ಕದ್ದ ಆಸ್ತಿಯನ್ನು ಅಪ್ರಾಮಾಣಿಕವಾಗಿ ಪಡೆಯುವುದು) ಮತ್ತು 61 (ಕ್ರಿಮಿನಲ್ ಪಿತೂರಿ) ಸೇರಿದಂತೆ ಇತರ ಸೆಕ್ಷನ್‌ಗಳ ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ.

ರಾಮ ಮಂದಿರ ದೇಣಿಗೆ ದುರುಪಯೋಗ ಸಂಬಂಧ ಜೂನ್ 7ರಿಂದ ಆರೋಪ ಕೇಳಿಬರುತ್ತಿದ್ದವು. ಈ ಸಂಬಂಧ ತನಿಖೆಗೆ ಉತ್ತರಪ್ರದೇಶ ಸರ್ಕಾರವು ಜೂನ್ 13ರಂದು ವಿಶೇಷ ತನಿಖಾ ತಂಡ ರಚನೆ ಮಾಡಿತ್ತು. ಅಲ್ಲದೇ, ವದಂತಿಗಳಿಗೆ ಕಿವಿಗೊಡದೆ ತನಿಖಾ ವರದಿ ಬರುವವರೆಗೂ ಕಾಯುವಂತೆ ರಾಮ ಭಕ್ತರಿಗೆ ಮನವಿ ಮಾಡಿತ್ತು.

ಎಸ್‌ಐಟಿಯ ಪ್ರಾಥಮಿಕ ವರದಿ ಆಧರಿಸಿ ಜೂನ್ 25ರಂದು ಎಫ್‌ಐಆರ್ ದಾಖಲಾಗಿತ್ತು. ಬಳಿಕ, ಎಲ್ಲಾ ಆರೋಪಿಗಳನ್ನು ಬಂಧಿಸಿರುವುದಾಗಿ ಪೊಲೀಸರು ತಿಳಿಸಿದ್ದಾರೆ. ಸಮಾಜವಾದಿ ಪಕ್ಷದ ವರಿಷ್ಠ ಅಖಿಲೇಶ್ ಯಾದವ್ ಅವರು ದುರುಪಯೋಗದ ಆರೋಪ ಮಾಡಿದಾಗಿನಿಂದ ಆರೋಪಿಗಳ ಹೆಸರುಗಳು ಸಾಮಾಜಿಕ ಮಾಧ್ಯಮದಲ್ಲಿ ಹರಿದಾಡುತ್ತಿವೆ. ವಿರೋಧ ಪಕ್ಷಗಳ ನಾಯಕರು ಮತ್ತು ಬಿಜೆಪಿ ಮುಖಂಡರು ಸಹ ಈ ಕುರಿತಂತೆ ತನಿಖೆಗೆ ಒತ್ತಾಯಿಸಿದ್ದರು.

ಸುಭಾಶ್ ಚಂದ್ರ ಶ್ರೀವಾಸ್ತವ ಅವರು ನಗದು ಎಣಿಕೆ ಸಿಬ್ಬಂದಿಯ ನೇತೃತ್ವ ವಹಿಸಿದ್ದರು. ಉಳಿದ ಆರೋಪಿಗಳು ನಗದು, ಕಾಣಿಕೆಗಳ ಎಣಿಕೆಯ ಹೊಣೆ ಹೊತ್ತಿದ್ದರು. ಬಂಧಿತರಲ್ಲಿ ಒಬ್ಬರಾದ ರಾಮ್ ಶಂಕರ್ ಯಾದವ್ ಅಲಿಯಾಸ್ ಟಿನ್ನು, ಟ್ರಸ್ಟ್‌ನ ಪ್ರಧಾನ ಕಾರ್ಯದರ್ಶಿ ಚಂಪತ್ ರಾಯ್ ಅವರ ಕಾರಿನ ಮಾಜಿ ಡ್ರೈವರ್ ಎಂಬುದು ಕುತೂಹಲಕ್ಕೆ ಎಡೆಮಾಡಿದೆ.

## ಒಡವೆಗಳಿಗೂ ಕೈಹಾಕಿದ ಕಳ್ಳರು

ಕೇವಲ ನಗದು ಮಾತ್ರವಲ್ಲದೆ, ಭಕ್ತರು ಕಾಣಿಕೆ ಪೆಟ್ಟಿಗೆಗೆ ಹಾಕುತ್ತಿದ್ದ ಚಿನ್ನ ಹಾಗೂ ಬೆಳ್ಳಿಯ ಒಡವೆಗಳನ್ನೂ ಈ ಜಾಲ ಲೂಟಿ ಮಾಡಿದೆ. ರಾಮಲಲ್ಲಾನಿಗೆ ಅರ್ಪಿಸಲಾಗಿದ್ದ ಕಿವಿಯೋಲೆ, ಮೂಗುತಿ, ಬಳೆಗಳು ಹಾಗೂ ಕಾಲುಗೆಜ್ಜೆಗಳನ್ನು ಕಾಣಿಕೆ ಪೆಟ್ಟಿಗೆಯಿಂದ ಅಧಿಕೃತವಾಗಿ ದಾಖಲಿಸುವ ಮುನ್ನವೇ ಕಳವು ಮಾಡಲಾಗುತ್ತಿತ್ತು.


ಬಂಧಿತ ಆರೋಪಿಗಳಲ್ಲೊಬ್ಬನಾದ ಅವಿನಾಶ್ ಪಾಂಡೆ ಎಂಬಾತನ ಬ್ಯಾಂಕ್ ಖಾತೆಗೆ ಕದ್ದ ಹಣ ನೇರವಾಗಿ ಜಮಾ ಆಗಿರುವುದು ತನಿಖೆಯಿಂದ ದೃಢಪಟ್ಟಿದೆ.

ಸದ್ಯ ನಿರ್ಬಂಧಿತ ಎಣಿಕೆ ಕೊಠಡಿಯೊಳಗೆ ಮುಕ್ತ ಪ್ರವೇಶ ಹೊಂದಿದ್ದ ರಾಮ್ ಶಂಕರ್ ಯಾದವ್ ಅಲಿಯಾಸ್ ತಿನ್ನು ಯಾದವ್ ಮತ್ತು ಸುಭಾಷ್ ಚಂದ್ರ ಸೇರಿದಂತೆ ಇಡೀ ತಂಡದ ವಿರುದ್ಧ ಎಸ್‌ಐಟಿ ತನಿಖೆ ತೀವ್ರಗೊಳಿಸಿದೆ.

## ಅಖಿಲೇಶ್ ಯಾದವ್ ವಾಗ್ದಾಳಿ



ಎಫ್‌ಐಆರ್ ದಾಖಲಾದ ಬೆನ್ನಲ್ಲೇ ಸಮಾಜವಾದಿ ಪಕ್ಷದ ಅಧ್ಯಕ್ಷ ಅಖಿಲೇಶ್ ಯಾದವ್ ಅವರು ಎಕ್ಸ್‌ನಲ್ಲಿ ಪೋಸ್ಟ್ ಮಾಡುವ ಮೂಲಕ ತನಿಖಾ ಪ್ರಕ್ರಿಯೆಯನ್ನು ಪ್ರಶ್ನಿಸಿದ್ದಾರೆ. ಬಿಜೆಪಿ ಸರ್ಕಾರದ ಅವಧಿಯಲ್ಲಿ ಕೇವಲ ಸಣ್ಣ ಮೀನುಗಳಿಗೆ ಶಿಕ್ಷೆಯಾಗುತ್ತಿದೆ, ದೊಡ್ಡ ಮೀನುಗಳನ್ನು ರಕ್ಷಿಸಲಾಗುತ್ತಿದೆ ಎಂದು ಅವರು ಆರೋಪಿಸಿದ್ದಾರೆ. ಎಫ್‌ಐಆರ್ ದಾಖಲಿಸುವ ಮೊದಲೇ ಸಾಕ್ಷ್ಯಗಳನ್ನು ನಾಶಪಡಿಸಲು ಮತ್ತು ಯಾರನ್ನು ಉಳಿಸಬೇಕು, ಯಾರನ್ನು ಸಿಲುಕಿಸಬೇಕು ಎಂದು ನಿರ್ಧರಿಸಲು ಎಸ್‌ಐಟಿ ತನಿಖೆಯನ್ನು ಬಳಸಿಕೊಳ್ಳಲಾಗಿದೆ ಎಂದು ಅವರು ದೂರಿದ್ದಾರೆ. ಎಸ್‌ಐಟಿ ವರದಿಯನ್ನು ಮೊದಲೇ ಸಿದ್ಧಪಡಿಸಿ, ಅದಕ್ಕೆ ತಕ್ಕಂತೆ ತನಿಖೆಯನ್ನು ರೂಪಿಸಲಾಗಿದೆ ಎಂದು ಅವರು ಸಂಶಯ ವ್ಯಕ್ತಪಡಿಸಿದ್ದಾರೆ.



**ಪ್ರಕರಣದ ಹಿನ್ನೆಲೆ ಏನು?:**

ರಾಮಮಂದಿರಕ್ಕೆ ಬಂದ ಕೋಟ್ಯಂತರ ರೂಪಾಯಿ ದೇಣಿಗೆ ನಾಪತ್ತೆಯಾಗಿದೆ ಎಂಬ ವರದಿಗಳ ಹಿನ್ನೆಲೆಯಲ್ಲಿ ಜೂನ್ 7ರಂದು ಅಖಿಲೇಶ್ ಯಾದವ್ ನ್ಯಾಯಾಲಯದ ಮಧ್ಯಸ್ಥಿಕೆಗೆ ಒತ್ತಾಯಿಸಿದ್ದರು. ಇದಾದ ನಂತರ, ಶ್ರೀರಾಮ ಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್ ನೀಡಿದ ಮನವಿಯ ಮೇರೆಗೆ ಜೂನ್ 13 ರಂದು ಉತ್ತರ ಪ್ರದೇಶ ಸರ್ಕಾರವು ಎಸ್‌ಐಟಿ ರಚಿಸಿತ್ತು.

ಈ ನಡುವೆ, ವಿಶ್ವ ಹಿಂದೂ ಪರಿಷತ್ (ವಿಎಚ್‌ಪಿ) ಅಧ್ಯಕ್ಷ ಅಲೋಕ್‌ಕುಮಾರ್ ಅವರು ಸಮಾಜವಾದಿ ಪಕ್ಷ ಮತ್ತು ಕಾಂಗ್ರೆಸ್ ವಿರುದ್ಧ ವಾಗ್ದಾಳಿ ನಡೆಸಿದ್ದು, 2027ರ ಉತ್ತರ ಪ್ರದೇಶ ವಿಧಾನಸಭಾ ಚುನಾವಣೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಈ ವಿವಾದದಿಂದ ರಾಜಕೀಯ ಲಾಭ ಪಡೆಯಲು ಪ್ರಯತ್ನಿಸುತ್ತಿದ್ದಾರೆ ಎಂದು ಟೀಕಿಸಿದ್ದಾರೆ.

ಶ್ರೀರಾಮ ಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್‌ನ ಸದಸ್ಯ ಕೃಷ್ಣ ಮೋಹನ್ ಎಂಬುವವರು ನೀಡಿದ ದೂರಿನ ಮೇರೆಗೆ ಅಯೋಧ್ಯೆಯ ರಾಮ ಜನ್ಮಭೂಮಿ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ. ಉತ್ತರ ಪ್ರದೇಶ ಸರ್ಕಾರದ ನಿರ್ದೇಶನದಂತೆ ಭಾರತೀಯ ನ್ಯಾಯ ಸಂಹಿತೆಯ (ಬಿಎನ್‌ಎಸ್) ಸೆಕ್ಷನ್ 306, 316(5), 317(4), 317(5), 61 ಮತ್ತು 3(5) ರ ಅಡಿಯಲ್ಲಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ.



ಅಯೋಧ್ಯೆ ಶ್ರೀರಾಮ ಮಂದಿರದ ದೇಣಿಗೆ ಪ್ರಕರಣ;
ಪ್ರಧಾನ ಕಾರ್ಯದರ್ಶಿ ಚಂಪತ್ ರಾಯ್, ಟ್ರಸ್ಟಿ ಅನಿಲ್ ಮಿಶ್ರಾ ರಾಜೀನಾಮೆ

## ಭೂ ವ್ಯವಹಾರ ದಾಖಲೆ ಬಹಿರಂಗಕ್ಕೆ ಪ್ರಿಯಾಂಕ್ ಖರ್ಗೆ ಹಿಂದೇಟು ಹಾಕುತ್ತಿರೋದೇಕೆ..?

• ಉದಯವಾಹಿನಿ,ಬೆಂಗಳೂರು

ಭೂ ಅವ್ಯವಹಾರಕ್ಕೆ ಸಂಬಂಧಿಸಿದಂತೆ ಸಚಿವ ಪ್ರಿಯಾಂಕ್ ಖರ್ಗೆ ವಿರುದ್ಧ ಬಿಜೆಪಿ ತೀವ್ರ ವಾಗ್ದಾಳಿ ನಡೆಸಿದ್ದು, ಎಲ್ಲಾ ವಿಚಾರಗಳಲ್ಲೂ ದಾಖಲೆಗಳನ್ನು ಕೇಳುವ ಖರ್ಗೆ ಅವರು ಈಗ ತಮ ಕುಟುಂಬಕ್ಕೆ ಸಂಬಂಧಿಸಿದ ಭೂ ವ್ಯವಹಾರಗಳ ದಾಖಲೆಗಳನ್ನು ಬಹಿರಂಗಪಡಿಸಲು ಹಿಂಜರಿಯುತ್ತಿದ್ದಾರೆ ಎಂದು ಆರೋಪಿಸಿದೆ. ಬಿಜೆಪಿ, ಬೆಂಗಳೂರು, ಕಲಬುರಗಿ ಹಾಗೂ ಬನಶಂಕರಿ ಸೇರಿದಂತೆ ಹಲವು ಪ್ರದೇಶಗಳಲ್ಲಿ ಏರೋಸ್ಪೇಸ್, ರಕ್ಷಣಾ ಕ್ಷೇತ್ರ, ಪಾಲಿ ಸಂಶೋಧನೆ ಉದ್ದೇಶಗಳನ್ನು ಉಲ್ಲೇಖಿಸಿ, ಟ್ರಸ್ಟ್ ಹಲವು ಎಕರೆ ಮೌಲ್ಯಯುತ ಸರ್ಕಾರಿ ಹಾಗೂ ಕೈಗಾರಿಕಾ ಭೂಮಿಯನ್ನು ಪಡೆದುಕೊಂಡಿದೆ.

ಈ ಭೂ ಹಂಚಿಕೆಯಲ್ಲಿ ಅಕ್ರಮ ನಡೆದಿದೆ ಎಂಬ ಅನುಮಾನಗಳಿದ್ದು, ಈ ಕುರಿತು ತನಿಖೆ ನಡೆಯಬೇಕು ಎಂದು ಒತ್ತಾಯಿಸಿದೆ. ಎಲ್ಲದಕ್ಕೂ ದಾಖಲೆ ಕೇಳುವ ಪ್ರಿಯಾಂಕ್ ಖರ್ಗೆ ಅವರು ತಮ ಕುಟುಂಬದ ಭೂ ವ್ಯವಹಾರಕ್ಕೆ ಸಂಬಂಧಿಸಿದ ದಾಖಲೆಗಳನ್ನು ಸಾರ್ವಜನಿಕರ ಮುಂದೆ ಇಡಲು ಏಕೆ ಹಿಂದೇಟು ಹಾಕುತ್ತಿದ್ದಾರೆ? ಎಂದು ಪ್ರಶ್ನಿಸಿದೆ.

## ಮಲೆನಾಡಿನಲ್ಲಿ ಮುಂಗಾರು ಮುನಿಸು: ರಾಜ್ಯದ ಪ್ರಮುಖ ಜಲಾಶಯಗಳ ನೀರಿನ ಮಟ್ಟ ಕುಸಿತ!

• ಉದಯವಾಹಿನಿ, ಬೆಂಗಳೂರು

ಮಲೆನಾಡ ಹೆಬ್ಬಾಗಿಲು ಶಿವಮೊಗ್ಗ ಜಿಲ್ಲೆಯಲ್ಲಿ ಈ ಬಾರಿ ಮುಂಗಾರು ಮಳೆ ಕಾಣೆಯಾಗಿದೆ. ಜೂನ್ ಮೊದಲನೇ ವಾರದಿಂದ ಮಳೆ ಆಗಮಿಸಬೇಕಿತ್ತು. ಆದರೆ, ಜೂನ್ ಮುಗಿಯಲು ಬಂದರೂ ಸಹ ಮಳೆರಾಯ ಆಗಮನದ ಸುಳಿವಿಲ್ಲ. ಮಳೆ ನಂಬಿಕೊಂಡು ಬಿತ್ತನೆ ಮಾಡಿದ ರೈತರು ಕೈಸುಟ್ಟುಕೊಂಡಿದ್ದಾರೆ. ಜಲಾಶಯಗಳ ನೀರನ್ನು ನಂಬಿ ಕೃಷಿ ಮಾಡುವವರು ಸಹ ಈ ಬಾರಿ ಆಕಾಶ ನೋಡುವಂತಾಗಿದೆ.

ಕಳೆದ ವರ್ಷ ಮೇ ಎರಡನೇ ವಾರದಿಂದಲೇ ಪೂರ್ವ ಮುಂಗಾರು ಆಗಮಿಸಿತ್ತು. ಜೊತೆಗೆ ಮುಂಗಾರು ಸಹ ಚೆನ್ನಾಗಿ ಬಂದಿತ್ತು. ಇದರಿಂದ ಜಿಲ್ಲೆಯ ಎಲ್ಲಾ ಅಣೆಕಟ್ಟುಗಳು, ಕೆರೆ-ಕಟ್ಟೆಗಳು ತುಂಬಿದ್ದವು. ಆದರೆ, ಈ ವರ್ಷ ಜೂನ್ ಕೊನೆಯ ವಾರಕ್ಕೆ ಕಾಲಿಟ್ಟರೂ ಮುಂಗಾರು ಮಳೆ ಮಲೆನಾಡಿಗೆ ಇನ್ನೂ ಕಾಲಿಟ್ಟಿಲ್ಲ. ಮಳೆ ಮುನಿಸಿನಿಂದ ಅಣೆಕಟ್ಟೆಯಲ್ಲಿ ನೀರಿನ ಮಟ್ಟ ದಿನದಿಂದ ದಿನಕ್ಕೆ ಕುಸಿಯುತ್ತಿದೆ. ಜಿಲ್ಲೆಯಲ್ಲಿ ಪ್ರಮುಖವಾಗಿ ಮೂರು ಡ್ಯಾಂಗಳಿವೆ. ಮೂರು ಡ್ಯಾಂಗಳ ಹಾಲಿ ಸ್ಥಿತಿ ಗತಿ ಹೇಗಿದೆ. ಹಾಲಿ ನೀರಿನ ಮಟ್ಟ ಎಷ್ಟಿದೆ ಕಳೆದ ವರ್ಷ ನೀರಿನ ಮಟ್ಟ ಎಷ್ಟಿತ್ತು? ಎಂಬುದನ್ನು ಇಲ್ಲಿ ವಿವರಿಸಲಾಗಿದೆ. ಈ ಅಣೆಕಟ್ಟನ್ನು ತುಂಗಾ ನದಿಗೆ ಶಿವಮೊಗ್ಗ ತಾಲ್ಲೂಕು ಗಾಜನೂರು ಎಂಬಲ್ಲಿ ನಿರ್ಮಾಣ ಮಾಡಲಾಗಿದೆ. ಈ ಅಣೆಕಟ್ಟೆಯಿಂದ ಶಿವಮೊಗ್ಗ ತಾಲ್ಲೂಕು, ದಾವಣಗೆರೆ ಜಿಲ್ಲೆ ಹೊನ್ನಾಳಿ ತಾಲ್ಲೂಕಿನ ರೈತರಿಗೆ ನೀರು ಕೊಡಲಾಗುತ್ತಿದೆ. ತುಂಗಾ ಮೇಲ್ದಂಡೆ ಯೋಜನೆ ಮಾಡಿದ ನಂತರ ಹಾವೇರಿ ಜಿಲ್ಲೆಗೆ ನೀರು ಹರಿಸಲಾಗುತ್ತಿದೆ. ತುಂಗಾ ಅಣೆಕಟ್ಟೆ ರಾಜ್ಯದ ಅತ್ಯಂತ ಚಿಕ್ಕ ಅಣೆಕಟ್ಟೆಯಾಗಿದೆ.

## ಇನ್ನು ಮುಂದೆ ಶನಿವಾರ ಅರ್ಧದಿನ ಮಾತ್ರ ಶಾಲೆ

• ಉದಯವಾಹಿನಿ,ಬೆಂಗಳೂರು

ರಾಜ್ಯ ಸರ್ಕಾರ ಶಾಲಾ ಮಕ್ಕಳಿಗೆ ಸಂಬಂಧಿಸಿದಂತೆ ಮಹತ್ವದ ನಿರ್ಧಾರ ತೆಗೆದುಕೊಂಡಿದ್ದು, ಶನಿವಾರದ ತರಗತಿ ವೇಳಾಪಟ್ಟಿಯಲ್ಲಿ ಬದಲಾವಣೆ ಮಾಡಲಾಗಿದೆ. ಹೊಸ ನಿಯಮದ ಪ್ರಕಾರ ಇನ್ನು ಮುಂದೆ ಶನಿವಾರದಂದು ಬೆಳಿಗ್ಗೆ 8.30 ರಿಂದ ಮಧ್ಯಾಹ್ನ 12.30ರವರೆಗೆ ಮಾತ್ರ ತರಗತಿಗಳು ನಡೆಯಲಿವೆ. ಇದುವರೆಗೆ ಶನಿವಾರವೂ ಸಾಮಾನ್ಯ ದಿನಗಳಂತೆ ಪೂರ್ಣಾವಧಿ ತರಗತಿಗಳು ನಡೆಯುತ್ತಿತ್ತು. ಆದರೆ ಹೊಸ ನಿರ್ಧಾರದಿಂದಾಗಿ ವಿದ್ಯಾರ್ಥಿಗಳಿಗೆ ಶನಿವಾರ ಅರ್ಧ ದಿನ ಮಾತ್ರ ಶಾಲೆಗೆ ಹಾಜರಾಗಬೇಕಾಗುತ್ತದೆ. ಇದರಿಂದ ವಿದ್ಯಾರ್ಥಿಗಳ ಮೇಲೆ ಇರುವ ಅಧ್ಯಯನದ ಒತ್ತಡ ಸ್ವಲ್ಪ ಕಡಿಮೆಯಾಗಲಿದೆ ಎಂದು ಶಿಕ್ಷಣ ಇಲಾಖೆ ತಿಳಿಸಿದೆ. ಈ ಬದಲಾವಣೆಯ ಮುಖ್ಯ ಉದ್ದೇಶ ವಿದ್ಯಾರ್ಥಿಗಳಿಗೆ ವಿಶ್ರಾಂತಿ ಸಮಯ ನೀಡುವುದು ಹಾಗೂ ಅವರ ಮಾನಸಿಕ ಒತ್ತಡವನ್ನು ಕಡಿಮೆ ಮಾಡುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಜೊತೆಗೆ ಶಿಕ್ಷಕರಿಗೂ ಪಾಠ ಯೋಜನೆ ಮತ್ತು ಮೌಲ್ಯಮಾಪನಕ್ಕೆ ಹೆಚ್ಚುವರಿ ಸಮಯ ದೊರೆಯಲಿದೆ. ಹೊಸ ವೇಳಾಪಟ್ಟಿಯಿಂದ ವಿದ್ಯಾರ್ಥಿಗಳಿಗೆ ವಾರಾಂತ್ಯದಲ್ಲಿ ಹೆಚ್ಚು ಸಮಯ ಸಿಗಲಿದೆ. ಇದನ್ನು ಪಠ್ಯೇತರ ಚಟುವಟಿಕೆಗಳು, ಕ್ರೀಡೆ, ಓದು ಹಾಗೂ ಕುಟುಂಬದೊಂದಿಗೆ ಸಮಯ ಕಳೆಯಲು ಬಳಸಿಕೊಳ್ಳಬಹುದು ಎಂದು ಶಿಕ್ಷಣ ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ಅನೇಕ ಪೋಷಕರು ಈ ನಿರ್ಧಾರವನ್ನು ಸ್ವಾಗತಿಸಿದ್ದಾರೆ. ಮಕ್ಕಳಿಗೆ ವಿಶ್ರಾಂತಿ ಸಿಗುವುದು ಒಳ್ಳೆಯದು ಎಂದು ಹೇಳಿದರೆ, ಕೆಲವರು ಕೆಲಸದ ಪೋಷಕರಿಗೆ ಮಕ್ಕಳ ನೋಡಿಕೊಳ್ಳುವ ವ್ಯವಸ್ಥೆಯಲ್ಲಿ ಸ್ವಲ್ಪ ಬದಲಾವಣೆ ಮಾಡಬೇಕಾಗಬಹುದು ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

## ಕಾಂಗ್ರೆಸ್ ಸಂಸ್ಕೃತಿ ವಿರುದ್ಧ ಜೆಡಿಎಸ್ ನಾಯಕ ಹೆಚ್.ಎಂ.ರಮೇಶ್‌ಗೌಡ ವಾಗ್ದಾಳಿ

• ಉದಯವಾಹಿನಿ, ಬೆಂಗಳೂರು

ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಮತ್ತು ಅವರ ಕುಟುಂಬದ ಸದಸ್ಯರ ವಿರುದ್ಧ ಆಧಾರರಹಿತ ಪೋಸ್ಟರ್ ಅಭಿಯಾನ ಮುಂದುವರೆಸಿದರೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಮನೆ ಮತ್ತು ಕಾಂಗ್ರೆಸ್ ಪಕ್ಷದ ಕಚೇರಿ ಮುಂದೆಯೇ ನಾವೂ ಪೋಸ್ಟರ್‌ಗಳನ್ನು ಅಂಟಿಸಬೇಕಾಗುತ್ತದೆ ಎಂದು ಗ್ರೇಟರ್ ಬೆಂಗಳೂರು ಜೆಡಿಎಸ್ ಅಧ್ಯಕ್ಷ ಹೆಚ್.ಎಂ.ರಮೇಶ್‌ಗೌಡ ತಿಳಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಗೋಡೆಗಳ ಮೇಲೆ ಪೋಸ್ಟರ್‌ಗಳನ್ನು ಅಂಟಿಸುವುದು ಕಾಂಗ್ರೆಸ್ ಪಕ್ಷದ ನೀಚ ಸಂಸ್ಕೃತಿ ಮತ್ತು ನೈತಿಕ ಅಧಃಪತನವನ್ನು ತೋರಿಸುತ್ತದೆ. ನಮ್ಮ ಪಕ್ಷದ ಕಾರ್ಯಕರ್ತರು ಈ ಬಗ್ಗೆ ಆಕ್ರೋಶಗೊಂಡಿದ್ದಾರೆ. ನವದೆಹಲಿಗೆ ಬಂದು ರಾಜ್ಯ ಕಾಂಗ್ರೆಸ್ ನಾಯಕರ ಭ್ರಷ್ಟಾಚಾರ ಮತ್ತು ಇನ್ನಿತರೆ ಅಕ್ರಮಗಳ ಬಗ್ಗೆ ಪೋಸ್ಟರ್‌ಗಳನ್ನು ಅಂಟಿಸುತ್ತೇವೆ ಎಂದು ಬಂದಿದ್ದರು.

ಕುಮಾರಸ್ವಾಮಿ ಅವರು ಸಮಾಧಾನ ಮಾಡಿ ವಾಪಸ್ ಕಳುಹಿಸಿದರು ಎಂದು ಹೇಳಿದ್ದಾರೆ. ಸ್ವಾತಂತ್ರ್ಯಕ್ಕಾಗಿ ಹೋರಾಟ ನಡೆಸಿದ್ದೇವೆ ಎನ್ನುವ ಪಕ್ಷವೊಂದರ ಕಾರ್ಯಕರ್ತರು ಮತ್ತು ಮುಖಂಡರ ಕೆಟ್ಟ ವರ್ತನೆ ಬಗ್ಗೆ ಜನರ ಮುಂದೆ ಹೇಳೋಣ ಎಂದು ಕಾರ್ಯಕರ್ತರನ್ನು ಕೇಂದ್ರ ಸಚಿವರು ಸಮಾಧಾನಪಡಿಸಿದರು ಎಂದು ಮಾಹಿತಿ ನೀಡಿದ್ದಾರೆ.

## ಪಿಂಚಣಿ: 23.13 ಲಕ್ಷ ಮಂದಿ ಅನರ್ಹರೆಂಬ ಶಂಕೆ

• ಉದಯವಾಹಿನಿ, ಬೆಂಗಳೂರು




ರಾಜ್ಯದಲ್ಲಿ ಸಾಮಾಜಿಕ ಭದ್ರತಾ ಯೋಜನೆಯಡಿ ವಿವಿಧ ಮಾದರಿಯ ಪಿಂಚಣಿ ಪಡೆಯುತ್ತಿರುವ ಒಟ್ಟು 83,11,493 ಫಲಾನುಭವಿಗಳ ಪೈಕಿ, ಪ್ರಾಥಮಿಕ ತಪಾಸಣೆಯ ಸಂದರ್ಭದಲ್ಲಿ 23,13,664 ಫಲಾನುಭವಿಗಳ ವಿವರಗಳು ಸಂಶಯಾಸ್ಪದವಾಗಿವೆ. ಈ ಕುರಿತು ಕಂದಾಯ ಇಲಾಖೆಯ ಜಂಟಿ ನಿರ್ದೇಶಕರು ತಮ್ಮ ಪ್ರಕಟಣೆಯಲ್ಲಿ ವಿವರ ನೀಡಿದ್ದಾರೆ. ವಯಸ್ಸಿನ ದೃಢೀಕರಣದ ಕುರಿತು ತಪ್ಪು ಮತ್ತು ನಕಲಿ ದಾಖಲೆಗಳನ್ನು ನೀಡಿ ಕಾನೂನುಬಾಹಿರವಾಗಿ ಪಿಂಚಣಿ ಪಡೆಯುತ್ತಿದ್ದ 91,152 ಅನರ್ಹ ಫಲಾನುಭವಿಗಳನ್ನು ಪತ್ತೆಹಚ್ಚಿ, ಅಂಥವರ ಪಿಂಚಣಿಯನ್ನು ತಕ್ಷಣದಿಂದಲೇ ರದ್ದುಪಡಿಸಲಾಗಿದೆ ಎಂದು ಅವರು ತಿಳಿಸಿದ್ದಾರೆ.

ಸಾಮಾಜಿಕ ಭದ್ರತಾ ಯೋಜನೆಗಳಡಿ ಪಿಂಚಣಿ ಪಡೆಯುತ್ತಿರುವ ಫಲಾನುಭವಿಗಳ ಪಾರದರ್ಶಕತೆ ಮತ್ತು ಅರ್ಹತೆ ಖಚಿತಪಡಿಸಿಕೊಳ್ಳಲು ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. ಅನುಮಾನಾಸ್ಪದ ಖಾತೆಗಳನ್ನು ಸಂಯೋಜನೆ' ಮೊಬೈಲ್ ತಂತ್ರಾಂಶದ ಮೂಲಕ ಕೂಲಂಕಷವಾಗಿ ಪರಿಶೀಲಿಸಲಾಗುತ್ತಿದೆ. ಸಂಶಯಾಸ್ಪದವೆಂದು ಗುರುತಿಸಲಾಗಿದ್ದ ಖಾತೆಗಳ ಪೈಕಿ, ಗ್ರಾಮ ಆಡಳಿತಾಧಿಕಾರಿಗಳು ಸ್ಥಳದಲ್ಲೇ ಪರಿಶೀಲನೆ ನಡೆಸಿ ಅರ್ಹರೆಂದು ವರದಿ ಮಾಡಿದ 3,35,610 ಫಲಾನುಭವಿಗಳು ಸೇರಿದಂತೆ ಒಟ್ಟು 63,04,554 ಅರ್ಹ ಫಲಾನುಭವಿಗಳಿಗೆ ಇದೇ ಮೇ ತಿಂಗಳವರೆಗಿನ ಪಿಂಚಣಿಯನ್ನು ಪಾವತಿಸಲಾಗಿದೆ. ಗ್ರಾಮ ಆಡಳಿತ ಅಧಿಕಾರಿಗಳು ನಡೆಸಿದ ಪರಿಶೀಲನೆಯ ಸಂದರ್ಭದಲ್ಲಿ ಯಾವುದೇ ಅಧಿಕೃತ ದಾಖಲೆಗಳನ್ನು ಹಾಜರುಪಡಿಸಲು ವಿಫಲರಾದ, ನೀಡಿದ್ದ ವಿಳಾಸದಲ್ಲಿ ವಾಸ ಇಲ್ಲದ ಹಾಗೂ ಆದಾಯ ಪ್ರಮಾಣಪತ್ರ ಸಲ್ಲಿಸದ ಒಟ್ಟು 16,42,303 ಫಲಾನುಭವಿಗಳ ಪಿಂಚಣಿಯನ್ನು ಸದ್ಯ ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ.

ದಾಖಲೆಗಳ ಕೊರತೆಯಿಂದಾಗಿ ಪಿಂಚಣಿ ಸ್ಥಗಿತಗೊಂಡಿರುವ 16,42,303 ಫಲಾನುಭವಿಗಳಿಗೆ ಸೂಕ್ತ ತಿಳಿವಳಿಕೆ ಪತ್ರ ನೀಡಲು ಸೂಚನೆ ನೀಡಲಾಗಿದೆ.

## ಬಂಡೀಪುರ, ನಾಗರಹೊಳೆ ಸಫಾರಿ: ಪೂರ್ಣ ಪ್ರಮಾಣದಲ್ಲಿ ಆರಂಭಕ್ಕೆ ಸರ್ಕಾರದ ನಿರ್ಧಾರ

• ಉದಯವಾಹಿನಿ, ಬೆಂಗಳೂರು

ತಜ್ಞರು ಮತ್ತು ಅಧಿಕಾರಿಗಳ ತಾಂತ್ರಿಕ ಸಮಿತಿಯ ವರದಿ ಶಿಫಾರಸಿನ ಅನ್ವಯ ಬಂಡೀಪುರ ಮತ್ತು ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶಗಳಲ್ಲಿ ಪೂರ್ಣ ಪ್ರಮಾಣದಲ್ಲಿ ಜಂಗಲ್ ಸಫಾರಿ (ಉದ್ಯಾನ ಪ್ರವಾಸ) ಪುನರಾರಂಭಿಸಲು ರಾಜ್ಯ ಸರ್ಕಾರವು ನಿರ್ಧರಿಸಿದೆ. ಈ ಬಗ್ಗೆ ತಾಂತ್ರಿಕ ಸಮಿತಿಯ ವರದಿಯನ್ನು ಅಂಗೀಕರಿಸಲಾಗಿದ್ದು, ವೈಜ್ಞಾನಿಕ ಮೌಲ್ಯಮಾಪನದ ನಂತರ ಪರಿಣಾಮಕಾರಿ ಸಾಗಣೆ ಸಾಮರ್ಥ್ಯದ ಆಧಾರದ ಮೇಲೆ ಜಂಗಲ್ ಸಫಾರಿಗೆ ಹಸಿರು ನಿಶಾನೆ ನೀಡಲಾಗಿದೆ.

ಸಮಿತಿಯ ಶಿಫಾರಸಿನ ಪ್ರಕಾರ ನಿಯಂತ್ರಿತ ರೀತಿಯಲ್ಲಿ ಜಂಗಲ್ ಸಫಾರಿ ನಡೆಸಲು ಸೂಚನೆ ನೀಡಲಾಗಿದೆ. ಕರ್ನಾಟಕವು ಪರಿಸರ ಪ್ರವಾಸೋದ್ಯಮದಲ್ಲಿ ಅಪಾರ ಸಾಮರ್ಥ್ಯ ಹೊಂದಿದ್ದು, ಸದಾ ಸುಸ್ಥಿರ ಪ್ರವಾಸೋದ್ಯಮ ಮಾದರಿ ಪಾಲಿಸಿಕೊಂಡು ಬಂದಿದೆ. ಇದು ಸ್ಥಳೀಯ ಉದ್ಯೋಗ ಮತ್ತು ಜೀವನೋಪಾಯದ ಅವಕಾಶಗಳ ಸೃಷ್ಟಿಗೆ ಸಹಾಯ ಮಾಡುತ್ತದೆ ಹಾಗೂ ಸ್ಥಳೀಯ ಆರ್ಥಿಕತೆಯನ್ನು ಉತ್ತೇಜಿಸಲು ನೆರವಾಗುತ್ತದೆ. ಪರಿಸರ ವ್ಯವಸ್ಥೆಯ ಸಮಗ್ರತೆಯನ್ನು ರಕ್ಷಿಸುವ ಜೊತೆಗೆ, ಪರಿಸರ ಪ್ರವಾಸೋದ್ಯಮವು ವನ್ಯಜೀವಿ ಸಂರಕ್ಷಣೆ, ಸ್ಥಳೀಯರ ಜೀವನೋಪಾಯ ಮತ್ತು ಪ್ರವಾಸಿಗರ ಉತ್ತಮ ಅನುಭವಕ್ಕೆ ಪೂರಕವಾದ ಪರಿಸರ ಪ್ರವಾಸೋದ್ಯಮಕ್ಕೆ ಕರ್ನಾಟಕ ಸರ್ಕಾರ ಬದ್ಧವಾಗಿದೆ ಎಂದು ಸಿಎಂ ಕಚೇರಿಯ ಮಾಧ್ಯಮ ಪ್ರಕಟಣೆಯಲ್ಲಿ ತಿಳಿಸಲಾಗಿದೆ. ಮನವಿಯಲ್ಲಿ ಆಗ್ರಹಿಸಿರುವುದಾಗಿ ಹೇಳಿದರು.




# ಬಿಡದಿ ಹೋರಾಟ ಸಿಎಂ ವಿರುದ್ಧ ಅಲ್ಲ, ರೈತರ ಪರ : ಹೆಚ್.ಡಿ.ಕುಮಾರಸ್ವಾಮಿ

• ಉದಯವಾಹಿನಿ, ಬೆಂಗಳೂರು

ಬಿಡದಿ ಟೌನ್‌ಶಿಪ್ ವಿಚಾರದಲ್ಲಿ ಸಿಎಂ ಡಿ.ಕೆ.ಶಿವಕುಮಾರ್ ವಿರುದ್ಧ ಹೋರಾಟ ಮಾಡುತ್ತಿಲ್ಲ. ಯೋಜನೆ ವಿರೋಧಿ ಸುತ್ತಿರುವ ರೈತರಿಗೆ ಬೆಂಬಲ ನೀಡಲಾಗುತ್ತಿದೆ ಎಂದು ಕೇಂದ್ರದ ಬೃಹತ್ ಕೈಗಾರಿಕೆ ಹಾಗೂ ಉಕ್ಕು ಖಾತೆ ಸಚಿವ ಹೆಚ್.ಡಿ.ಕುಮಾರಸ್ವಾಮಿ ಇಂದಿಲ್ಲಿ ತಿಳಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಾಳೆ ರೈತರು ಪ್ರತಿಭಟನೆ ಮಾಡುತ್ತಿರುವ ಭೈರಮಂಗಲಕ್ಕೆ ಹೋಗುತ್ತಿದ್ದೇನೆ. ಮಧ್ಯಾಹ್ನದವರೆಗೂ ಮುಖ್ಯಮಂತ್ರಿಯವರಿಗಾಗಿ ಅಲ್ಲೇ ಕಾಯುತ್ತೇನೆ. ರೈತರೊಂದಿಗೆ ಚರ್ಚೆ ಮಾಡಿ ಮುಂದಿನ ನಿರ್ಧಾರ ಕೈಗೊಳ್ಳಲಾಗುವುದು ಎಂದರು.

ಟೌನ್‌ಶಿಪ್ ವಿಚಾರದಲ್ಲಿ ರಾಜಕೀಯ ಮಾಡುತ್ತಿಲ್ಲ. ರಾಜಕೀಯ ಉದ್ದೇಶಕ್ಕಾಗಿ ಅಭಿವೃದ್ಧಿ ತಡೆಯುವ ಉದ್ದೇಶವೂ ನನಗಿಲ್ಲ ಎಂದು ಸ್ಪಷ್ಟಪಡಿಸಿದರು. ಮುಖ್ಯಮಂತ್ರಿಯವರು ಇಂದು ವಿಧಾನಸೌಧದಲ್ಲಿ ಚರ್ಚೆಗೆ ಬನ್ನಿ ಎಂದು ಆಹ್ವಾನಿಸಿದ್ದರು. ಆದರೆ ಪೂರ್ವನಿಯೋಜಿತ ಕಾರ್ಯಕ್ರಮದಿಂದಾಗಿ ಇಂದು ಸಾಧ್ಯವಾಗುವುದಿಲ್ಲ. ಯೋಜನೆಯಿಂದ ಬಾಧಿತರಾಗಿರುವ ರೈತರ ಸಮುಖದಲ್ಲೇ ಚರ್ಚೆ ಮಾಡೋಣ ಎಂದು ಪತ್ರ ಬರೆದಿದ್ದೆ. ಆ ಪತ್ರಕ್ಕೆ ಯಾವುದೇ ಪ್ರತಿಕ್ರಿಯೆ ದೊರೆಯದ ಹಿನ್ನೆಲೆಯಲ್ಲಿ ನಿನ್ನೆ ಮತ್ತೊಂದು ಪತ್ರವನ್ನು ಬರೆಯಲಾಗಿದೆ ಎಂದರು. ಬಿಡದಿ ಟೌನ್‌ಶಿಪ್ ವಿರೋಧಿಸುತ್ತಿರುವ ರೈತರೊಂದಿಗೆ ಚರ್ಚೆ ಮಾಡುತ್ತೇನೆ. ಆ ಸಂದರ್ಭದಲ್ಲಿ ಮುಖ್ಯಮಂತ್ರಿಯೂ ಬಂದರೆ ಒಳ್ಳೆಯದು. ಟೌನ್‌ಶಿಪ್ ವಿರೋಧಿಸಿ 470 ಕ್ಕೂ ಹೆಚ್ಚು ದಿನಗಳಿಂದಲೂ ಪ್ರತಿಭಟನೆ ನಡೆಸುತ್ತಿರುವ ರೈತರ ಎದುರಿಗೆ ಕೆಲವು ರೈತರು ಭೂಮಿ ಕೊಡಲು ಸಿದ್ಧ ಎಂದು ಪ್ರತಿಯಾಗಿ ಪ್ರತಿಭಟಿಸುತ್ತಿದ್ದಾರೆ ಎಂದು ಹೇಳಿದರು. ರೈತರು ಭೂಸ್ವಾಧೀನ ಬೇಡ ಎಂದು ಹೇಳುತ್ತಿದ್ದಾರೆ. ಅವರ ಅಹವಾಲಿಗೆ ಸ್ಪಂದಿಸಿ ಬೆಂಬಲ ನೀಡಿದ್ದೇನೆ. ಈ ವಿಚಾರದಲ್ಲಿ ಯಾವುದೇ ಪ್ರತಿಷ್ಠೆ ಇಲ್ಲ. ರೈತರು ಒಪ್ಪಿದರೆ ನಮ ತಕರಾರು ಏನೂ ಇಲ್ಲ. ಧಾರಾಳವಾಗಿ ಯೋಜನೆ ಅನುಷ್ಠಾನ ಮಾಡಬಹುದು. ರೈತರನ್ನು ಹೆದರಿಸಿ, ಬೆದರಿಸಿ ಭೂಸ್ವಾಧೀನ ಮಾಡಬಾರದು. ಪ್ರೀತಿಯಿಂದ ಅವರ ಮನ ಗೆಲ್ಲಬೇಕು. ಬಹುತೇಕ ರೈತರ ವಿರೋಧವಿದ್ದಾಗ ಹಠ ಹಿಡಿದು ಏಕೆ ಟೌನ್‌ಶಿಪ್ ಅನುಷ್ಠಾನ ಮಾಡಬೇಕೆಂದು ಪ್ರಶ್ನಿಸಿದರು. ಭೈರಮಂಗಲದಲ್ಲಿ ಕಾನೂನು ಮತ್ತು ಸುವ್ಯವಸ್ಥೆಗೆ ಧಕ್ಕೆಯಾಗುವುದಾದರೆ ರೈತರನ್ನೇ ವಿಧಾನಸೌಧಕ್ಕೆ ಕರೆಸಿಕೊಳ್ಳಲಿ ಎಂದು ಶಾಸಕ ಎಚ್.ಸಿ.ಬಾಲಕೃಷ್ಣ ಅವರ ಹೇಳಿಕೆಗೆ ತಿರುಗೇಟು ನೀಡಿದರು. 2006-07ರಲ್ಲಿ ನಾನು ಮುಖ್ಯಮಂತ್ರಿಯಾಗಿದ್ದಾಗ ಸಿಎಂ ಗೃಹಕಚೇರಿ ಕೃಷ್ಣಾಗೆ 500ರಿಂದ 600 ರೈತರನ್ನು ಕರೆಸಿಕೊಂಡು 3 ಸಭೆಗಳನ್ನು ಮಾಡಿದ್ದೇನೆ. ಆ ಸಂದರ್ಭದಲ್ಲಿ ಕಾಂಗ್ರೆಸ್ ನಾಯಕರು ಟೌನ್‌ಶಿಪ್ ವಿರೋಧಿಸಿ ವಿಧಾನಸಭೆಯಲ್ಲಿ ಏನೇನು ಮಾಡಿದ್ದಾರೋ ಎಂಬ ದಾಖಲೆಗಳಿವೆ.

ಅದನ್ನೊಮ್ಮೆ ಮುಖ್ಯಮಂತ್ರಿ ನೋಡಲಿ ಎಂದು ಕುಮಾರಸ್ವಾಮಿ ತಿಳಿಸಿದರು. ನಾನು ಕೈಯಲ್ಲಿ ಕಟ್ಟಿರುವುದು ಯಾವ ವಾಚ್ ಎಂಬುದನ್ನು ನೀವೇ ನೋಡಿ. ಇದು ಅಂಬೇಡ್ಕರ್‌ರವರ ಭಾವಚಿತ್ರವಿರುವ ಎಚ್‌ಎಂಟಿ ವಾಚ್. ದುಬಾರಿ ಬೆಲೆಯ ವಾಚ್ ಆಗಿದ್ದರೆ ಅಥವಾ ಹತ್ತಾರು ವಾಚ್‌ಗಳು ನನ್ನ ಬಳಿ ಇದ್ದರೆ ಎಸ್‌ಐಟಿ ಮೂಲಕ ಚೆಕ್ ಮಾಡಿಸಿ, ವಶಪಡಿಸಿಕೊಳ್ಳಲಿ ಎಂದು ಅವರು ಇದೇ ಸಂದರ್ಭದಲ್ಲಿ ವ್ಯಂಗ್ಯವಾಡಿದರು.




**ಕಾಯ್ದೆಗೆ ವಿರುದ್ಧ**

2013ರಲ್ಲಿ ಯುಪಿಎ ಸರ್ಕಾರ ಜಾರಿಗೆ ತಂದಿರುವ ಕಾನೂನು ಮೀರಿ ಭೂಸ್ವಾಧೀನ ಮಾಡಿಕೊಳ್ಳಲಾಗುತ್ತಿದೆ. ಅದನ್ನು ರೈತರು ವಿರೋಧಿಸುತ್ತಿದ್ದು, ಅವರ ಹೋರಾಟಕ್ಕೆ ಬೆಂಬಲವಾಗಿ ನ್ಯಾಯಾಲಯದ ಮುಂದೆ ಹೋಗುವುದು ಅನಿವಾರ್ಯವಾಗುತ್ತದೆ. ರೈತರು ಗಲಾಟೆ ಮಾಡುತ್ತಾರೆಯೇ? ನಿಷೇಧಾಜ್ಞೆ ಹೇರಲು ಸರ್ಕಾರ ಮುಂದಾಗಿದೆ ಎಂದು ಆರೋಪಿಸಿದರು. 20 ಸಾವಿರ ಕೋಟಿ ರೂ. ಯೋಜನೆಯಲ್ಲಿ ಇದುವರೆಗೆ 19 ಕೋಟಿ ರೂ. ಮಾತ್ರ ಪರಿಹಾರ ನೀಡಿದ್ದಾರೆ. ಅದೂ ಸಣ್ಣ ಪ್ರಮಾಣದಲ್ಲಿ. ಬೆಳೆ ಬೆಳೆಯಲಾಗದ ಭೂಮಿಯನ್ನು ರೈತರು ಕೊಟ್ಟಿದ್ದಾರೆ. ಆದರೆ ಫಲವತ್ತಾದ ಭೂಸ್ವಾಧೀನಕ್ಕೆ ವಿರೋಧಿಸುತ್ತಿದ್ದಾರೆ. ಬೆಂಗಳೂರು ನಗರದ ಸಮಸ್ಯೆಗಳನ್ನು ಮೊದಲು ಸರಿಪಡಿಸಲಿ.

**ಈ ದಿನದ ದರ** ಪೆಟ್ರೋಲ್: 111.68 ₹/L ಡೀಸೆಲ್ : 99.56₹/L ಬಂಗಾರ: ₹ 14,275/Gram 24ct ₹13,085/Gram 22ct ಬೆಳ್ಳಿ: ₹240.00/Gram

# ಕೆಎಸ್‌ಸಿಎ ಕಾರ್ಯದರ್ಶಿ ಹುದ್ದೆಗೆ ಸಂತೋಷ್ ಮೆನನ್ ಅನರ್ಹ ಆದೇಶ; ಕಾನೂನು ಪರಿಹಾರಗಳ ಪರಿಶೀಲನೆ- ವೆಂಕಟೇಶ್ ಪ್ರಸಾದ್

• **ಉದಯವಾಹಿನಿ, ಬೆಂಗಳೂರು**

ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ (ಕೆಎಸ್‌ಸಿಎ)ಯ ಕಾರ್ಯದರ್ಶಿ ಹುದ್ದೆಯಿಂದ ಸಂತೋಷ್ ಮೆನನ್ ಅವರನ್ನು ಅನರ್ಹಗೊಳಿಸಿ ಬಿಸಿಸಿಐ ಒಂಬುಡ್ಸ್‌ಮನ್ ಮಾಡಿರುವ ಆದೇಶವನ್ನು ವಿವರವಾಗಿ ಪರಿಶೀಲನೆ ನಡೆಸುತ್ತಿದ್ದೇವೆ. ಕಾನೂನಾತ್ಮಕವಾಗಿ ಲಭ್ಯವಿರುವ ಪರಿಹಾರಗಳು ಮತ್ತು ಆಯ್ಕೆಗಳನ್ನು ಪರಿಶೀಲಿಸಲಾಗುತ್ತಿದೆ ಎಂದು ಕೆಎಸ್‌ಸಿಎ ಅಧ್ಯಕ್ಷ ವೆಂಕಟೇಶ್ ಪ್ರಸಾದ್ ತಿಳಿಸಿದರು.

9 ವರ್ಷಗಳ ಅವಧಿಯನ್ನು ಪೂರ್ಣಗೊಳಿಸಿರುವ ಸಂತೋಷ್ ಮೆನನ್ ಸದ್ಯ ಕೆಎಸ್‌ಸಿಎ ಕಾರ್ಯದರ್ಶಿ ಹುದ್ದೆಯಲ್ಲಿ ಮುಂದುವರಿಯಲು ಅನರ್ಹರಾಗಿದ್ದು, ಕೂಡಲೇ ತಮ್ಮ ಹುದ್ದೆಯನ್ನು ತೆರವುಗೊಳಿಸಬೇಕು ಎಂದು ಬಿಸಿಸಿಐ ಒಂಬುಡ್ಸ್‌ಮನ್


ಉದಯವಾಹಿನಿ ಚಿತ್ರ

ವಿಶ್ರಾಂತ ನ್ಯಾಯಮೂರ್ತಿ ಅರುಣ್ ಮಿಶ್ರಾ ಆದೇಶಿಸಿದ್ದಾರೆ. ಕೆಎಸ್‌ಸಿಎ ಸಾಂಸ್ಥಿಕ ಸದಸ್ಯತ್ವ ಹೊಂದಿರುವ ಡಾಲ್ಫಿನ್ ಕ್ರಿಕೆಟರ್ಸ್ ಸಲ್ಲಿಸಿದ್ದ ದೂರು ಪರಿಶೀಲಿಸಿದ ನಂತರ ಒಂಬುಡ್ಸ್‌ಮನ್ ಈ ಆದೇಶ ಪ್ರಕಟಿಸಿದ್ದಾರೆ.

ಸಂತೋಷ್ ಮೆನನ್ ಡಿಸೆಂಬರ್ 2013ರಿಂದ ಡಿಸೆಂಬರ್ 2019ರ ವರೆಗೆ ಕೆಎಸ್‌ಸಿಎ ಆಡಳಿತ ಮಂಡಳಿಯ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ. ಡಿಸೆಂಬರ್ 2019ರಿಂದ ನವೆಂಬರ್ 2022ರವರೆಗೆ ಮೊದಲ ಅವಧಿಗೆ ಕೆಎಸ್‌ಸಿಎ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸಿದ್ದಾರೆ.

ಡಿಸೆಂಬರ್ 7, 2025ರಂದು ನಡೆದ ಚುನಾವಣೆಯಲ್ಲಿ ಅವರು ಮತ್ತೊಮ್ಮೆ ಕೆಎಸ್‌ಸಿಎ ಕಾರ್ಯದರ್ಶಿಯಾಗಿ ಆಯ್ಕೆಯಾಗಿದ್ದರು. ಈ ಹುದ್ದೆಗೆ ಅವರು ಆಯ್ಕೆಯಾದಾಗ ಗರಿಷ್ಠ ಅವಧಿಯ ನಿಯಮ ಪೂರ್ಣಗೊಳ್ಳಲು ಕೇವಲ 9 ದಿನಗಳಷ್ಟೇ ಬಾಕಿ ಇತ್ತು ಎಂದು ಡಾಲ್ಫಿನ್ ಕ್ರಿಕೆಟರ್ಸ್ ಪರ ದೂರುದಾರರು ವಾದಿಸಿದ್ದರು.

ಸಂತೋಷ್ ಮೆನನ್ ವ್ಯವಸ್ಥಾಪಕ ಸಮಿತಿ ಸದಸ್ಯರಾಗಿ ಮತ್ತು ಪದಾಧಿಕಾರಿಯಾಗಿ 9 ವರ್ಷಗಳ ಅವಧಿ ಪೂರ್ಣಗೊಳಿಸಿದ್ದಾರೆ ಎಂಬ ದೂರುದಾರರ ವಾದವನ್ನು ಪುರಸ್ಕರಿಸಿರುವ ಒಂಬುಡ್ಸ್‌ಮನ್ ಈ ಆದೇಶ ಹೊರ ಹಾಕಿದ್ದಾರೆ.

## ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ಬರೋಬ್ಬರಿ 72 ಸಾವಿರಕ್ಕೂ ಹೆಚ್ಚು ಹುದ್ದೆಗಳ ಭರ್ತಿಗೆ ಕ್ರಮ

• **ಉದಯವಾಹಿನಿ,ಬೆಂಗಳೂರು**

ವಿವಿಧ ಇಲಾಖೆಗಳಲ್ಲಿ ರಾಜ್ಯಾದ್ಯಂತ ಖಾಲಿ ಇರುವ ಒಟ್ಟು 72,186 ಹುದ್ದೆಗಳನ್ನು ಆರು ತಿಂಗಳೊಳಗೆ ಭರ್ತಿ ಮಾಡಲು ಕರ್ನಾಟಕ ಸರ್ಕಾರ ಆದೇಶಿಸಿದೆ. ಇದರ ಉಸ್ತುವಾರಿಯನ್ನು ಉನ್ನತ ಅಧಿಕಾರಿಗಳಿಗೆ ವಹಿಸಲಾಗಿದ್ದು, ಅತ್ಯಂತ ವೇಗವಾಗಿ ಮತ್ತು ಪಾರದರ್ಶಕವಾಗಿ ನೇಮಕಾತಿ ಪ್ರಕ್ರಿಯೆಯನ್ನು ಪೂರ್ಣಗೊಳಿಸಲು ಸರ್ಕಾರ ಅಧಿಕೃತ ಆದೇಶವನ್ನು ಹೊರಡಿಸಿದೆ. ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರು ಇದರ ಸಂಪೂರ್ಣ ಉಸ್ತುವಾರಿ ಹೊಂದಿದ್ದು, ನೇಮಕಾತಿ ಪ್ರಕ್ರಿಯೆಗೆ 2-4-6 ಕಾಲಮಿತಿಯ ಸೂತ್ರದ ಗಡುವನ್ನು ವಿಧಿಸಲಾಗಿದೆ. ಕರ್ನಾಟಕ ಸರ್ಕಾರದ ವಿವಿಧ ಇಲಾಖೆಗಳ ಒಟ್ಟು 72,186 ಹುದ್ದೆಗಳಿಗೆ ನೇಮಕಾತಿ ಪ್ರಕ್ರಿಯೆಯನ್ನು ನಿಗದಿತ ಸಮಯದೊಳಗೆ ಪೂರ್ಣಗೊಳಿಸಲು ರಾಜ್ಯ ಸರ್ಕಾರ ಆದೇಶಿಸಿದೆ.

## ಆರೋಪಿ ಸಹೋದರನ ಬಂಧಿಸಿದ್ದ ಪೊಲೀಸರನ್ನು ತರಾಟೆಗೆ ತೆಗೆದುಕೊಂಡ ಹೈಕೋರ್ಟ್


ಉದಯವಾಹಿನಿ ಚಿತ್ರ

• **ಉದಯವಾಹಿನಿ, ಬೆಂಗಳೂರು**

ಮದುವೆಯಾಗುವುದಾಗಿ ನಂಬಿಸಿ ವಂಚಿಸಿದ ಪ್ರಕರಣದಲ್ಲಿ ಆರೋಪಿ ಪ್ರೊಬೇಷನರಿ ಎಸ್ಐ ಬದಲಿಗೆ ಅವರ ತಮ್ಮನನ್ನು ಬಂಧಿಸಿದ ಪೊಲೀಸರನ್ನು ತರಾಟೆಗೆ ತೆಗೆದುಕೊಂಡಿರುವ ಹೈಕೋರ್ಟ್, 'ಯೂನಿಫಾರಂ ಇದೆ ಎಂದು ಏನು ಬೇಕಾದರೂ ಮಾಡುವಿರಾ' ಎಂದು ಪ್ರಶ್ನಿಸಿ, ಕಾನೂನು ಉಲ್ಲಂಘಿಸುವ ಪೊಲೀಸರನ್ನು ಅಮಾನತುಪಡಿಸಲಾಗುವುದು ಎಂದು ಎಚ್ಚರಿಕೆ ನೀಡಿದೆ. ದಾವಣಗೆರೆಯ ನಿವಾಸಿ ಎನ್. ದರ್ಶನ್ ಎಂಬುವರು ಸಲ್ಲಿಸಿದ್ದ ಅರ್ಜಿಯ ವಿಚಾರಣೆಯನ್ನು ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ಪೀಠ ಈ ಎಚ್ಚರಿಕೆ ನೀಡಿತು. ಪ್ರಕರಣದಲ್ಲಿ ಆರೋಪಿ ತಮ್ಮನ ತಪ್ಪಿಲ್ಲದಿದ್ದರೂ ಬಂಧಿಸಿದ್ದೇಕೆ ವಿನಾಕಾರಣ ಬಂಧಿಸುವುದು ಪೊಲೀಸರಿಗೆ ಆಟವಾಗಿದೆ.

ಬಂಧಿತನ ಜೀವನದ ಮೇಲಾಗುವ ಪರಿಣಾಮದ ಅರಿವು ಪೊಲೀಸರಿಗಿದೆಯೆ. ಬಂಧನ ಅವಶ್ಯವಿರುವ ಪ್ರಕರಣದಲ್ಲಿ ಆರೋಪಿಗಳನ್ನು ಪೊಲೀಸರು ಬಂಧಿಸುವುದಿಲ್ಲ, ಬೇಡವಾದ ಪ್ರಕರಣಗಳಲ್ಲಿ ಬಂಧಿಸಿ ಅನಗತ್ಯ ಕಿರುಕುಳ ನೀಡುತ್ತಾರೆ, ಅದೇ ಅವರಿಗೆ ಚಾಳಿಯಾಗಿದೆ ಎಂದು ಹೇಳಿತು. ಪ್ರೊಬೇಷನರಿ ಎಸ್ಐ ವರುಣ್ ಕುಮಾರ್ ಸಾಮಾಜಿಕ ಜಾಲತಾಣ ಇನ್‌ಸ್ಟಾಗ್ರಾಂನಲ್ಲಿ ಮಹಿಳೆಯೊಂದಿಗೆ ಸ್ನೇಹ ಬೆಳೆಸಿದ್ದರು. ನಂತರ ಮಹಿಳೆ ಹಾಗೂ ಎಸ್ಐ ಇಬ್ಬರೂ ದೈಹಿಕ ಸಂಪರ್ಕ ಬೆಳೆಸಿದ್ದರು. ಬಳಿಕ ಮಹಿಳೆಗೆ ವಿವಾಹವಾಗಿರುವುದು ತಿಳಿದು ಎಸ್ಐ ಸಂಬಂಧ ಕಡಿತಗೊಳಿಸಿಕೊಂಡಿದ್ದರು. ಆನಂತರ ಪ್ರೊಬೇಷನರಿ ಎಸ್ಐ ವಿರುದ್ಧ ಮಹಿಳೆ ದೂರು ನೀಡಿದ್ದರು. ಆರೋಪಿ ಕುಟುಂಬಸ್ಥರ ವಿರುದ್ಧವೂ ಪೊಲೀಸರು ಎಫ್ಐಆರ್ ದಾಖಲಿಸಿದ್ದರು. ಪ್ರಕರಣದಲ್ಲಿ ಆರೋಪಿ ಸಹೋದರನನ್ನೂ ಚಿತ್ರದುರ್ಗ ಮಹಿಳಾ ಠಾಣೆ ಪೊಲೀಸರು ಬಂಧಿಸಿದ್ದರು. ಬಂಧನ ಪ್ರಶ್ನಿಸಿ ಆರೋಪಿ ಹಾಗೂ ಕುಟುಂಬಸ್ಥರು ನ್ಯಾಯಾಲಯದ ಮೊರೆ ಹೋಗಿದ್ದರು. ಕಳೆದ ವಾರ ನ್ಯಾಯಾಲಯ ಪೊಲೀಸರನ್ನು ತರಾಟೆಗೆ ತೆಗೆದುಕೊಂಡ ಕೂಡಲೇ ಆತನನ್ನು ಬಿಡುಗಡೆ ಮಾಡಲಾಗಿತ್ತು.

## ಕ್ಲೀನ್ ಆಗಿದ್ರೆ ಇಡಿಗೆ ಯಾಕೆ ಹೆದರಬೇಕು: ಪ್ರಿಯಾಂಕ್ ಖರ್ಗೆಗೆ ನಿರಾಣಿ ತಿರುಗೇಟು

• **ಉದಯವಾಹಿನಿ, ಬೆಂಗಳೂರು**


ಉದಯವಾಹಿನಿ ಚಿತ್ರ

ಕುಂಬಳಕಾಯಿ ಕಳ್ಳ ಎಂದರೆ ನೀವೇಕೆ ಹೆಗಲು ಮುಟ್ಟಿ ನೋಡಿಕೊಳ್ಳುತ್ತೀರಿ ಎಂದು ಗೃಹ ಸಚಿವ ಪ್ರಿಯಾಂಕ್ ಖರ್ಗೆ ಅವರಿಗೆ ಮಾಜಿ ಸಚಿವ ಮುರುಗೇಶ್ ನಿರಾಣಿ ತಿರುಗೇಟು ನೀಡಿದ್ದಾರೆ

ಕೇಂದ್ರ ಸರ್ಕಾರ ಕಾಂಗ್ರೆಸ್ ನಾಯಕರನ್ನು ಗುರಿಯಾಗಿಸಿ ಇಡಿ, ಐಟಿ ದಾಳಿ ನಡೆಸುತ್ತಿದೆ. ಮುಂದೆ ನಮ್ಮ ಮೇಲೂ ರೇಡ್ ಆಗಬಹುದು ಎಂದು ಪ್ರಿಯಾಂಕ್ ಖರ್ಗೆ ಕಳವಳ ವ್ಯಕ್ತಪಡಿಸಿದ್ದಕ್ಕೆ ನಿರಾಣಿ ಪ್ರತಿಕ್ರಿಯಿಸಿದರು. ಇಡಿ ಯಾರ ಕೈಗೊಂಬೆಯೂ ಅಲ್ಲ, ಅದು ಸ್ವತಂತ್ರವಾಗಿ ಕೆಲಸ ಮಾಡುವ ಸಂಸ್ಥೆ. ಸಾಕಷ್ಟು ಪುರಾವೆ ಹಾಗೂ ಪ್ರೂಫ್ ಸಿಕ್ಕ ಬಳಿಕವೇ ಅಧಿಕಾರಿಗಳು ದಾಳಿ ನಡೆಸುತ್ತಾರೆ. ಸೂಕ್ತ ಸಾಕ್ಷ್ಯಗಳಿಲ್ಲದೆ ಯಾರ ಮನೆಗೂ ಇಡಿ ಹೋಗುವುದಿಲ್ಲ. ಪ್ರಿಯಾಂಕ್ ಖರ್ಗೆ ಅವರು ಯಾವುದೇ ತಪ್ಪು ಮಾಡದೆ ಕ್ಲೀನ್ ಆಗಿದ್ದರೆ ಯಾಕೆ ಹೆದರಬೇಕು ಎಂದು ಪ್ರಶ್ನಿಸಿದರು. ಪ್ರಿಯಾಂಕ್ ಖರ್ಗೆ ಅವರಿಗೆ ರಾಜಕಾರಣದಲ್ಲಿ ಉಜ್ವಲ ಭವಿಷ್ಯವಿದೆ. ಅವರ ತಂದೆ ಮಲ್ಲಿಕಾರ್ಜುನ ಖರ್ಗೆ ದೇಶದ ದೊಡ್ಡ ಸ್ಥಾನದಲ್ಲಿದ್ದಾರೆ, ಅವರಿಗೊಂದು ಜವಾಬ್ದಾರಿ ಇದೆ. ಅದನ್ನು ಅರಿತು ಕಲ್ಯಾಣ ಕರ್ನಾಟಕದ ಅಭಿವೃದ್ಧಿ, ಕೈಗಾರಿಕೆ, ಕೃಷಿ ಹಾಗೂ ಶಿಕ್ಷಣದ ಕಡೆಗೆ ಪ್ರಿಯಾಂಕ್ ಗಮನ ಹರಿಸಲಿ ಎಂದರು. ಪ್ರಿಯಾಂಕ್ ಖರ್ಗೆ ಅವರನ್ನು 'ಪೇಪರ್ ಹುಲಿ' ಎಂದು ಟೀಕಿಸಿದ ನಿರಾಣಿ ದಿನಾ ಟಿವಿ, ಪೇಪರ್‌ಗಳಲ್ಲಿ ನೆಗೆಟಿವ್ ಸುದ್ದಿಗಳು ಬಂದಾಗಲೇ ಅವರು ಕಾಣಿಸಿಕೊಳ್ಳುತ್ತಾರೆ.

## ತೆರಿಗೆ ಸೋರಿಕೆ ತಡೆಗೆ ಕಟ್ಟುನಿಟ್ಟಿನ ಕ್ರಮ

• **ಉದಯವಾಹಿನಿ, ಬೆಂಗಳೂರು**

ತೆರಿಗೆ ಸೋರಿಕೆಯನ್ನು ಸಂಪೂರ್ಣವಾಗಿ ತಡೆಯುವ ನಿಟ್ಟಿನಲ್ಲಿ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು. ಇದರಲ್ಲಿ ಯಾವುದೇ ರೀತಿಯ ರಾಜಿ ಅಥವಾ ನಿರ್ಲಕ್ಷ್ಯಕ್ಕೆ ಅವಕಾಶವಿರಬಾರದು. ಹಾಗೆಯೇ ಪ್ರಾಮಾಣಿಕ ತೆರಿಗೆದಾರರಿಗೆ ಯಾವುದೇ ರೀತಿಯ ತೊಂದರೆ ಆಗಬಾರದು. ಅವರನ್ನು ಸುಲಿಗೆ ಮಾಡಬಾರದು ಎಂದು ಅಧಿಕಾರಿಗಳಿಗೆ ಸಿಎಂ ಡಿ.ಕೆ.ಶಿವಕುಮಾರ್ ಸೂಚನೆ ನೀಡಿದರು. ವಿಧಾನಸೌಧದಲ್ಲಿ ಶುಕ್ರವಾರ ನಡೆದ ವಾಣಿಜ್ಯ ಇಲಾಖೆಯ ಪ್ರಗತಿ ಪರಿಶೀಲನೆ ಸಭೆಯಲ್ಲಿ ಅಧಿಕಾರಿಗಳಿಗೆ ಮುಖ್ಯಮಂತ್ರಿಗಳು ಹಲವು ಸ್ಪಷ್ಟ ಸೂಚನೆಗಳನ್ನು ನೀಡಿದರು.

ಆರ್ಥಿಕ ಇಲಾಖೆ ಅಧಿಕಾರಿಗಳು, ಆರ್ಥಿಕ ಸಲಹೆಗಾರರಾದ ಎಲ್.ಕೆ. ಅತೀಕ್ ಅವರು ಹಾಗೂ ಆರ್ಥಿಕ ಇಲಾಖೆ ಅಪರ ಮುಖ್ಯ ಕಾರ್ಯದರ್ಶಿ ರಿತೇಶ್ ಕುಮಾರ್ ಅವರು ಇಲಾಖೆಯ ಕಾರ್ಯಕ್ಷಮತೆ ಹೆಚ್ಚಿಸಲು ಹಲವು ಸಲಹೆಗಳನ್ನು ನೀಡಿದ್ದಾರೆ. ಅವುಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸುವ ಜವಾಬ್ದಾರಿ ಈಗ ನಿಮ್ಮೆಲ್ಲರ ಮೇಲಿದೆ. ಯಾವುದೇ ಸರಕು ಸಾಗಣೆ ವಾಹನವು ಅಗತ್ಯ ದಾಖಲೆಗಳಿಲ್ಲದೆ ಚೆಕ್‌ಪೋಸ್ಟ್ ಅಥವಾ ರಾಜ್ಯದ ಗಡಿಯನ್ನು ದಾಟಬಾರದು.

ತೆರಿಗೆ ಸೋರಿಕೆಗೆ ಯಾವುದೇ ಅವಕಾಶ ಇರಬಾರದು. ಇದರಲ್ಲಿ ಯಾವುದೇ ರೀತಿಯ ರಾಜಿ ಅಥವಾ ನಿರ್ಲಕ್ಷ್ಯಕ್ಕೆ ಅವಕಾಶವಿಲ್ಲ ಎಂದು ಸೂಚಿಸಿದರು. ನಾನು ಎಲ್ಲವನ್ನೂ ಗಮನಿಸುತ್ತಿದ್ದೇನೆ ಎಂದರು.

# ರೈತರನ್ನು ಒಕ್ಕಲೆಬ್ಬಿಸಿ ಟೌನ್‌ಶಿಪ್ ನಿರ್ಮಿಸುವುದರಲ್ಲಿ ಯಾವುದೇ ಅರ್ಥವಿಲ್ಲ: ಡಿಸಿಎಂ ಪರಮೇಶ್ವರ್

## ನಮ್ಮ ಸರ್ಕಾರ ಬರುವಾಗ 2.5 ಲಕ್ಷ ಹುದ್ದೆಗಳು ಖಾಲಿ ಇವೆ

• **ಉದಯವಾಹಿನಿ,ಬೆಂಗಳೂರು**

ಬಿಡದಿಯಲ್ಲಿ ಟೌನ್‌ಶಿಪ್ ನಿರ್ಮಾಣಕ್ಕೆ ರೈತರನ್ನು ಒಕ್ಕಲೆಬ್ಬಿಸುವ ಕೆಲಸ ಮಾಡುವುದಿಲ್ಲ. ಒತ್ತಾಯಪೂರ್ವಕವಾಗಿ ರೈತರ ವಿರುದ್ಧವಾಗಿ ಟೌನ್‌ಶಿಪ್ ಕಟ್ಟುವುದರಲ್ಲಿ ಯಾವುದೇ ಅರ್ಥವಿಲ್ಲ. ಹೀಗಾಗಿ, ಅವರನ್ನು ವಿಶ್ವಾಸಕ್ಕೆ ತೆಗೆದುಕೊಂಡೇ, ಅವರು ಒಪ್ಪಿಗೆ ಸೂಚಿಸಿದ ಬಳಿಕವೇ ಜಮೀನು ಪಡೆದು ಟೌನ್‌ಶಿಪ್ ಮಾಡಲು ಈಗಾಗಲೇ ಮುಖ್ಯಮಂತ್ರಿಗಳು ಸೂಚಿಸಿದ್ದಾರೆ ಎಂದು ಉಪಮುಖ್ಯಮಂತ್ರಿ ಡಾ.ಜಿ.ಪರಮೇಶ್ವರ್ ಸ್ಪಷ್ಟಪಡಿಸಿದರು.

ಸದಾಶಿವನಗರದಲ್ಲಿರುವ ತಮ್ಮ ನಿವಾಸದಲ್ಲಿ ಮಾಧ್ಯಮಗಳೊಂದಿಗೆ ಅವರು ಮಾತನಾಡಿದರು. ಟೌನ್‌ಶಿಪ್ ವಿಚಾರದಲ್ಲಿ ರೈತರ ಸಹಮತಿ ಪಡೆದುಕೊಂಡು ಮುಂದೆ ಸಾಗುತ್ತೇವೆಯೇ ಹೊರತು, ಅವರನ್ನು ಒಕ್ಕಲೆಬ್ಬಿಸಿ ಟೌನ್‌ಶಿಪ್ ಮಾಡುವುದಿಲ್ಲ. ಒಂದು ವೇಳೆ ರೈತರಿಗೆ ಕೊಡುವ ಪರಿಹಾರ ಸಾಕಾಗುತ್ತಿಲ್ಲ ಎಂದು ಅನಿಸಿದರೆ ಹೆಚ್ಚಿಸುವ ಸಾಧ್ಯತೆಯಿದೆ. ಒಟ್ಟಾರೆ ಯಾವುದೇ ಗೊಂದಲ ಇಲ್ಲದೆ ಟೌನ್‌ಶಿಪ್ ಮಾಡಬೇಕು ಎನ್ನುವುದು ನಮ್ಮ ಉದ್ದೇಶ ಎಂದರು. ಎಐ ಹಬ್‌ಗಳಿಗೆ ಹೆಚ್ಚಿನ ನೀರಿನ ಅಗತ್ಯವಿರುವ ಹಿನ್ನೆಲೆಯಲ್ಲಿ ಬಿಡದಿ ಪ್ರದೇಶದ ನೀರಿನ ಲಭ್ಯತೆಯನ್ನು ಮುಂದಿನ 40 ವರ್ಷಗಳ ದೃಷ್ಟಿಯಿಂದ ಸರ್ಕಾರ ಬಳಸಿಕೊಳ್ಳುತ್ತಿದೆಯೇ ಎಂಬ ಪ್ರಶ್ನೆಗೆ, ಎಐ ಸೆಂಟರ್ ಮಾಡುವುದಕ್ಕೆ ಯಾವುದೆಲ್ಲ ಮಾನದಂಡಗಳಿವೆ ಎಂಬುದರ ಸ್ಪಷ್ಟ ಮಾಹಿತಿ ಯಾರಿಗೂ ಗೊತ್ತಿಲ್ಲ. ಈಗ ಅದನ್ನು ನಾವು ಬೇರೆ ಬೇರೆ ಕಡೆ ಪತ್ತೆ ಮಾಡುತ್ತಿದ್ದೇವೆ. ಇದು ಎಐ ಹಬ್‌ಗಾಗಿ ಮಾಡುತ್ತಿರುವಂಥದ್ದಲ್ಲ. ಬೆಂಗಳೂರಿನ ಮೇಲೆ ಸಂಚಾರದಟ್ಟಣೆ ಸೇರಿದಂತೆ ಅನೇಕ ಒತ್ತಡವಿದೆ. ನೈಸ್ ಪ್ರಾಜೆಕ್ಟ್ ಮಾಡಿದ ಸಂದರ್ಭದಲ್ಲಿ 7 ಟೌನ್‌ಶಿಪ್ ಮಾಡಬೇಕು ಎಂಬ ಪ್ರಸ್ತಾವನೆ ಬಂದಿತ್ತು. ಇದರ ಉದ್ದೇಶ ಬೆಂಗಳೂರಿನ ಮೇಲಿರುವ ಒತ್ತಡ ಕಡಿಮೆಮಾಡಬೇಕು ಎನ್ನುವುದಾಗಿತ್ತು. ಪಕ್ಕದಲ್ಲಿರುವ ಕೋಲಾರ, ತುಮಕೂರು, ರಾಮನಗರ ಪಟ್ಟಣವನ್ನು ಅಭಿವೃದ್ಧಿ ಮಾಡಿದರೆ


ಉದಯವಾಹಿನಿ ಚಿತ್ರ

ಬೆಂಗಳೂರಿನ ಮೇಲಿರುವ ಒತ್ತಡ ಕಡಿಮೆಯಾಗಲಿದೆ ಎನ್ನುವುದು ನಮ್ಮ ಉದ್ದೇಶ. ಈ ಕಾರಣಗಳಿಂದ ಬಿಡದಿ ಟೌನ್‌ಶಿಪ್ ಆದರೆ ಸ್ವಲ್ಪ ಸುಧಾರಿಸಬಹುದು ಎಂದು ಅವರು ವಿವರಿಸಿದರು.

72 ಸಾವಿರ ಹುದ್ದೆಗಳ ಭರ್ತಿ ಕುರಿತಂತೆ ಪ್ರತಿಕ್ರಿಯಿಸಿದ ಸಚಿವರು, ನಾವು ಪ್ರಣಾಳಿಕೆಯಲ್ಲಿ ನಮ್ಮ ಸರ್ಕಾರ ಬರುವಾಗ 2.5 ಲಕ್ಷ ಹುದ್ದೆಗಳು ಖಾಲಿ ಇವೆ, ಹಂತ ಹಂತವಾಗಿ ಅವುಗಳನ್ನು ತುಂಬುತ್ತೇವೆ ಎಂದು ಹೇಳಿದ್ದೆವು. ಅನೇಕ ಕಾರಣಗಳಿಂದ ಅದು ವಿಳಂಬವಾಯಿತು. ಒಳಮೀಸಲಾತಿ ವಿಚಾರ ಬಗೆಹರಿಯದೆ ಇದ್ದದ್ದು ಸಮಸ್ಯೆಯಾಗಿ ಪರಿಣಮಿಸಿತ್ತು. ಹೀಗಾಗಿ, ಒಳಮೀಸಲಾತಿ ಕುರಿತು ನ್ಯಾಯಮೂರ್ತಿ ನಾಗಮೋಹನ್‌ದಾಸ್ ಅವರ ಸಮಿತಿಯ ವರದಿ ಆಧಾರದ ಮೇಲೆ ಕೂಲಂಕಷವಾಗಿ ಪರಿಶೀಲನೆ ಮಾಡಿ ಒಳಮೀಸಲಾತಿ ಸಮಸ್ಯೆಯನ್ನು ಬಗೆಹರಿಸಲಾಯಿತು. ಬಳಿಕ ಬಜೆಟ್‌ನಲ್ಲಿಯೇ 56,942 ಹುದ್ದೆಗಳನ್ನು ನೇಮಕಾತಿ ಮಾಡುತ್ತೇವೆ ಎಂದು ತಿಳಿಸಿದ್ದೆವು ಎಂದರು. ಈ ಪ್ರಕ್ರಿಯೆಯ ವೇಳೆ 24 ಸಾವಿರ ಹುದ್ದೆಗಳಿಗೆ ಹಣಕಾಸು ಇಲಾಖೆ ಅನುಮತಿ ನೀಡಿತ್ತು. ಎಲ್ಲಾ ಇಲಾಖೆಗಳಿಗೆ ನೋಟಿಫಿಕೇಷನ್ ಮಾಡಿ ಎಂದು ನಾವು ತಿಳಿಸಿದ್ದೆವು. ಈ ಮಧ್ಯೆ, ಸರ್ಕಾರದಲ್ಲಿ ಮುಖ್ಯಮಂತ್ರಿಗಳ ಬದಲಾವಣೆಯಾದ ನಂತರ ಅದನ್ನು ಪುನರ್‌ಪರಿಶೀಲನೆ ಮಾಡಿ ಈಗ 72 ಸಾವಿರ ಹುದ್ದೆಗಳನ್ನು ತುಂಬಬೇಕು ಎಂದು ತೀರ್ಮಾನಿಸಲಾಗಿದೆ. ಈ ಬಗ್ಗೆ ಕಂದಾಯ ಇಲಾಖೆ ಸೇರಿದಂತೆ ವಿವಿಧ ಇಲಾಖೆಗಳಿಗೆ ನೋಟಿಫಿಕೇಷನ್ ಮಾಡಲು ಅಧಿಕಾರಿಗಳಿಗೆ ಸೂಚನೆಯನ್ನು ನೀಡಲಾಗಿದೆ ಎಂದು ಮಾಹಿತಿ ನೀಡಿದರು.

ಅದೇ ರೀತಿ ಶಿಕ್ಷಕರು, ವೈದ್ಯರು, ನರ್ಸ್‌ಗಳು, ಇಂಜಿನಿಯರ್‌ಗಳೂ ಸೇರಿದಂತೆ ಎಲ್ಲಾ ಇಲಾಖೆಗಳಿಗೆ ತಡಮಾಡದಂತೆ ತಿಳಿಸಬೇಕೆಂದು ಇತ್ತೀಚೆಗೆ ನಡೆದ ಕ್ಯಾಬಿನೆಟ್‌ನಲ್ಲಿ ಚರ್ಚಿಸಲಾಗಿದೆ. ಅದಕ್ಕಾಗಿ ಮುಖ್ಯಮಂತ್ರಿಗಳು ಇಬ್ಬರು ಅಧಿಕಾರಿಗಳಾದ ಉಮಾ ಮಹದೇವನ್ ಮತ್ತು ಗೌರವ್ ಗುಪ್ತಾ ಅವರನ್ನು ಮೇಲುಸ್ತುವಾರಿಗಾಗಿ ನೇಮಿಸಿದ್ದಾರೆ ಎಂದು ತಿಳಿಸಿದರು.

### ಭೈರಮಂಗಲದಲ್ಲಿ ಸಿಎಂಗಾಗಿ ಕಾಯ್ತೇನೆ

**ಬಿಡದಿಯ ರೈತರ ಹಿತಾಸಕ್ತಿಯ ಬಗ್ಗೆ ಚರ್ಚಿಸಲು ನಾನು ನಾಳೆ ಭೈರಮಂಗಲದಲ್ಲಿ ಮುಖ್ಯಮಂತ್ರಿಯವರಿಗೆ ಕಾಯುತ್ತೇನೆ. ಅವರು ಸ್ಥಳಕ್ಕೆ ಬಂದರೆ ಸಮಸ್ಯೆಯ ಬಗ್ಗೆ ಚರ್ಚೆ ನಡೆಸುತ್ತೇನೆ ಎಂದು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಹೇಳಿದರು.ಮಾಧ್ಯಮದೊಂದಿಗೆ ಮಾತನಾಡಿದ ಅವರು, ಸಿಎಂ ಜತೆ ಪತ್ರ ಸಮರ ಅಂತೇನಿಲ್ಲ. ವಿಧಾನಸೌಧಕ್ಕೆ ಬರುವಂತೆ ಅವರು ಪತ್ರ ಬರೆದಿದ್ದರು. ವಿಧಾನಸೌಧ ಬೇಡ, ಭೈರಮಂಗಲದಲ್ಲಿ ನೊಂದ ರೈತರ ಸಮ್ಮುಖದಲ್ಲಿಯೇ ಚರ್ಚೆ ನಡೆಯುವುದು ಸೂಕ್ತ ಎಂದು ಪತ್ರದಲ್ಲಿ ತಿಳಿಸಿದ್ದೆ. ಅಲ್ಲದೆ, ಜೂನ್ 27ರಂದು, ಅಂದರೆ ಶನಿವಾರ ಬಿಡದಿಯ ಭೈರಮಂಗಲದಲ್ಲಿ ಬಹಿರಂಗ ಚರ್ಚೆಗೆ ಬರುತ್ತೇನೆ ಎಂದು ಹೇಳಿದ್ದೆ. ಅದರಂತೆ ಬುಧವಾರ ಭೈರಮಂಗಲಕ್ಕೆ ತೆರಳಿ ಮುಖ್ಯಮಂತ್ರಿಗಳಾಗಿ ಕಾಯುತ್ತೇನೆ.**

# ಕೆಪಿಟಿಸಿಎಲ್‌ನಿಂದ ವಿದ್ಯುತ್ ಪ್ರಸರಣ ಮಾರ್ಗಗಳ ತಪಾಸಣೆಗೆ ಅತ್ಯಾಧುನಿಕ ಡ್ರೋನ್ ತಂತ್ರಜ್ಞಾನ ಬಳಕೆ

• **ಉದಯವಾಹಿನಿ, ಬೆಂಗಳೂರು**

ಹೈ-ವೋಲ್ಟೇಜ್ ಮತ್ತು ಎಕ್ಸ್ಟ್ರೀಮ್ ಹೈ-ವೋಲ್ಟೇಜ್ ವಿದ್ಯುತ್ ಪ್ರಸರಣ ಮಾರ್ಗಗಳ ತಪಾಸಣೆಯಲ್ಲಿ ಸಿಬ್ಬಂದಿ ವರ್ಗದ ಸುರಕ್ಷತೆಯನ್ನು ಹೆಚ್ಚಿಸುವ ಹಾಗೂ ನಿಖರತೆಯನ್ನು ಕಾಯ್ದುಕೊಳ್ಳುವ ನಿಟ್ಟಿನಲ್ಲಿ, ಅತ್ಯಾಧುನಿಕ ಡ್ರೋನ್ ತಂತ್ರಜ್ಞಾನ ಅಳವಡಿಸಿಕೊಂಡಿರುವ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ (ಕೆಪಿಟಿಸಿಎಲ್) 11 ಸಾವಿರಕ್ಕೂ ಹೆಚ್ಚು ಟವರ್‌ಗಳನ್ನು ತಪಾಸಣೆ ನಡೆಸಿದೆ. ಒಂದೂವರೆ ಲಕ್ಷಕ್ಕೂ ಹೆಚ್ಚು ತಾಂತ್ರಿಕ ಸಮಸ್ಯೆಗಳನ್ನು ಗುರುತಿಸಿ ಅದನ್ನು ಸರಿಪಡಿಸಿದೆ. ಈ ಮೂಲಕ ಶೇ. 85 ರಷ್ಟು ವಿದ್ಯುತ್ ವ್ಯತ್ಯಯ ಕಡಿಮೆ ಮಾಡಲಾಗಿದೆ.

ಈ ಮೂಲಕ ಡಿಜಿಟಲ್ ತಂತ್ರಜ್ಞಾನದ ಅಳವಡಿಕೆಯಲ್ಲಿ ಕೆಪಿಟಿಸಿಎಲ್


ಉದಯವಾಹಿನಿ ಚಿತ್ರ

ಮತ್ತೊಂದು ಮೈಲಿಗಲ್ಲು ಸಾಧಿಸಿದೆ. ರಾಜ್ಯಾದ್ಯಂತ ಇರುವ ಹೈ-ವೋಲ್ಟೇಜ್ ಮತ್ತು ಅತಿ - ಹೆಚ್ಚಿನ ವೋಲ್ಟೇಜ್ ವಿದ್ಯುತ್ ಪ್ರಸರಣ ಮಾರ್ಗಗಳ ತಪಾಸಣೆ ಮತ್ತು ನಿರ್ವಹಣೆಗಾಗಿ ಈ ತಂತ್ರಜ್ಞಾನವನ್ನು ಬಳಸಲಾಗುತ್ತಿದೆ. ಈ ವಿಶೇಷ ಡ್ರೋನ್‌ಗಳು ಹೈ-ರೆಸಲ್ಯೂಷನ್ ಕ್ಯಾಮೆರಾಗಳು, ಥರ್ಮಲ್ ಇಮೇಜಿಂಗ್ (ಉಷ್ಣತೆ ಅಳೆಯುವ ತಂತ್ರಜ್ಞಾನ) ಮತ್ತು ಲಿಡಾರ್ ಸೆನ್ಸಾರ್‌ಗಳನ್ನು ಹೊಂದಿವೆ. ದಟ್ಟವಾದ ಅರಣ್ಯಗಳು, ಗುಡ್ಡಗಾಡು ಪ್ರದೇಶಗಳು ಹಾಗೂ ಜನನಿಬಿಡ ನಗರ ಪ್ರದೇಶಗಳಲ್ಲಿ ಹಾದು ಹೋಗಿರುವ ಪ್ರಸರಣ ಟವರ್‌ಗಳು, ವಾಹಕಗಳು ಮತ್ತು ಇನ್ಸುಲೇಟರ್‌ಗಳನ್ನು ಅತಿ ಸಮೀಪದಿಂದ ಹಾಗೂ ನಿಖರವಾಗಿ ತಪಾಸಣೆ ಮಾಡಲು ಈ ಡ್ರೋನ್‌ಗಳು ನೆರವಾಗಿವೆ. ವಿದ್ಯುತ್ ತಂತಿಗಳು ಅಥವಾ ಉಪಕರಣಗಳಲ್ಲಿ ಸಡಿಲವಾದ ಸಂಪರ್ಕದಿಂದ ಉಂಟಾಗುವ ವಿಪರೀತ ಶಾಖ ಅಥವಾ ಹಾಟ್‌ಸ್ಪಾಟ್'ಗಳನ್ನು ಥರ್ಮಲ್ ಕ್ಯಾಮೆರಾಗಳು ತಕ್ಷಣವೇ ಪತ್ತೆಹಚ್ಚುತ್ತವೆ. ಡ್ರೋನ್‌ನಿಂದ ಸಂಗ್ರಹಿಸಲಾದ ಈ ದತ್ತಾಂಶವು ಕೆಪಿಟಿಸಿಎಲ್‌ನ ಇಂಜಿನಿಯರ್‌ಗಳಿಗೆ ಲಭ್ಯವಾಗುತ್ತಿದೆ. ಅಲ್ಲದೇ, ಮುಂಬರುವ ಡಿಜಿಟಲ್ ಟ್ವಿನ್ ಪ್ಲಾಟ್‌ಫಾರ್ಮ್‌ನೊಂದಿಗೆ ಸಂಯೋಜನೆಗೊಳ್ಳಲಿದ್ದು, ನೂತನ ಇಂಧನ ಭವನದ ನಿಯಂತ್ರಣ ಕೊಠಡಿಯಿಂದಲೇ ಸಂಪೂರ್ಣ ಜಾಲದ ಮೇಲ್ವಿಚಾರಣೆ ನಡೆಸಲು ಅನುವು ಮಾಡಿಕೊಟ್ಟಿವೆ.

ಈ ಅತ್ಯಾಧುನಿಕ ತಂತ್ರಜ್ಞಾನದ ಬಳಕೆಯು ಕೇವಲ ದೋಷಗಳನ್ನು ಪತ್ತೆಹಚ್ಚುವುದಕ್ಕೆ ಸೀಮಿತವಾಗಿಲ್ಲ ಬದಲಾಗಿ ನಿರ್ಧಾರ ಕೈಗೊಳ್ಳುವ ಪ್ರಕ್ರಿಯೆಯನ್ನು ಸಂಪೂರ್ಣವಾಗಿ ಡಿಜಿಟಲೀಕರಣಗೊಳಿಸಿದೆ. ಡ್ರೋನ್ ತಪಾಸಣೆಯ ಕಾರ್ಯಾಚರಣೆಯು ಮೂಲಸೌಕರ್ಯ ನಿರ್ವಹಣೆಯಲ್ಲಿ ಹೊಸ ದಾಖಲೆಗಳನ್ನು ಬರೆದಿದೆ.

## ಶಾಲೆಗೆ ಮಕ್ಕಳನ್ನು ಕರೆದೊಯ್ಯುತ್ತಿದ್ದ ಓಮ್ನಿ ಕಾರಿನ ಹಿಂಬದಿ ಡೋರ್ ಓಪನ್: ರಸ್ತೆಗೆ ಬಿದ್ದ ಮಕ್ಕಳು

• **ಉದಯವಾಹಿನಿ, ಮಹದೇವಪುರ**

ಚಲಿಸುತ್ತಿದ್ದ ಕಾರಿನ ಹಿಂಬಾಗಿಲು ಏಕಾಏಕಿ ತೆರೆದುಕೊಂಡಿದ್ದರಿಂದ ಐವರು ಶಾಲಾ ಮಕ್ಕಳು ರಸ್ತೆಗೆ ಬಿದ್ದಿರುವ ಘಟನೆ ಸಂಭವಿಸಿದೆ.

ಕೆ.ಆರ್.ಪುರಂನ ಗಾಯತ್ರಿ ಲೇಔಟ್‌ನಲ್ಲಿ ಮಧ್ಯಾಹ್ನ ಈ ಘಟನೆ ಸಂಭವಿಸಿದೆ. ಶಾಲಾ ಮಕ್ಕಳನ್ನ ಕರೆದೊಯ್ಯುತ್ತಿದ್ದ ಓಮ್ನಿ ವಾಹನ ರಸ್ತೆ ಗುಂಡಿಗೆ ಇಳಿದಾಗ ಅದರ ಹಿಂಬಾಗಿಲು ಏಕಾಏಕಿ ತೆರೆದುಕೊಂಡಿದೆ.

ಪರಿಣಾಮ ಹಿಂಬದಿ ಒತ್ತೊತ್ತಾಗಿ ಕುಳಿತಿದ್ದ ಐವರು ಮಕ್ಕಳು ರಸ್ತೆಯ ಮೇಲೆ ಬಿದ್ದಿದ್ದಾರೆ. ಅದೃಷ್ಟವಶಾತ್, ಇತರ ವಾಹನಗಳ ಸಂಚಾರ ಕಡಿಮೆ ಇದ್ದಿದ್ದರಿಂದ ಅನಾಹುತವೊಂದು ತಪ್ಪಿದೆ. ಬಾಗಿಲು ತೆರೆದುಕೊಳ್ಳುತ್ತಿದ್ದಂತೆ ಮಕ್ಕಳು ರಸ್ತೆಗೆ ಬಿದ್ದಿರುವ ದೃಶ್ಯ ಸ್ಥಳೀಯ ಸಿಸಿಟಿವಿಯಲ್ಲಿ ಸೆರೆಯಾಗಿದೆ. ಘಟನೆಯಲ್ಲಿ ನೆಲಕ್ಕೆ ಬಿದ್ದ ಮಕ್ಕಳಿಗೆ ಸಣ್ಣ - ಪುಟ್ಟ ಗಾಯಗಳಾಗಿವೆ.

ಸಾಮರ್ಥ್ಯಕ್ಕಿಂತಲೂ ಮೀರಿ ಶಾಲಾ ಮಕ್ಕಳನ್ನ ಕರೆದೊಯ್ಯುವುದು ಹಾಗೂ ಸೂಕ್ತ ನಿರ್ವಹಣೆಯಿಲ್ಲದ ವಾಹನಗಳನ್ನ ಬಳಸುವುದು ಎಷ್ಟು ಸರಿ ಎಂದು ಸಾರ್ವಜನಿಕ ವಲಯದಲ್ಲಿ ಆಕ್ರೋಶಕ್ಕೆ ಕಾರಣವಾಗುತ್ತಿದೆ.

ಶಾಲಾ ಮಕ್ಕಳನ್ನ ಡ್ರಾಪ್ ಮಾಡುವಾಗ ಈ ಅವಘಡ ಸಂಭವಿಸಿದೆ ಎಂದು ತಿಳಿದು ಬಂದಿದೆ. ವಾಹನ ಚಲಿಸುತ್ತಿದ್ದಾಗ ಏಕಾಏಕಿ ಹಿಂದಿನ ಬಾಗಿಲು ಓಪನ್ ಆಗಿದೆ. ಕಾರನ್ನ ಪತ್ತೆ ಹಚ್ಚಿ ಜಪ್ತಿ ಮಾಡಲಾಗಿದೆ. ಕಾರಿನ ಮಾಲೀಕನಿಗೆ ನೋಟಿಸ್ ನೀಡಿ ವಿಚಾರಣೆ


ಉದಯವಾಹಿನಿ ಚಿತ್ರ

ನಡೆಸಲಾಗುವುದು ಎಂದು ಕೆ.ಆರ್.ಪುರಂ ಸಂಚಾರ ಠಾಣೆ ಪೊಲೀಸರು ತಿಳಿಸಿದ್ದಾರೆ.

### ಮಾರುತಿ ವ್ಯಾನ್ ಪತ್ತೆ ಹಚ್ಚಿದ ಪೊಲೀಸರು

**ಸ್ಕೂಲ್ ವ್ಯಾನ್ ಡೋರ್ ಓಪನ್ ಆಗಿ ಮಕ್ಕಳು ಬಿದ್ದ ವಿಡಿಯೋ ವೈರಲ್ ಆಗ್ತಿದ್ದಂತೆ ಕೆ ಆರ್ ಪುರ ಸಂಚಾರ ಪೊಲೀಸರು ಅಲರ್ಟ್ ಆಗಿದ್ದು, ಮಾರುತಿ ವ್ಯಾನ್ ಪತ್ತೆ ಹಚ್ಚಿದ್ದಾರೆ. ನಿನ್ನೆ ಮಧ್ಯಾಹ್ನ ಮಕ್ಕಳನ್ನ ಡ್ರಾಪ್ ಮಾಡುವ ವೇಳೆ ಅವಘಡ ಸಂಭವಿಸಿದೆ ಎಂದು ತಿಳಿದು ಬಂದಿದೆ. ವಾಹನ ಚಲಿಸುತ್ತಿದ್ದ ವೇಳೆ ಏಕಾಏಕಿ ಡೋರ್ ಓಪನ್ ಆಗಿದೆ.ಕೆ.ಆರ್ ಪುರ ಟ್ರಾಫಿಕ್ ಪೊಲೀಸರು ಮಾರುತಿ ವ್ಯಾನ್ ಸೀಜ್ ಮಾಡಿದ್ದು, ಇತ್ತ ಮಾರುತಿ ವ್ಯಾನ್ ಮಾಲೀಕನಿಗೆ ನೋಟಿಸ್ ನೀಡಲು ಪೊಲೀಸರು ಸಿದ್ದತೆ ನಡೆಸಿದ್ದಾರೆ. ಖಾಸಗಿ ಶಾಲೆಗೆ ಮಕ್ಕಳನ್ನ ಕರೆದೊಯ್ಯುವ ಮಾರುತಿ ವ್ಯಾನ್ ಇದಾಗಿದ್ದು, ಗಾಯತ್ರಿ ಲೇಔಟ್‌ನಲ್ಲಿ ದಿಢೀರ್ ಡೋರ್ ಓಪನ್ ಆಗಿ ಅವಘಡ ಸಂಭವಿಸಿದೆ.**

## ಬೆಂಗಳೂರು ತ್ರಿವಳಿ ಕೊಲೆ ಪ್ರಕರಣ: ತಲೆತಪ್ಪಿಸಿಕೊಂಡಿದ್ದ ಕೆನತ್ ಬಂಧಿಸಿದ ಪೊಲೀಸರು

• **ಉದಯವಾಹಿನಿ, ಬೆಂಗಳೂರು**

ಬೆಂಗಳೂರಿನಲ್ಲಿ ಮೂವರನ್ನು ಕೊಂದು ತಲೆತಪ್ಪಿಸಿಕೊಂಡಿದ್ದ ಆರೋಪಿಯನ್ನು ಪುದುಚೇರಿಯಲ್ಲಿ ಬಂಧಿಸುವಲ್ಲಿ ತಮಿಳುನಾಡು ಹಾಗೂ ಬೆಂಗಳೂರು ಪೊಲೀಸರು ಯಶಸ್ವಿಯಾಗಿದ್ದಾರೆ. ಪ್ರಿಯಕರನೊಂದಿಗೆ ಸೇರಿ ತಂದೆ, ತಾಯಿ, ತಂಗಿಯನ್ನು ಹತ್ಯೆ ಮಾಡಿದ ಪ್ರಕರಣದಲ್ಲಿ ಪ್ರಮುಖ ಆರೋಪಿತೆಯನ್ನು ಈಗಾಗಲೇ ಬಂಧಿಸಿದ್ದು, ಹೆಚ್ಚಿನ ವಿಚಾರಣೆಗಾಗಿ ಪೊಲೀಸರು 7 ದಿನಗಳ ವಶಕ್ಕೆ ಪಡೆದಿದ್ದಾರೆ.

ಈ ನಡುವೆ, ಕೊಲೆ ಬಳಿಕ ತಪ್ಪಿಸಿಕೊಂಡು ಓಡಾಡುತ್ತಿದ್ದ ಪ್ರಿಯಕರನನ್ನು ಪುದುಚೇರಿಯಲ್ಲಿ ಪೊಲೀಸರು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ. ಸೋಮಸುಂದರಂ (55) ಮತ್ತು ಅವರ ಪತ್ನಿ ಮುತ್ತುಲಕ್ಷ್ಮಿ (48) ಬೆಂಗಳೂರಿನ ಕೆ.ಆರ್.ಪುರಂ ಪ್ರದೇಶದ ನಿವಾಸಿಗಳಾಗಿದ್ದರು. ಅವರಿಗೆ ಶ್ವೇತಾ (24) ಮತ್ತು ಸುಪ್ರಿಯಾ (20) ಎಂಬ ಇಬ್ಬರು ಹೆಣ್ಣು ಮಕ್ಕಳಿದ್ದರು. ಶ್ವೇತಾ ಹೊರತುಪಡಿಸಿ, ಕುಟುಂಬದ ಇತರ ಮೂವರು ಸದಸ್ಯರನ್ನು 22 ರ ರಾತ್ರಿ ಸೀಗೆಹಳ್ಳಿಯ


ಉದಯವಾಹಿನಿ ಚಿತ್ರ

ಅಪಾರ್ಟ್‌ಮೆಂಟ್‌ನಲ್ಲಿ ಬರ್ಬರವಾಗಿ ಹತ್ಯೆ ಮಾಡಲಾಗಿತ್ತು.

ಮುತ್ತುಲಕ್ಷ್ಮಿ ಮತ್ತು ಸುಪ್ರಿಯಾ ಸ್ಥಳದಲ್ಲೇ ಸಾವನ್ನಪ್ಪಿದರೆ, ಸೋಮಸುಂದರಂ ತೀವ್ರವಾಗಿ ಗಾಯಗೊಂಡು ಜೀವನ್ಮರಣ ಹೋರಾಟ ನಡೆಸುತ್ತಿದ್ದರು ನೆರೆಹೊರೆಯವರು ಅವರನ್ನು ರಕ್ಷಿಸಿ ಆಸ್ಪತ್ರೆಗೆ ದಾಖಲಿಸಿದರು.

ಆದರೆ ಅವರು ಚಿಕಿತ್ಸೆ ಫಲಿಸದೇ ಸಾವನ್ನಪ್ಪಿದ್ದರು. ತ್ರಿವಳಿ ಕೊಲೆ ಪ್ರಕರಣದ ಪ್ರಮುಖ ಆರೋಪಿಗಳಾದ ಶ್ವೇತಾ ಮತ್ತು ಕೆನತ್ ಅವರ ಬಂಧನಕ್ಕಾಗಿ ಪೊಲೀಸರು ವಿಶೇಷ ತಂಡವನ್ನು ರಚಿಸಿದ್ದರು. ಜೂನ್ 23 ರಂದು ಪುದುಚೇರಿ ರೈಲ್ವೆ ನಿಲ್ದಾಣದ ಬಳಿ ಶ್ವೇತಾಳನ್ನು ಬಂಧಿಸಲಾಗಿತ್ತು. ಆದರೆ ಪ್ರಿಯಕರ ಕೆನತ್ ಪೊಲೀಸರಿಗೆ ಸಿಕ್ಕಿರಲಿಲ್ಲ. ಆದರೆ ಆತನನ್ನು ಫಿಬಂಧಿಸಲಾಗಿದೆ. ಕೆನತ್‌ನನ್ನು ಪತ್ತೆಹಚ್ಚಲು ಪುದುಚೇರಿ ಮತ್ತು ಕರ್ನಾಟಕದ ಪೊಲೀಸರು ಆರು ವಿಶೇಷ ತಂಡಗಳನ್ನು ರಚಿಸಿದ್ದರು. ನಿನ್ನೆ ರಾತ್ರಿ, ರಾತ್ರಿ 10 ಗಂಟೆ ಸುಮಾರಿಗೆ, ಪುದುಚೇರಿಯ ಅಣ್ಣಾ ಸಲೈ ಪ್ರದೇಶದಲ್ಲಿ ಕೆನತ್ ಅಡಗಿಕೊಂಡಿದ್ದಾನೆ ಎಂಬ ಮಾಹಿತಿ ಸಿಕ್ಕಿತ್ತು. ಈ ಸುಳಿವು ಪಡೆದ ಓರ್ಲಿಯನ್‌ಪೇಟೆ ಪೊಲೀಸರು ನಿಕಟ ಕಣ್ಗಾವಲು ಇಟ್ಟಿದ್ದರು.

ಕೆನ್ನೆತ್ ಕೊಲೆ ಮಾಡಿಲ್ಲ ಎಂದು ಶ್ವೇತಾ ಹೇಳಿದ್ದರೂ ಸೋಮಸುಂದರಂ ಸಾಯುವ ಕೆಲವೇ ನಿಮಿಷಗಳ ಮೊದಲು ಪೊಲೀಸರಿಗೆ ನೀಡಿದ ಹೇಳಿಕೆ ಪ್ರಕರಣದಲ್ಲಿ ಪ್ರಮುಖ ತಿರುವು ನೀಡಿದೆ.

ಆ ಹೇಳಿಕೆಯಲ್ಲಿ, ನಮ್ಮನ್ನು ಇರಿದವರು ಕೆನತ್ ಎಂದು ಅವರು ಸ್ಪಷ್ಟವಾಗಿ ಉಲ್ಲೇಖಿಸಿದ್ದಾರೆ. ಇದು ಪೊಲೀಸರ ತನಿಖೆಗೆ ಮಹತ್ವದ ಸುಳಿವು ನೀಡಿದೆ. ಇದೇ ಹೇಳಿಕೆ ಆಧಾರದ ಮೇಲೆ ಪೊಲೀಸರು ಕೆನತ್ ನನ್ನು ಬಂಧಿಸಿದ್ದಾರೆ ಎಂದು ತಿಳಿದು ಬಂದಿದೆ.

## ರಾಜ್ಯದ 97 ಕ್ಷೇತ್ರ ಗುರಿಯಾಗಿಸಿ ಎಸ್‌ಐಆರ್ ನಡೆಸುತ್ತಿರುವ ಬಿಜೆಪಿ: ಎಂ.ಬಿ. ಪಾಟೀಲ

• **ಉದಯವಾಹಿನಿ, ಕೆ.ಆರ್.ಪುರ**

ಎಸ್‌ಐಆರ್ (ಮತದಾರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ) ಪ್ರಕ್ರಿಯೆಯಲ್ಲಿ ಬಬಲೇಶ್ವರ, ವಿಜಯಪುರ ನಗರ ಸೇರಿದಂತೆ ರಾಜ್ಯದ 97 ವಿಧಾನಸಭಾ ಕ್ಷೇತ್ರಗಳನ್ನು ಬಿಜೆಪಿ ಗುರಿಯಾಗಿಸಿಕೊಂಡಿದೆ ಎಂದು ಬೃಹತ್ ಹಾಗೂ ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವ ಎಂ.ಬಿ. ಪಾಟೀಲ ಆರೋಪಿಸಿದರು.

ಶುಕ್ರವಾರ ಕಾಂಗ್ರೆಸ್ ಬಿ.ಎಲ್.ಎ 2ಗಳಿಗೆ ಏರ್ಪಡಿಸಿದ್ದ ಎಸ್‌ಐಆರ್ ಕುರಿತು ತರಬೇತಿ ಶಿಬಿರವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಬಿಜೆಪಿ ಅನೇಕ ರಾಜ್ಯಗಳಲ್ಲಿ ಎಸ್‌ಐಆರ್ ಮೂಲಕ ಕಾಂಗ್ರೆಸ್ ಮತದಾರರನ್ನು ತೆಗೆದುಹಾಕುವ ಕೆಲಸ ಮಾಡಿದೆ. ಅದೇ ರೀತಿ ನಮ್ಮ ರಾಜ್ಯದಲ್ಲೂ ಎಸ್‌ಐಆರ್ ಪ್ರಕ್ರಿಯೆ ವೇಳೆ ಮತದಾರ ಪಟ್ಟಿಯಿಂದ ಹೆಸರು ತೆಗೆದುಹಾಕುವ ಷಡ್ಯಂತ್ರ ನಡೆಸಿದೆ ಎಂದು ದೂರಿದರು. ಎಸ್‌ಐಆರ್ ಪ್ರಕ್ರಿಯೆ ವೇಳೆ ಕೈಬಿಟ್ಟು ಹೋಗುವ ಮತದಾರರಿಗೆ ಮುಂದಿನ ದಿನಗಳಲ್ಲಿ ಗ್ಯಾರಂಟಿ ಯೋಜನೆಗಳು, ಪಡಿತರ ಆಹಾರ, ಸಾಮಾಜಿಕ ಪಿಂಚಣಿ ಯೋಜನೆಗಳು ಸಹ ಕೈತಪ್ಪಿ ಹೋಗಲಿವೆ ಎಂದು ಆತಂಕ ವ್ಯಕ್ತಪಡಿಸಿದರು.

# ನಮ್ಮ ಮೆಟ್ರೋದಲ್ಲಿ ಪದೇ ಪದೆ ತಾಂತ್ರಿಕ ದೋಷ, ಸೇವಾ ಸ್ಥಗಿತ

• **ಉದಯವಾಹಿನಿ, ಬೆಂಗಳೂರು**

ಜನವರಿ 2024 ರಿಂದೀಚೆಗೆ, ಬೆಂಗಳೂರು ಮೆಟ್ರೋ ಜಾಲದಾದ್ಯಂತ ಸುಮಾರು 20 ತಾಂತ್ರಿಕ ದೋಷಗಳು ಮತ್ತು ಸೇವಾ ವ್ಯತ್ಯಯಗಳು ವರದಿಯಾಗಿದ್ದು, ನೇರಳೆ ಮಾರ್ಗದಲ್ಲಿ ಅತ್ಯಧಿಕ ಘಟನೆಗಳು ನಡೆದಿವೆ ಎಂದು ಅಸಮಾಧಾನ ವ್ಯಕ್ತಪಡಿಸಿರುವ ಸಂಸದ ತೇಜಸ್ವಿ ಸೂರ್ಯ ಅವರು ರೈಲ್ವೆ ಸುರಕ್ಷತಾ ಆಯುಕ್ತರಿಗೆ ಪತ್ರ ಬರೆದಿದ್ದಾರೆ.

**ರೈಲ್ವೆ ಸುರಕ್ಷತಾ ಆಯುಕ್ತರಿಗೆ ಪತ್ರ:** 23 ಜೂನ್ 2026 ರಂದು ಬಿಎಂಆರ್‌ಸಿಎಲ್ ಸಂಸ್ಥೆಯಲ್ಲಿ ಸಂಭವಿಸಿದ ತಾಂತ್ರಿಕ ವೈಫಲ್ಯದ ಕಡೆಗೆ ನಿಮ್ಮ ಗಮನ ಸೆಳೆಯಲು ನಾನು ಈ ಪತ್ರವನ್ನು ಬರೆಯುತ್ತಿದ್ದೇನೆ. ವರದಿಗಳ ಪ್ರಕಾರ, ಕರೆಂಟ್ ಕಲೆಕ್ಟರ್ ಡಿವೈಸ್‌ನಲ್ಲಿ ಉಂಟಾದ ದೋಷದಿಂದಾಗಿ ಈ ಘಟನೆ ಸಂಭವಿಸಿದೆ. ಈ ಘಟನೆಯು ನಗರದ ಸಂಚಾರ ವ್ಯವಸ್ಥೆಯನ್ನು ಸಂಪೂರ್ಣವಾಗಿ ಸ್ತಬ್ಧಗೊಳಿಸಿತು ಮತ್ತು ಸಾವಿರಾರು ಪ್ರಯಾಣಿಕರು ವಿವಿಧ ಮೆಟ್ರೋ ನಿಲ್ದಾಣಗಳಲ್ಲಿ ಸಿಲುಕಿಕೊಳ್ಳುವಂತೆ ಮಾಡಿತು.

ಇದು ಬಿಎಂಆರ್‌ಸಿಎಲ್‌ನ ಕಾರ್ಯಾಚರಣೆಯ ಸನ್ನದ್ಧತೆ, ನಿರ್ವಹಣೆಯ ಗುಣಮಟ್ಟ ಮತ್ತು ಒಟ್ಟಾರೆ ವಿಶ್ವಾಸಾರ್ಹತೆಯ ಬಗ್ಗೆ ಗಂಭೀರ ಕಳವಳವನ್ನು ಉಂಟುಮಾಡುತ್ತದೆ ಎಂದು ವಿವರಿಸಿದ್ದಾರೆ. ಜನವರಿ 2024 ರಿಂದೀಚೆಗೆ, ಬೆಂಗಳೂರು

### ರೈಲ್ವೆ ಸುರಕ್ಷತಾ ಆಯುಕ್ತರಿಗೆ ಸಂಸದ ತೇಜಸ್ವಿ ಸೂರ್ಯ ಪತ್ರ


ಉದಯವಾಹಿನಿ ಚಿತ್ರ

ಮೆಟ್ರೋ ಜಾಲದಾದ್ಯಂತ ತಾಂತ್ರಿಕ ದೋಷಗಳು ಮತ್ತು ಸೇವಾ ವ್ಯತ್ಯಯಗಳಿಗೆ ಸಂಬಂಧಿಸಿದ ಸುಮಾರು 20 ಘಟನೆಗಳು ವರದಿಯಾಗಿದ್ದು, ಇವುಗಳಲ್ಲಿ ಪರ್ಪಲ್ ಲೈನ್ (ನೇರಳೆ ಮಾರ್ಗ) ಅತ್ಯಧಿಕ ಸಂಖ್ಯೆಯ ಸೇವೆ ಸ್ಥಗಿತಗಳನ್ನು ಕಂಡಿದೆ. ಪದೇ ಪದೆ ಸಂಭವಿಸುತ್ತಿರುವ ಟಿಕೆಟಿಂಗ್ ವೈಫಲ್ಯಗಳು, ಸಿಗ್ನಲಿಂಗ್ ದೋಷಗಳು ಮತ್ತು ಹಳಿಗಳ ಲೋಪದೋಷಗಳು ಇವು ಕೇವಲ ಪ್ರತ್ಯೇಕ ಘಟನೆಗಳಲ್ಲ, ಬದಲಿಗೆ ಇಡೀ ವ್ಯವಸ್ಥೆಯಲ್ಲಿರುವ ನ್ಯೂನತೆಗಳನ್ನು ಎತ್ತಿ ತೋರಿಸುತ್ತವೆ. ಈ ವೈಫಲ್ಯಗಳು ಪ್ರಯಾಣಿಕರು ಅರ್ಧದಲ್ಲೇ ಸಿಲುಕಿಕೊಳ್ಳಲು, ಪೀಕ್ ಅವರ್‌ಗಳಲ್ಲಿ (ದಟ್ಟಣೆಯ ಸಮಯದಲ್ಲಿ) ಗೊಂದಲ ನಿರ್ಮಾಣವಾಗಲು, ಅತಿಯಾದ ಜನದಟ್ಟಣೆ ಉಂಟಾಗಲು ಮತ್ತು ಮೆಟ್ರೋವನ್ನೇ ನಂಬಿ ಬದುಕುತ್ತಿರುವ ಸಾವಿರಾರು ದೈನಂದಿನ ಪ್ರಯಾಣಿಕರ ಜೀವನಕ್ಕೆ ಭಾರಿ ಅಡಚಣೆಯನ್ನು ಉಂಟುಮಾಡಲು ಕಾರಣವಾಗಿವೆ ಎಂದು ವಿವರಿಸಿದ್ದಾರೆ. ಈ ಹಿನ್ನೆಲೆಯಲ್ಲಿ, ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಬೇಕೆಂದು ಮತ್ತು ತನ್ನ ಮೆಟ್ರೋ ಕಾರ್ಯಾಚರಣೆಗಳ ಸಮಗ್ರ ಸುರಕ್ಷತೆ ಹಾಗೂ ನಿರ್ವಹಣಾ ತಪಾಸಣೆಯನ್ನು ಕೈಗೊಳ್ಳುವಂತೆ ಬಿಎಂಆರ್‌ಸಿಎಲ್‌ಗೆ ನಿರ್ದೇಶನ ನೀಡಬೇಕೆಂದು ನಾನು ಆಯೋಗವನ್ನು ವಿನಂತಿಸುತ್ತೇನೆ.

### ಸಚಿವ ಕೃಷ್ಣ ಬೈರೇಗೌಡರಿಗೆ ಮನವಿ

**ಸಚಿವ ಕೃಷ್ಣ ಬೈರೇಗೌಡರಿಗೆ ಪತ್ರ ಬರೆದಿರುವ ಸಂಸದ ತೇಜಸ್ವಿ ಸೂರ್ಯ, ಕೆಲ ಪ್ರಶ್ನೆಗಳನ್ನು ಕೇಳಿದ್ದಾರೆ. ಥರ್ಡ್ ರೈಲ್ (ಮೂರನೇ ಹಳಿ) ಜೋಡಣೆಯನ್ನು ಸುರಕ್ಷಿವವಾಗಿರಿಸುವ ಬೋಲ್ಟ್‌ಗಳು, ಫಾಸ್ಟೆನರ್‌ಗಳು ಮತ್ತು ಇತರ ಘಟಕಗಳು ಸೇರಿದಂತೆ, ಥರ್ಡ್ ರೈಲು ಮೂಲಸೌಕರ್ಯದ ತಪಾಸಣೆಗೆ ನಿಗದಿಪಡಿಸಲಾದ ಕಾಲಮಿತಿ ಏನು ಎಂದು ಕೇಳಿದ್ದಾರೆ. ಬಾಧಿತ ಮಾರ್ಗದಲ್ಲಿ ಕೊನೆಯ ಬಾರಿಗೆ ತಪಾಸಣೆ ನಡೆಸಿದ್ದು ಯಾವಾಗ ಮತ್ತು ಆ ತಪಾಸಣೆಯ ಸಂಶೋಧನೆಗಳು (ಫಲಿತಾಂಶಗಳು) ಏನಾಗಿದ್ದವು?. ಈ ತಪಾಸಣೆಯನ್ನು ಬಿಎಂಆರ್‌ಸಿಎಲ್ ಸಿಬ್ಬಂದಿ ನಡೆಸಿದ್ದರೇ ಅಥವಾ ಮೂರನೇ ವ್ಯಕ್ತಿಯ (ಹೊರಗುತ್ತಿಗೆ) ಏಜೆನ್ಸಿಗೆ ವಹಿಸಲಾಗಿತ್ತೇ ಹೊರಗುತ್ತಿಗೆ ನೀಡಲಾಗಿದ್ದರೆ, ಆ ಏಜೆನ್ಸಿಯ ವಿವರಗಳು ಮತ್ತು ಕಾರ್ಯಾಚರಣೆಯ ವ್ಯಾಪ್ತಿಯನ್ನು ದಯವಿಟ್ಟು ಒದಗಿಸಿ ಎಂದು ಮನವಿ ಮಾಡಿದ್ದಾರೆ.**

ಅಂತರಾಳದಿಂದ.. EDITORIAL

# ಇವರಿಗೆ ಏಕೆ ಈ ವಿಶೇಷ ಸೌಲಭ್ಯ ?



ರಾಷ್ಟ್ರಪತಿಗಳು, ಪ್ರಧಾನ ಮಂತ್ರಿಗಳು, ರಾಜ್ಯಗಳ ರಾಜ್ಯಪಾಲರು ಮತ್ತು ಮುಖ್ಯಮಂತ್ರಿಗಳು ಸೇರಿದಂತೆ ಹಲವರನ್ನು ಅತಿಗಣ್ಯ ವ್ಯಕ್ತಿಗಳೆಂದು ಕರೆಯಲಾಗುತ್ತದೆ. ಇಂತಹ ಅತಿಗಣ್ಯ ವ್ಯಕ್ತಿಗಳು ಸರಕಾರದಿಂದ ಉಳಿದವರಿಗಿಲ್ಲದ ವಿಶೇಷ ಸೌಲಭ್ಯಗಳನ್ನು ಪಡೆಯುತ್ತಾರೆ. ಅನೂಚಾನವಾಗಿ ನಡೆದು ಕೊಂಡು ಬಂದ ಸಂಪ್ರದಾಯದಂತೆ ಈ ಅತಿಗಣ್ಯರು ತಮ್ಮ ಬಂಗಲೆಗಳಿಂದ ಹೊರಗೆ ಹೊರಟರೆ ಅವರ ಮತ್ತು ಅವರ ಬೆಂಗಾವಲು ವಾಹನಗಳಿಗೆ ಅನುಕೂಲ ಮಾಡಿಕೊಡುವುದಕ್ಕಾಗಿ ಜೀರೋ ಟ್ರಾಫಿಕ್ ಸೌಕರ್ಯ ಕಲ್ಪಿಸಲಾಗುತ್ತದೆ. ಇವರು ಹೊರಟ ದಾರಿಯಲ್ಲಿ ಬೇರಾವ ವಾಹನ ಸಂಚರಿಸಲು ಅವಕಾಶ ಇಲ್ಲ. ಉಳಿದ ಸಾರ್ವಜನಿಕರ ವಾಹನಗಳು ನಿಂತಲ್ಲೇ ನಿಲ್ಲಬೇಕಾಗುತ್ತದೆ. ಆಸ್ಪತ್ರೆ, ಶಾಲೆ-ಕಾಲೇಜುಗಳು ಸೇರಿದಂತೆ ಎಲ್ಲ ಕಡೆ ತುರ್ತಾಗಿ ಹೋಗಬೇಕಾದವರು ಯಾತನೆಯನ್ನು ಅನುಭವಿಸುತ್ತಾ ನಡು ರಸ್ತೆಯಲ್ಲೇ ನಿಲ್ಲಬೇಕಾಗುತ್ತದೆ.

ಈ ಅಧ್ವಾನಕ್ಕೆ ಇತ್ತೀಚಿನ ಉದಾಹರಣೆ ಅಂದರೆ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಮತ್ತು ಅವರ ಬೆಂಗಾವಲು ವಾಹನಗಳ ಸಂಚಾರಕ್ಕೆ ಯಾವುದೇ ಅಡ್ಡಿ ಉಂಟಾಗಬಾರದೆಂದು ಬೆಂಗಳೂರಿನ ಹಳೆಯ ವಿಮಾನ ನಿಲ್ದಾಣ ರಸ್ತೆಯಲ್ಲಿ ಇತರ ವಾಹನಗಳ ಸಂಚಾರಕ್ಕೆ ಅವಕಾಶ ನೀಡದೆ ಸ್ಥಗಿತಗೊಳಿಸಿರುವುದರ ಪರಿಣಾಮವಾಗಿ ತೊಂದರೆಗೆ ಒಳಗಾದ ವ್ಯಕ್ತಿಯೊಬ್ಬರು ನಡುರಸ್ತೆಯಲ್ಲಿ ಕುಳಿತು ಪ್ರತಿಭಟನೆ ನಡೆಸಿದರು.

## ಅಧಿಕೃತ ಸರಕಾರಿ ಕಾರ್ಯಕ್ರಮಕ್ಕಾಗಿ ಸಂಚರಿಸುತ್ತಿರಲಿಲ್ಲ

ಕೇವಲ ಕೆಲವು ಅತಿ ಗಣ್ಯರ ಸುಗಮ ಸಂಚಾರಕ್ಕಾಗಿ ಸಾವಿರಾರು ಜನಸಾಮಾನ್ಯರಿಗೆ ತೊಂದರೆ ಉಂಟು ಮಾಡುವುದು ಸರಿಯಲ್ಲ. ವಾಸ್ತವವಾಗಿ ರಾಜ್ಯಪಾಲರು ವೈದ್ಯಕೀಯ ತುರ್ತು ಕರೆ, ಪ್ರಾಕೃತಿಕ ವಿಕೋಪ ಅಥವಾ ಅಧಿಕೃತ ಸರಕಾರಿ ಕಾರ್ಯಕ್ರಮಕ್ಕಾಗಿ ಸಂಚರಿಸುತ್ತಿರಲಿಲ್ಲ. ಸದರಿ ವಿಮಾನ ನಿಲ್ದಾಣದಲ್ಲಿ ಇಳಿದು ಎಂದಿನಂತೆ ಲೋಕ ಭವನಕ್ಕೆ ತೆರಳುತ್ತಿದ್ದರು.

ವಾಸ್ತವ ಸಂಗತಿ ಇದಾಗಿದ್ದರೂ ಜನಸಾಮಾನ್ಯರು ರಸ್ತೆಯಲ್ಲಿ ತುಂಬಾ ಹೊತ್ತು ಕಾದು ನಿಲ್ಲಬೇಕಾಯಿತು. ರಾಜ್ಯಪಾಲರ ಸುರಕ್ಷತೆಗೆ ಬೆದರಿಕೆಯೇನೂ ಬಂದಿರಲಿಲ್ಲ. ಅವರಿಗೆ ಲಭ್ಯವಾದ ಭದ್ರತಾ ಸೌಕರ್ಯ ಅವರು ಅನುಭವಿಸುತ್ತಿರುವ ಹುದ್ದೆಯ ಕಾರಣದಿಂದಾಗಿ ದೊರಕಿದೆ.

ಇದು ಬಹುತೇಕ ಎಲ್ಲರ ಗಮನವನ್ನು ಸೆಳೆಯಿತು. ತನ್ನ ಪತ್ನಿ ಗರ್ಭಿಣಿ, ಆಕೆಗೆ ತೊಂದರೆಯಾಗುತ್ತಿದೆ ಎಂದು ರಸ್ತೆಯಲ್ಲಿ ಪ್ರತಿಭಟನೆಯನ್ನು ನಡೆಸಿದ ಆ ವ್ಯಕ್ತಿ ಹೇಳಿದರು. ಆದರೆ ಇದು ಸತ್ಯವಲ್ಲ ಎಂದು ಪೊಲೀಸರು ನಂತರ ಹೇಳಿದರು. ಆದರೆ ಆತ ಏನೇ ಹೇಳಿರಲಿ ಈ ಘಟನೆಗೆ ಜನರಿಂದ ಬಂದ ಪ್ರತಿಕ್ರಿಯೆಯನ್ನು ತಳ್ಳಿ ಹಾಕಲು ಆಗುವುದಿಲ್ಲ. ಅದು ವ್ಯಕ್ತಿಯ ಕಾರಣಕ್ಕಾಗಿ ನೀಡಲಾದ ಭದ್ರತೆ ಅಲ್ಲ. ಅದಕ್ಕಾಗಿ ಉಳಿದವರ ವಾಹನಗಳನ್ನು ತಡೆದು ನಿಲ್ಲಿಸಿ ಜನಸಾಮಾನ್ಯರಿಗೆ ತೊಂದರೆ ಕೊಡಬಾರದಿತ್ತು. ಇದು ರಾಜ್ಯಪಾಲರಿಗೆ ಸಂಬಂಧಿಸಿದ ವಿಷಯ ಮಾತ್ರವಲ್ಲ ಸರಕಾರದ ಅತಿಗಣ್ಯ ವ್ಯಕ್ತಿಗಳು ಎಲ್ಲಿಯೇ ಪ್ರವಾಸ ಮಾಡಲಿ ಅವರು ಸಂಚರಿಸುವ ರಸ್ತೆಗಳಲ್ಲಿ ಇತರ ನಾಗರಿಕರು ಸಂಚರಿಸದಂತೆ ನಿರ್ಬಂಧ ಹೇರುವುದು, ಆ ರಸ್ತೆಯನ್ನು ಸಂಪರ್ಕಿಸುವ ಇತರ ರಸ್ತೆಗಳನ್ನು ಸ್ಥಗಿತಗೊಳಿಸುವುದು ಸರಿಯಲ್ಲ. ಬೆಂಗಳೂರಿನ ಕೆಂಪೇಗೌಡ ಅಂತರ್‌ರಾಷ್ಟ್ರೀಯ ವಿಮಾನ ನಿಲ್ದಾಣದ ಕಡೆ ಸಾಗುವ ರಸ್ತೆಗಳನ್ನು ಬಂದ್ ಮಾಡುವುದರ ಪರಿಣಾಮ ಮತ್ತು ತೊಂದರೆ ಬೆಂಗಳೂರು ನಾಗರಿಕರ ಅನುಭವಕ್ಕೆ ಆಗಾಗ ಬಂದಿದೆ. ಅತಿಗಣ್ಯ ವ್ಯಕ್ತಿಗಳ ಬೆಂಗಾವಲು ವಾಹನಗಳ ಸಂಚಾರಕ್ಕೆ ಅನುಕೂಲ ಮಾಡಿಕೊಡಲು ವಿಮಾನ ನಿಲ್ದಾಣ ರಸ್ತೆಯನ್ನು ಬಂದ್ ಮಾಡಿದ ಪರಿಣಾಮವಾಗಿ ಅನೇಕ ಬಾರಿ ಜನಸಾಮಾನ್ಯರು ವಿಮಾನ ಮತ್ತು ರೈಲು ತಪ್ಪಿಸಿಕೊಂಡ ಉದಾಹರಣೆಗಳಿವೆ. ಹಾಗಾಗಿಯೇ ಹಿಂದಿನ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ನಂತರ ಜನಸಾಮಾನ್ಯರಿಗೆ ಆಗುವ ತೊಂದರೆಗಳನ್ನು ಗಮನಿಸಿ ಜೀರೋ ಟ್ರಾಫಿಕ್ ಸೌಕರ್ಯ ತಮಗೆ ಬೇಡ ಎಂದು ಹೇಳಿದ್ದರು. ಒಂದು ಸಿಗ್ನಲ್‌ನಿಂದ ಇನ್ನೊಂದು ಸಿಗ್ನಲ್ ನಡುವೆ ಪೊಲೀಸರು ಸಮನ್ವಯ ಸಾಧಿಸಿ ಮುಖ್ಯಮಂತ್ರಿಗಳ ವಾಹನಕ್ಕೆ ಅನುಕೂಲ ಮಾಡಿಕೊಟ್ಟು ಇಡೀ ರಸ್ತೆಯನ್ನು ಬಂದ್ ಮಾಡುವ ಸಮಸ್ಯೆಯನ್ನು ಪರಿಹರಿಸಿದ್ದರು.

# ಗ್ರೀನ್ ಟೀ ಅಥವಾ ಬ್ಲಾಕ್ ಟೀ: ಯಾವುದು ಆರೋಗ್ಯಕ್ಕೆ ಉತ್ತಮ?



ಬೆಳಗ್ಗಿನ ಚಹಾ ಇಲ್ಲದೆ ಹೆಚ್ಚಿನವರಿಗೆ ದಿನವೇ ಸಾಗುವುದಿಲ್ಲ. ಅದರಲ್ಲೂ ಬ್ಲಾಕ್ ಟೀ, ಗ್ರೀನ್ ಟೀ ಪ್ರಿಯರು ಬಹಳಷ್ಟು ಮಂದಿ ಇದ್ದು ಆರೋಗ್ಯಕ್ಕೂ ಒಳಿತು. ಇವರೆಡು ಕೂಡ ಜನಪ್ರಿಯ ಪಾನೀಯವಾಗಿದ್ದು ಅವುಗಳ ರುಚಿ, ಬಣ್ಣ ಮತ್ತು ಆರೋಗ್ಯ ಗುಣಲಕ್ಷಣಗಳು ವಿಭಿನ್ನ ವಾಗಿದೆ. ಗ್ರೀನ್ ಟೀ ಆಕ್ಸಿಡೀಕರಣಗೊಳ್ಳದ, ಇಉಅಉ ನಂತಹ ಶುದ್ಧ ಕ್ಯಾಟೆಚಿನ್‌ಗಳನ್ನು ಸಂರಕ್ಷಿಸುತ್ತದೆ, ಇದು ಚಯಾಪಚಯ ಕ್ರಿಯೆಗೆ ಮತ್ತು ರಕ್ತದಲ್ಲಿನ ಸಕ್ಕರೆ ನಿಯಂತ್ರಣಕ್ಕೆ ಉಪ ಯೋಗಕಾರಿಯಾಗಿದೆ. ಬ್ಲಾಕ್ ಟೀ ಸಂಪೂರ್ಣವಾಗಿ ಆಕ್ಸಿಡೀಕರಣ ಗೊಂಡಿದ್ದರೂ, ಕ್ಯಾಟೆಚಿನ್‌ಗಳನ್ನು ಥೀಫ್ಲಾವಿನ್‌ಗಳು ಮತ್ತು ಥೀರುಬಿಜಿನ್‌ಗಳಾಗಿ ಪರಿವರ್ತಿಸುತ್ತದೆ, ಇದು ಹೃದಯರಕ್ತನಾಳವನ್ನು ರಕ್ಷಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತದೆ.

ಹಸಿರು ಚಹಾವು ಉತ್ಕರ್ಷಣ ನಿರೋಧಕಗಳಾಗಿ ಕೆಲಸ ಮಾಡುತ್ತವೆ. ಇವು ಆಕ್ಸಿಡೇಟಿವ್ ಒತ್ತಡ ಕಡಿಮೆ ಮಾಡಿ ಉರಿಯೂತವನ್ನು ಕಡಿಮೆ ಮಾಡುವ ಮತ್ತು ದೀರ್ಘಕಾಲದ ಕಾಯಿಲೆಗಳ ಅಪಾಯವನ್ನು ಕಡಿಮೆ ಮಾಡುವ ಸಾಮರ್ಥ್ಯಕ್ಕೆ ಹೆಸರುವಾಸಿಯಾಗಿದೆ. ಇದರಲ್ಲಿರುವ ಇಉಅಉ ಅಂಶವು ಕೊಬ್ಬನ್ನು ಕರಗಿಸಲು ಮತ್ತು ಊಟದ ನಂತರ ರಕ್ತದಲ್ಲಿ ಸಕ್ಕರೆಯ ಮಟ್ಟಹೆಚ್ಚಾಗದಂತೆ ತಡೆಯಲು ಸಹಾಯ ಮಾಡುತ್ತದೆ. ಸಂಶೋಧನೆಯ ಪ್ರಕಾರ ಗ್ರೀನ್ ಟೀ ಮೆದುಳಿನ ಕಾರ್ಯವನ್ನು ಬೆಂಬಲಿಸಿ ಕೊಬ್ಬನ್ನು ಸುಡುವಲ್ಲಿ ಸಹಾಯ ಮಾಡುತ್ತದೆ. ಹೃದಯಕಾಯಿಲೆಯ ಅಪಾಯವನ್ನು ಕಡಿಮೆ ಮಾಡುತ್ತದೆ. ಹಸಿರು ಚಹಾದಲ್ಲಿ ಕಂಡುಬರುವ ಅಮೈನೋ ಆಮ್ಲವಾದ ಎಲ್-ಥಿಯಾನೈನ್ ವಿಶ್ರಾಂತಿಯನ್ನು ಉತ್ತೇಜಿಸುತ್ತದೆ. ಮಾನಸಿಕ ಒತ್ತಡವನ್ನು ಕಡಿಮೆ ಮಾಡಿ, ಏಕಾಗ್ರತೆಯನ್ನು ಹೆಚ್ಚುಮಾಡುತ್ತದೆ. ಬ್ಲ್ಯಾಕ್ ಟೀ, ಕಡು ಬಣ್ಣ ಮತ್ತು ಉತ್ತಮ ರುಚಿಯನ್ನು ಹೊಂದಿರುತ್ತದೆ. ಕಾಫಿಗೆ ಪರ್ಯಾಯವಾಗಿ ಇದನ್ನು ಬಳಸಲಾಗುತ್ತದೆ. ಆದರೆ ಇದು ಹಸಿರು ಚಹಾಕ್ಕಿಂತ ಹೆಚ್ಚಿನ ಕೆಫೀನ್ ಅಂಶವನ್ನು ಹೊಂದಿರುತ್ತದೆ. ಕಪ್ಪು ಚಹಾವು ಕರುಳಿನ ಆರೋಗ್ಯವನ್ನು ಸುಧಾರಿಸಬಹುದು ಅದೇ ರೀತಿ ಕೊಲೆಸ್ಟ್ರಾಲ್ ಮಟ್ಟವನ್ನು ಕಡಿಮೆ ಮಾಡಬಹುದು ರಕ್ತನಾಳಗಳ ಕಾರ್ಯವನ್ನು ಸುಧಾರಿಸುವ ಮೂಲಕ ಹೃದಯದ ಆರೋಗ್ಯವನ್ನು ಬೆಂಬಲಿಸಬಹುದು. ಹಸಿರು ಚಹಾವು ಕಬ್ಬಿಣದ ಹೀರಿಕೊಳ್ಳುವಿಕೆಯನ್ನು ತಡೆಯುತ್ತದೆ. ಏಕೆಂದರೆ ಹೆಚ್ಚಿನ ಕ್ಯಾಟೆಚಿನ್ ಮಟ್ಟಗಳು ನಿಮ್ಮ ಜೀರ್ಣಾಂಗದಲ್ಲಿ ಕಬ್ಬಿಣದ ಹೀರಿಕೊಳ್ಳುವಿಕೆಯನ್ನು ತಡೆಯುತ್ತದೆ. ಕಪ್ಪು ಚಹಾವು ಶಕ್ತಿಯನ್ನು ತುಂಬಬಹುದಾದರೂ, ಅತಿಯಾದ ಸೇವನೆಯು ಆತಂಕ ಮತ್ತು ನಿದ್ರೆಯ ಅಡಚಣೆ ಉಂಟು ಮಾಡಬಹುದು. ಹಸಿರು ಚಹಾವು ಸೂಕ್ಷ್ಮವಾದ ಸಿಹಿ ಮತ್ತು ಹಗುರವಾದ, ಉಲ್ಲಾಸಕರ ರುಚಿಗೆ ಹೆಸರುವಾಸಿಯಾಗಿದೆ. ವ್ಯಾಪಕವಾದ ಆಕ್ಸಿಡೀಕರಣದ ಕೊರತೆಯು ಹಸಿರು ಚಹಾವು ತನ್ನ ನೈಸರ್ಗಿಕ, ರೋಮಾಂಚಕ ಸುವಾಸನೆಯನ್ನು ಉಳಿಸಿಕೊಳ್ಳಲು ಅನುವು ಮಾಡಿಕೊಡುತ್ತದೆ, ಇದು ಹಗುರವಾದ ಮತ್ತು ಹೆಚ್ಚು ಸೂಕ್ಷ್ಮವಾದ ಚಹಾ ಅನುಭವವನ್ನು ಬಯಸುವವರಿಗೆ ಜನಪ್ರಿಯ ಆಯ್ಕೆಯಾಗಿದೆ. ಇದಕ್ಕೆ ವ್ಯತಿರಿಕ್ತವಾಗಿ, ಕಪ್ಪು ಚಹಾವು ಹೆಚ್ಚು ದಪ್ಪ ಮತ್ತು ಹೆಚ್ಚು ದೃಢವಾದ ಪರಿಮಳವನ್ನು ನೀಡುತ್ತದೆ. ಪೂರ್ಣ ಆಕ್ಸಿಡೀಕರಣ ಪ್ರಕ್ರಿಯೆಯು ಕಪ್ಪು ಚಹಾಕ್ಕೆ ಶ್ರೀಮಂತ ಮತ್ತು ಆಳವಾದ ಪಾತ್ರವನ್ನು ನೀಡುತ್ತದೆ. ಹಸಿರು ಚಹಾಕ್ಕೆ ಹೋಲಿಸಿದರೆ ಕಪ್ಪು ಚಹಾವು ಹೆಚ್ಚಾಗಿ ಬಲವಾದ ಮತ್ತು ಹೆಚ್ಚು ಸ್ಪಷ್ಟವಾದ ರುಚಿಯನ್ನು ಹೊಂದಿರುತ್ತದೆ, ಇದು ದೃಢವಾದ ಮತ್ತು ತೃಪ್ತಿಕರವಾದ ಚಹಾ ಅನುಭವವನ್ನು ಆನಂದಿಸುವವರಿಗೆ ಆದ್ಯತೆಯ ಆಯ್ಕೆಯಾಗಿದೆ.

**ಉತ್ಪಾದನಾ ಪ್ರಕ್ರಿಯೆ:** ಹಸಿರು ಚಹಾ ಮತ್ತು ಕಪ್ಪು ಚಹಾ ಒಂದೇ ಕ್ಯಾಮೆಲಿಯಾ ಸೈನೆನ್ಸಿಸ್ ಸಸ್ಯದಿಂದ ಹುಟ್ಟಿಕೊಂಡಿದ್ದರೂ, ಅವುಗಳನ್ನು ಸಂಸ್ಕರಿಸುವ ವಿಭಿನ್ನ ವಿಧಾನಗಳಿಗೆ ಒಳಪಡಿಸಲಾಗುತ್ತದೆ.

## ಖಾಲಿ ಹೊಟ್ಟೆಯಲ್ಲಿ ಜೀರಾ ನೀರನ್ನು ಸೇವಿಸುವುದರಿಂದ ಈ ಆರೋಗ್ಯ ಲಾಭ ಸಿಗಲಿದೆ!

ಬೆಳಗ್ಗೆ ಎದ್ದ ತಕ್ಷಣ ಹೆಚ್ಚಿನವರಿಗೆ ಟೀ, ಕಾಫಿ ಕುಡಿಯುವ ಅಭ್ಯಾಸ ಇರುತ್ತದೆ. ಆದರೆ ಇದರ ಬದಲಿಗೆ ಖಾಲಿ ಹೊಟ್ಟೆಗೆ ನೀವು ಜೀರಿಗೆ ನೀರು ಕುಡಿದರೆ ಹಲವಾರು ಆರೋಗ್ಯ ಪ್ರಯೋಜನಗಳನ್ನು ಪಡೆಯಬಹುದು. ಭಾರತೀಯ ಜನಸಂಖ್ಯೆಯ ಸುಮಾರು 16 ರಿಂದ 32% ರಷ್ಟು ಜನರು ಕೊಬ್ಬಿನ ಪಿತ್ತಜನಕಾಂಗದ ಕಾಯಿಲೆಯಿಂದ ಬಳಲುತ್ತಿದ್ದಾರೆ. ಅಡ್ವಾನ್ಸ್ ಆಫ್ ಇಂಟಿಗ್ರೇಟಿವ್ ಮೆಡಿಸಿನ್‌ನಲ್ಲಿನ ಸಂಶೋಧನೆಯ ಪ್ರಕಾರ ಜೀರಾ ನೀರು ಇದಕ್ಕೆ ಒಂದು ಅತ್ಯುತ್ತಮವಾದ ಪರಿಹಾರ ಕ್ರಮವಾಗಿದೆ. ಜೀರಾ ನೀರು ಲಿವರ್‌ನಲ್ಲಿ ಕೊಬ್ಬು ಸಂಗ್ರಹವಾಗುವುದನ್ನು ತಡೆದು, ಜೀರ್ಣಕ್ರಿಯೆಯನ್ನು ಹೇಗೆ ಸುಧಾರಿಸುತ್ತದೆ ಎಂಬ ಸಂಪೂರ್ಣ ಮಾಹಿತಿ ಇಲ್ಲಿದೆ. ಜೀರಿಗೆ ಬೀಜಗಳು ಜೀರ್ಣಕಾರಿ ಕಿಣ್ವ ಚಟುವಟಿಕೆಯನ್ನು ಉತ್ತೇಜಿಸಲು ಸಹಾಯ ಮಾಡುತ್ತವೆ. ಇದು ದೇಹವು ಕೊಬ್ಬುಗಳು, ಪ್ರೋಟೀನ್‌ಗಳು ಮತ್ತು ಕಾರ್ಬೋಹೈಡ್ರೇಟ್‌ಗಳನ್ನು ಪರಿಣಾಮಕಾರಿ ರೀತಿಯಲ್ಲಿ ಒಡೆಯಲು ಸಹಾಯ ಮಾಡುತ್ತದೆ. ಹೊಟ್ಟೆ ಉಬ್ಬುವುದು ಮತ್ತು ಅಜೀರ್ಣದಂತಹ ಸಾಮಾನ್ಯ ಗ್ಯಾಸ್ಟ್ರಿಕ್ ಸಮಸ್ಯೆಗಳಿಗೆ ರಾಮ ಬಾಣವಾಗಿದೆ. ಜೀರಾ ನೀರು ರಕ್ತದಲ್ಲಿನ ಸಕ್ಕರೆ ಮಟ್ಟವನ್ನು ನಿಯಂತ್ರಿಸಲು ಸಹಾಯ ಮಾಡುತ್ತದೆ.

ದೇಹದ ತೂಕ ಮತ್ತು ಒಟ್ಟಾರೆ ಕೊಬ್ಬಿನ ಶೇಖರಣೆಯನ್ನು ಕಡಿಮೆ ಮಾಡಿ ಇನ್ಸುಲಿನ್ ಮಟ್ಟವನ್ನು ಕೂಡ ತಡೆಯುತ್ತದೆ.



# ವಿದ್ಯಾರ್ಥಿ ವಿಜಯ

ಡಾ.ಸುಧಾಕರ.ಜಿ. ಲಕ್ಕವಳ್ಳಿ
ಲೇಖಕರು
ಸಾಮಾಜಿಕ ಚಿಂತಕರು

5



ವಿದ್ಯಾರ್ಥಿ ಜೀವನದ ಬಾನಂಗಳದಲ್ಲಿ ವಿಜಯದ ಧ್ರುವತಾರೆಯಾಗಲು ಕಿರುಗುರಿಗಳೇ ದೀಪದೀವಿಗೆ. ಹಿಮಾಲಯವನ್ನು ಏರುವಾಗ ಒಂದೇ ಜಿಗಿತ ಸಾಲದು; ಹೆಜ್ಜೆ ಹೆಜ್ಜೆಯಾಗಿ, ಉಸಿರು ಉಸಿರಾಗಿ ಸಾಗಿದರೆ ಮಾತ್ರ ಶಿಖರ ನಮ್ಮದಾಗುತ್ತದೆ. ದೊಡ್ಡ ಗುರಿಯನ್ನು ಕಿರುಗುರಿಗಳ ಹೂರಣವಾಗಿ ಬಿಡಿಸಿ, ನಿತ್ಯ ಸಾಧನೆಯ ತುತ್ತು ತಿನ್ನುವುದೇ ಯಶಸ್ಸಿನ ವೈಜ್ಞಾನಿಕ ಸೂತ್ರ.

ಕಿರುಗುರಿಗಳ ಸಾಧಕ ಶಿಸ್ತಿನ ತೇರನ್ನು ಎಳೆಯುತ್ತಾನೆ. ಆತಂಕದ ಬಿರುಗಾಳಿ ಅವನನ್ನು ಅಲುಗಾಡಿಸಲಾರದು. ಏಕೆಂದರೆ ಅವನಿಗೆ ಗೊತ್ತು ದೊಡ್ಡ ಕನಸುಗಳನ್ನು ನನಸು ಮಾಡುವ ಮೆಟ್ಟಿಲುಗಳು ಚಿಕ್ಕವೇ ಆಗಿರುತ್ತವೆ. ಆದ್ದರಿಂದಲೇ ಪ್ರತಿಯೊಬ್ಬ ವಿದ್ಯಾರ್ಥಿಯೂ ತನ್ನ ಆಕಾಶದಷ್ಟಗಲದ ಕನಸನ್ನು ದಿನದ ಹಿಡಿಯಷ್ಟು ಗುರಿಗಳಾಗಿ ಹೆಣೆದುಕೊಂಡರೆ, ವಿಜಯದ ಹೂಮಾಲೆ ಅವನ ಕೊರಳಿಗೆ ಖಂಡಿತ.

## ಕಿರುಗುರಿಗಳ ಹಾದಿಯಲ್ಲಿ [illegible]

ವರ್ಷಾಂತ್ಯದ ಪರೀಕ್ಷೆಯಲ್ಲಿ ಸಾಧನೆ ಬಯಸುವ ವಿದ್ಯಾರ್ಥಿ, ಮೊದಲು ತನ್ನ ಗುರಿಯ ಚಿತ್ರವನ್ನು ಮನದಲ್ಲಿ ಸ್ಪಷ್ಟವಾಗಿ ಬಿಡಿಸಿಕೊಳ್ಳಬೇಕು. ಬಳಿಕ ಆ ಚಿತ್ರವನ್ನು ದಿನದ ಪಾಠ, ವಾರದ ಪುನರಾವಲೋಕನ, ತಿಂಗಳ ಮಾದರಿ ಪರೀಕ್ಷೆಯೆಂಬ ಚಿಕ್ಕ ಚೌಕಟ್ಟುಗಳಲ್ಲಿ ಕಟ್ಟಬೇಕು. ಈ ಕ್ರಮಬದ್ಧತೆ ಮೆದುಳಿನ ನರತಂತುಗಳನ್ನು ಬೆಸೆಯುತ್ತದೆ.

ನಿತ್ಯ ಅಭ್ಯಾಸದಿಂದ ಸಿನಾಪ್ಸ್‌ಗಳು ಗಟ್ಟಿಗೊಂಡು, ಕಲಿಕೆ ನೆನಪಿನ ಕೋಶದಲ್ಲಿ ಅಜರಾಮರವಾಗುತ್ತದೆ. ಪ್ರತಿ ಕಿರುಗುರಿ ಈಡೇರಿದಾಗ ಡೋಪಮೈನ್ ಎಂಬ ಸಂತಸದ ಅಮೃತ ಮೆದುಳಿನಲ್ಲಿ ಉಕ್ಕಿ, ಮತ್ತಷ್ಟು ಹಾರಲು ರೆಕ್ಕೆ ಕಟ್ಟುತ್ತದೆ.



ಲೇಖಕರು
ವಿಶ್ವಾಸ್ .ಡಿ.ಗೌಡ
ಲೇಖಕರು
ಸಾಮಾಜಿಕ ಚಿಂತಕರು

# ಕೆಂಪೇಗೌಡರ ಪರಂಪರೆ: ಮುಂದಿನ ಪೀಳಿಗೆಗೆ ಸ್ಫೂರ್ತಿಯ ದಾರಿದೀಪ

ಒಬ್ಬ ವ್ಯಕ್ತಿಯ ಜೀವನದ ನಿಜವಾದ ಯಶಸ್ಸು ಅವರು ಬದುಕಿದ ಕಾಲದಲ್ಲಷ್ಟೇ ಸೀಮಿತವಾಗಿರುವುದಿಲ್ಲ. ಅವರ ಚಿಂತನೆ, ಮೌಲ್ಯಗಳು ಮತ್ತು ಸಾಧನೆಗಳು ಮುಂದಿನ ಪೀಳಿಗೆಗೂ ದಾರಿದೀಪವಾಗುವಾಗಲೇ ಅವರ ಜೀವನ ಸಾರ್ಥಕವಾಗುತ್ತದೆ. ನಾಡಪ್ರಭು ಕೆಂಪೇಗೌಡರು ಅಂತಹ ಅಪರೂಪದ ಮಹನೀಯರು. ಸುಮಾರು ಐದು ಶತಮಾನಗಳ ಹಿಂದೆಯೇ ಅವರು ರೂಪಿಸಿದ ಅಭಿವೃದ್ಧಿಯ ದೃಷ್ಟಿಕೋನ ಇಂದಿಗೂ ಕರ್ನಾಟಕಕ್ಕೆ ಪ್ರೇರಣೆಯಾಗಿದೆ.

ಇಂದಿನ ಯುವಜನತೆ ಕೆಂಪೇಗೌಡರನ್ನು ಕೇವಲ ಇತಿಹಾಸದ ವ್ಯಕ್ತಿಯಾಗಿ ನೋಡುವುದನ್ನು ಮೀರಿ, ಅವರ ಜೀವನ ಮೌಲ್ಯಗಳನ್ನು ಅಳವಡಿಸಿಕೊಳ್ಳಬೇಕು. ನಾಯಕತ್ವ ಎಂದರೆ ಅಧಿಕಾರವಲ್ಲ, ಜವಾಬ್ದಾರಿ ಎಂಬುದನ್ನು ಅವರು ತಮ್ಮ ಬದುಕಿನ ಮೂಲಕ ತೋರಿಸಿಕೊಟ್ಟಿದ್ದಾರೆ. ಸಮಾಜದ ಒಳಿತಿಗಾಗಿ ಕೆಲಸ ಮಾಡುವ ಮನೋಭಾವ, ಪರಿಸರದ ಬಗ್ಗೆ ಕಾಳಜಿ, ಸಾರ್ವಜನಿಕ ಆಸ್ತಿಯ ಸಂರಕ್ಷಣೆ ಮತ್ತು ಜನಸೇವೆಯ ಬದ್ಧತೆ ಪ್ರತಿಯೊಬ್ಬ ಯುವಕ-ಯುವತಿಯ ಜೀವನದ ಭಾಗವಾಗಬೇಕು. ಇಂದು ಅಭಿವೃದ್ಧಿಯ ಹೆಸರಿನಲ್ಲಿ ಅನೇಕ ಯೋಜನೆಗಳು ಜಾರಿಯಾಗುತ್ತಿವೆ. ಆದರೆ ಅಭಿವೃದ್ಧಿ ಎನ್ನುವುದು ಕೇವಲ ಕಟ್ಟಡಗಳು, ರಸ್ತೆಗಳು ಮತ್ತು ಸೇತುವೆಗಳ ನಿರ್ಮಾಣಕ್ಕೆ ಸೀಮಿತವಾಗಬಾರದು. ಜನರ ಜೀವನಮಟ್ಟ ಸುಧಾರಿಸುವ, ಪ್ರಕೃತಿಯನ್ನು ಉಳಿಸುವ ಮತ್ತು ಮುಂದಿನ ಪೀಳಿಗೆಗೆ ಉತ್ತಮ ಭವಿಷ್ಯವನ್ನು ಕಟ್ಟಿಕೊಡುವ ಅಭಿವೃದ್ಧಿಯೇ ನಿಜವಾದ ಪ್ರಗತಿ. ಇದೇ ಕೆಂಪೇಗೌಡರ ಚಿಂತನೆಯ ಸಾರವೂ ಆಗಿದೆ.

ಕರ್ನಾಟಕದ ಪ್ರತಿಯೊಂದು ಗ್ರಾಮ ಮತ್ತು ನಗರವು ಸ್ವಚ್ಛತೆ, ಹಸಿರು, ನೀರಿನ ಸಂರಕ್ಷಣೆ ಹಾಗೂ ನಾಗರಿಕರ ಸಹಭಾಗಿತ್ವದ ಮೂಲಕ ಅಭಿವೃದ್ಧಿಯತ್ತ ಸಾಗಿದಾಗ ಮಾತ್ರ ಕೆಂಪೇಗೌಡರ ಕನಸಿನ ಕರ್ನಾಟಕ ನಿರ್ಮಾಣವಾಗುತ್ತದೆ. ಈ ಕಾರ್ಯದಲ್ಲಿ ಸರ್ಕಾರದ ಜೊತೆಗೆ ಪ್ರತಿಯೊಬ್ಬ ನಾಗರಿಕನ ಪಾತ್ರವೂ ಅತ್ಯಂತ ಮಹತ್ವದ್ದಾಗಿದೆ. ಕೆಂಪೇಗೌಡ ಜಯಂತಿಯನ್ನು ಆಚರಿಸುವುದು ಕೇವಲ ಒಂದು ಸಂಪ್ರದಾಯವಲ್ಲ ಅವರ ಆದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವ ಸಂಕಲ್ಪದ ದಿನವಾಗಬೇಕು. ಅವರು ತೋರಿಸಿದ ದೂರದೃಷ್ಟಿ, ಜನಪರ ಆಡಳಿತ, ಪರಿಸರ ಪ್ರಜ್ಞೆ ಮತ್ತು ಸೇವಾ ಮನೋಭಾವ ಇಂದಿನ ಸಮಾಜಕ್ಕೂ ಎಂದೆಂದಿಗೂ ಪ್ರಸ್ತುತವಾಗಿವೆ. ನಾಡಪ್ರಭು ಕೆಂಪೇಗೌಡರ ಕನಸು ಕೇವಲ ಬೆಂಗಳೂರಿಗಷ್ಟೇ ಸೀಮಿತವಾಗಿರಲಿಲ್ಲ ಸಮೃದ್ಧ, ಸುಂದರ ಮತ್ತು ಸಮಾನತೆಯ ಕರ್ನಾಟಕದ ನಿರ್ಮಾಣವೇ ಅವರ ಆಶಯವಾಗಿತ್ತು. ಆ



ಕನಸನ್ನು ನನಸಾಗಿಸುವ ಜವಾಬ್ದಾರಿ ಇಂದು ನಮ್ಮೆಲ್ಲರ ಮೇಲಿದೆ. ಅವರ ಆದರ್ಶಗಳನ್ನು ಅನುಸರಿಸಿ, ಅಭಿವೃದ್ಧಿ ಮತ್ತು ಮಾನವೀಯತೆ ಕೈಜೋಡಿಸುವ ಕರ್ನಾಟಕವನ್ನು ಕಟ್ಟುವುದು ಅವರಿಗಿರುವ ನಿಜವಾದ ಗೌರವ.

**ಕೆಂಪೇಗೌಡರು ಕೇವಲ ಒಂದು ನಗರವನ್ನು ಕಟ್ಟಲಿಲ್ಲ ಸುಸ್ಥಿರ ಅಭಿವೃದ್ಧಿಯ ಪರಿಕಲ್ಪನೆಯನ್ನು ಕಟ್ಟಿದರು. ಪ್ರಕೃತಿಯೊಂದಿಗೆ ಹೊಂದಾಣಿಕೆ, ನೀರಿನ ಸಂರಕ್ಷಣೆ, ಜನರ ಸುರಕ್ಷತೆ, ವ್ಯಾಪಾರ ವಹಿವಾಟಿಗೆ ಅನುಕೂಲಕರ ವಾತಾವರಣ ಮತ್ತು ಸಾಮಾಜಿಕ ಸಾಮರಸ್ಯಕ್ಕೆ ಅವರು ನೀಡಿದ ಆದ್ಯತೆ ಇಂದಿನ ಅಭಿವೃದ್ಧಿಯ ಮಾದರಿಗಳಿಗೂ ಮಾರ್ಗದರ್ಶಿಯಾಗಿದೆ. ಬೆಂಗಳೂರು ಇಂದು ವಿಶ್ವದ ಪ್ರಮುಖ ನಗರಗಳಲ್ಲಿ ಒಂದಾಗಿ ಬೆಳೆದಿರುವುದು ಹೆಮ್ಮೆಯ ವಿಷಯ. ಮಾಹಿತಿ ತಂತ್ರಜ್ಞಾನ, ಶಿಕ್ಷಣ, ವೈದ್ಯಕೀಯ, ಕೈಗಾರಿಕೆ ಹಾಗೂ ಉದ್ಯಮಶೀಲತೆಯ ಕ್ಷೇತ್ರಗಳಲ್ಲಿ ನಗರವು ಅಂತರರಾಷ್ಟ್ರೀಯ ಮಟ್ಟದಲ್ಲಿ ಹೆಸರು ಮಾಡಿದೆ. ಆದರೆ ನಗರೀಕರಣದ ವೇಗದೊಂದಿಗೆ ಪರಿಸರ ನಾಶ, ಸಂಚಾರ ದಟ್ಟಣೆ, ನೀರಿನ ಕೊರತೆ, ಜನಸಂಖ್ಯೆಯ ಒತ್ತಡ ಮತ್ತು ಹಸಿರು ಪ್ರದೇಶಗಳ ಕುಸಿತದಂತಹ ಸವಾಲುಗಳೂ ಎದುರಾಗಿವೆ. ಈ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವಾಗ ಕೆಂಪೇಗೌಡರ ದೂರದೃಷ್ಟಿಯನ್ನು ನೆನಪಿಸಿಕೊಳ್ಳುವುದು ಅಗತ್ಯ.**

# ಅನ್ನ ತಿಂದ್ರೆ ತೂಕ ಏರಿಕೆ ಆಗುತ್ತಾ? ತಜ್ಞರು ಹೇಳೋದೇನು?

ಇತ್ತೀಚೆಗೆ ತೂಕ ಇಳಿಕೆಗಾಗಿ ಹರಸಾಹಸ ಮಾಡುತ್ತಿದ್ದವರು ಅನೇಕರು ಇದ್ದಾರೆ. ಅದರಲ್ಲೂ ಆಹಾರ ಸೇವನೆ ಅಂತ ಬಂದಾಗ ಕಟ್ಟುನಿಟ್ಟಾಗಿ ಪಾಲಿಸಬೇಕು, ದೇಹಕ್ಕೆ ಆಹಾರ ಬೇಕು ಅಂದಾಗಲೂ ಸೇವಿಸಲೇಬಾರದು ಎಂದು ಅನ್ನ, ಬ್ರೇಕ್ ಫಾಸ್ಟ್ ಇತ್ಯಾದಿಯನ್ನು ತ್ಯಜಿಸುವವರು ಅನೇಕರು ಇದ್ದಾರೆ. ಬಹುತೇಕರು ತೂಕ ಇಳಿಸಬೇಕೆಂದು ಅನ್ನ ಬಿಡಲೇಬೇಕು ಎಂದು ಶಪಥ ಮಾಡಿಕೊಳ್ಳುವವರು ಇದ್ದಾರೆ. ಆದರೆ ತಲೆಮಾರುಗಳಿಂದ ಸಾಂಪ್ರದಾಯಿಕ ಆಹಾರದ ಭಾಗವಾಗಿರುವ ಅನ್ನವನ್ನು ಬಿಡಲೇಬಾರದು ಎಂದು ತಜ್ಞರು ಸಲಹೆ ನೀಡಿದ್ದಾರೆ. ಹಾಗಿದ್ರೆ ಅನ್ನ ಸೇವನೆ ಮಾಡಿದ್ರೆ ತೂಕ ಹೆಚ್ಚಾಗುತ್ತಾ? ಅನ್ನ ತಿಂದರೆ ತೂಕ ಹೆಚ್ಚುತ್ತದೆ ಎಂಬ ತಪ್ಪು ಕಲ್ಪನೆ ಹಲವು ಜನರಲ್ಲಿ ಇದೆ. ಅಕ್ಕಿಯು ದೇಹಕ್ಕೆ ನಿರಂತರ ದೈಹಿಕ ಶಕ್ತಿ ಮತ್ತು ತ್ರಾಣವನ್ನು ಒದಗಿಸಿ ಅತ್ಯಂತ ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸುತ್ತದೆ.

ಹಾಗಾಗಿ ಇತ್ತೀಚಿನ ಡಯಟ್ ಬದಿಗಿಟ್ಟು, ನಮ್ಮ ಸಾಂಪ್ರದಾಯಿಕ ಆಹಾರವಾದ ಅನ್ನವನ್ನು ಧೈರ್ಯವಾಗಿ ಸೇವನೆ ಮಾಡಬಹುದು ಎಂದು ತಜ್ಞರು ಸಲಹೆ ನೀಡಿದ್ದಾರೆ. ಅಕ್ಕಿ ಜಾಗತಿಕವಾಗಿ ಪ್ರಸಿದ್ಧ ಆಹಾರ ಧಾನ್ಯವಾಗಿದೆ. ಇದು 15 ಕ್ಕೂ ಹೆಚ್ಚು ಅಗತ್ಯ ಪೋಷಕಾಂಶ ದೇಹಕ್ಕೆ ಒದಗಿಸಿ ಆರೋಗ್ಯ ರಕ್ಷಣೆ ಮಾಡುತ್ತದೆ.

ಥಯಾಮಿನ್, ನಿಯಾಸಿನ್ ಮತ್ತು ವಿಟಮಿನ್ ನಂತಹ ಬಿ ಜೀವಸತ್ವಗಳು ಹೇರಳವಾಗಿದ್ದು ಕಾರ್ಬೋಹೈಡ್ರೇಟ್‌ಗಳ ಉತ್ತಮ ಮೂಲವಾಗಿದೆ, ಇದು ದೇಹದ ಪ್ರಾಥಮಿಕ ಶಕ್ತಿಯನ್ನು ಹೆಚ್ಚಿಸುತ್ತದೆ.

ಅಕ್ಕಿಯಲ್ಲಿ ಕಂಡುಬರುವ ಕಾರ್ಬೋಹೈಡ್ರೇಟ್‌ಗಳು ದೇಹದಲ್ಲಿ ಶಕ್ತಿಯನ್ನು ಹೆಚ್ಚಿಸುತ್ತವೆ. ಸಂಸ್ಕರಿಸಿದ ಆಹಾರಗಳಲ್ಲಿ ಇರುವ ಕಾರ್ಬೋಹೈಡ್ರೇಟ್‌ಗಳಿಗೆ ಹೋಲಿಸಿದರೆ ಅವು ದೇಹದಲ್ಲಿ ಜೀರ್ಣಿಸಿಕೊಳ್ಳಲು ಹೆಚ್ಚು ಸಮಯ ತೆಗೆದುಕೊಳ್ಳುತ್ತವೆ. ಆದರೆ ಅಕ್ಕಿಯೂ ದೀರ್ಘಕಾಲದವರೆಗೆ ನಿಮ್ಮನ್ನು ಪೂರ್ಣವಾಗಿ ಮತ್ತು ಚೈತನ್ಯದಿಂದ ಇರಿಸುತ್ತದೆ.

ಆರೋಗ್ಯಕರ ಕರುಳಿಗೆ ಸಹಾಯ ಮಾಡುವ ಹಲವು ಪೋಷಕಾಂಶಗಳು ಅಕ್ಕಿಯಲ್ಲಿದೆ. ಅದರಲ್ಲೂ ಪ್ರೋಬಯಾಟಿಕ್‌ಗಳು, ನಾರಿನ ಅಂಶಗಳು ಹೆಚ್ಚಾಗಿದೆ. ಈ ಎಲ್ಲಾ ಆರೋಗ್ಯಕರ ಗುಣಗಳ ಜೊತೆಗೆ, ರೈಸ್ ಜಗತ್ತಿನಾದ್ಯಂತ ಅತ್ಯಂತ ಸುಲಭ ಹಾಗೂ ಕಡಿಮೆ ದರಕ್ಕೆ ಸಿಗುವ ಆಹಾರ ಧಾನ್ಯವಾಗಿದೆ.

# ಮುಳಬಾಗಿಲಿನ ಮಹಾಸಂತ ಶ್ರೀ ಶ್ರೀಪಾದರಾಜರು

ಶ್ರೀ ಶ್ರೀಪಾದರಾಜರು (1402-1502) ಶ್ರೀಪದ್ಮನಾಭತೀರ್ಥರಿಂದ ಪ್ರವರ್ತಿತವಾದ ಪೀಠದಲ್ಲಿ ವಿರಾಜಮಾನರಾದ ವಿಭೂತಿಪುರುಷರು. ಇವರ ಸಾಧನೆಗಳ ಫಲಶ್ರುತಿಯಾಗಿ ಆ ಮಠಕ್ಕೆ 'ಶ್ರೀ ಶ್ರೀಪಾದರಾಜ ಮಠ' ಎಂದೇ ಪ್ರಸಿದ್ಧಿ ಉಂಟಾಯಿತು. ಚನ್ನಪಟ್ಟಣದ ಬಳಿಯ ಅಬ್ಬೂರು ಇವರ ಜನ್ಮಸ್ಥಳ. ಲಕ್ಷ್ಮೀನಾರಾಯಣ ಎಂಬುದು ಪೂರ್ವಾಶ್ರಮದ ಹೆಸರು. ಶ್ರೀ ಸ್ವರ್ಣವರ್ಣತೀರ್ಥರಿಂದ ಬಾಲ್ಯದಲ್ಲೇ ಸನ್ಯಾಸ ದೀಕ್ಷೆ ಪಡೆದು ಶತಾಯುಷಿಗಳಾಗಿ ಪೀಠವನ್ನು ಅಲಂಕರಿಸಿದ ಹಿರಿಮೆ ಇವರದು. ಇವರು ಶ್ರೀ ವ್ಯಾಸರಾಜ ಮಠದ ಶ್ರೀ ಬ್ರಹ್ಮಣ್ಯತೀರ್ಥರ ಪೂರ್ವಾಶ್ರಮದ ಹತ್ತಿರದ ಸಂಬಂಧಿಗಳು.

ಬಾಲ್ಯದಲ್ಲಿಯೇ ಪ್ರತಿಭಾಂಬುಧಿ ಎನ್ನಿಸಿದ ಮಹನೀಯರು ಇವರು. ವಿಶೇಷವಾಗಿ ಶ್ರೀರಂಗ ಮೊದಲಾದ ದಕ್ಷಿಣ ಪ್ರಾಂತ್ಯದಲ್ಲಿ ಮಧ್ವಸಿದ್ಧಾಂತವನ್ನು ಪ್ರಸಾರ ಮಾಡಿದ ಮಹನೀಯರಲ್ಲಿ ಅಗ್ರಮಾನ್ಯರು ಎಂಬುದು ಇವರ ಹಿರಿಮೆ. ಬಹುಕಾಲ ಶ್ರೀರಂಗದಲ್ಲಿಯೇ ನೆಲೆಸಿದ್ದು ವಾದಿನಿಗ್ರಹದೊಂದಿಗೆ ಪಾಠಪ್ರವಚನಗಳನ್ನು ನಡೆಸಿದವರು. ಮುಂದೆ ಇವರ ಕಾರ್ಯಕ್ಷೇತ್ರ ಮುಳುಬಾಗಿಲಿನ ನರಸಿಂಹತೀರ್ಥವಾಯಿತು.

ಶ್ರೀಅಕ್ಷೋಭ್ಯತೀರ್ಥರಿಂದ ನಿರ್ಮಿತವಾದ ನರಸಿಂಹತೀರ್ಥ ಹಾಗೂ ಅವರಿಂದಲೇ ಪ್ರತಿಷ್ಠಾಪಿತವಾದ ಶ್ರೀ ಯೋಗಾನರಸಿಂಹನ ಸನ್ನಿಧಿಯಲ್ಲಿ ಬಹುಕಾಲ ನೆಲೆಸಿದ್ದು ಅದನ್ನು ದಕ್ಷಿಣದ ಪ್ರಧಾನ ವೈದಿಕವಿದ್ಯಾಕೇಂದ್ರವನ್ನಾಗಿಸಿದ್ದು ಇವರ ಸಾಧನೆ. ಅದರ ಫಲಶ್ರುತಿಯಾಗಿ ಅನೇಕ ಶತಮಾನಗಳವರೆಗೆ ಮಳುಬಾಗಿಲು ವಿದ್ವಾಂಸರ ನೆಲೆ ಎನ್ನಿಸಿದ್ದು ಇತಿಹಾಸ.

ನರಸಿಂಹಭೂಪಾಲನ ಬ್ರಹ್ಮಹತ್ಯೆಯನ್ನು ಪರಿಹರಿಸಿ ರಾಜಮನೆತನವನ್ನೇ ಸಂರಕ್ಷಿಸಿದ ತಪಶಕ್ತಿ ಇವರದು. ಅದರಂತೆ ಬ್ರಾಹ್ಮಣನೊಬ್ಬನಿಗೆ ಒದಗಿದ್ದ ಬ್ರಹ್ಮಹತ್ಯಾದೋಷವನ್ನು ಶಂಖೋದಕ ಪ್ರೋಕ್ಷಣೆಯಿಂದ ಪರಿಹರಿಸಿದ ಕೀರ್ತಿಯು ಇವರದು. ಯತಿಪರಂಪರೆಯಲ್ಲಿ ಶ್ರೀಪಾದರಾಜ ಎಂಬ ಹೆಸರಿನ ಏಕಮಾತ್ರವ್ಯಕ್ತಿಯಾಗಿ ವಿರಾಜಿಸಿದ ಇವರದು ಯತಿಗಳ ವೈರಾಗ್ಯವಾದರೆ, ರಾಜರ ಭೋಗವೂ ಆಗಿದ್ದುದು ವಿಶೇಷ. 'ಮುತ್ತಿನ ಕವಚ ಮೇಲ್ಕುಲಾವಿ' ಎಂದು ವರ್ಣಿಸುವಂತೆ ರಾಜಯೋಗ್ಯವಾದ ಅಲಂಕಾರ, ಪ್ರತಿನಿತ್ಯ 60 ಬಗೆಯ ಶಾಕವನ್ನು ಶ್ರೀಹರಿಗೆ ಸಮರ್ಪಿಸುವ ರಾಜಭೋಗ, ಇವರನ್ನು ಮೇಲ್ನೋಟಕ್ಕೂ ರಾಜರೇ ಎಂದು ಜನ ತಿಳಿಯುವಂತೆ ಮಾಡಿದೆ. ಆದರೆ ಅವರ ವೈರಾಗ್ಯ ಅದನ್ನೂ ಮೀರಿಸುವಂತಹ ಅಪೂರ್ವ ಸಾಧನೆಯಾಗಿ ಖ್ಯಾತಿ ಪಡೆದಿದೆ. ಇವರು ವಾಗ್ವಜ್ರ ಎಂಬ ಗ್ರಂಥವನ್ನು ರಚಿಸಿದ ಪ್ರತೀತಿ ಇದೆ. ವಾಗ್ವಜ್ರವೆಂಬ ಗ್ರಂಥ ಇಂದು ಉಪಲಬ್ಧವಿದ್ದು ಅದನ್ನು ಪ್ರಾಯ ಇವರ ಕೃತಿ ಎಂದೇ ಭಾವಿಸಲಾಗಿದೆ. ನ್ಯಾಯಸುಧೆಯ ಮೇಲಿನ ಉಪನ್ಯಾಸದ ಸ್ವರೂಪದ ಈ ಕೃತಿ ಅದರ ಮನನಕ್ಕೆ ಅಪೂರ್ವ ನೆರವನ್ನು ನೀಡುತ್ತದೆ.

ಶ್ರೀ ಶ್ರೀಪಾದರಾಜರ ಸಾಧನೆಗಳಲ್ಲಿ ಕಿರೀಟಪ್ರಾಯವಾದದ್ದು ಹರಿದಾಸ ಸಾಹಿತ್ಯಕ್ಕೆ ಖಚಿತವಾದ ರೂಪುರೇಖೆಗಳನ್ನು ನೀಡಿದ್ದು ಶ್ರೀಮದಾಚಾರ್ಯರ ಸಾಕ್ಷಾಚ್ಛಿಷ್ಯರಾದ ಶ್ರೀ ನರಹರಿತೀರ್ಥರಿಂದ ಉಗಮಹೊಂದಿದ ಹರಿದಾಸ ಸಾಹಿತ್ಯವನ್ನು ಸಮಗ್ರವಾಗಿ ರೂಪಿಸಿ ಅಪಾರ ಸಂಖ್ಯೆಯ ಕೃತಿಗಳಿಂದ ಅದನ್ನು ಶ್ರೀಮಂತಗೊಳಿಸಿದ್ದು ಇವರ ವಿಶಿಷ್ಟವಾದ ಹಿರಿಮೆ.



ಕೀರ್ತನೆಗಳು, ಉಗಾಭೋಗಗಳು, ಸುಳಾದಿಗಳು, ವೃತ್ತನಾಮ, ದಂಡಕ ಮೊದಲಾಗಿ ಎಲ್ಲಾ ಬಗೆಯ ಪ್ರಾಕಾರಗಳಿಂದಲೂ ಹರಿದಾಸ ಸಾಹಿತ್ಯವನ್ನು ಶ್ರೀಮಂತಗೊಳಿಸಿದ ಇವರ ಕೃತಿಗಳು ಸಾಹಿತ್ಯ, ಸಂಗೀತ ಹಾಗೂ ತತ್ವಜ್ಞಾನಗಳ ದಿವ್ಯಸಂಗಮವಾಗಿದ್ದು ಅನಂತರ ಅನೇಕ ಶತಮಾನಗಳವರೆಗೆ ಅವಿಚ್ಛಿನ್ನವಾಗಿ ಹರಿದಾಸ ಸಾಹಿತ್ಯ ಮುನ್ನಡೆಯಲು ಮುಖ್ಯಸ್ಫೂರ್ತಿ ಎನ್ನಿಸಿದವು. ಅವರು ರಚಿಸಿದ ಶ್ರೀಮಧ್ವನಾಮವಂತೂ ಕನ್ನಡದ ವಾಯುಸ್ತುತಿ ಎನ್ನಿಸಿ ಮನೆ ಮನೆಗಳಲ್ಲಿ ನಿತ್ಯಪಠ್ಯವಾಗಿರುವ ಮಹೋನ್ನತಿ ಕೃತಿ ಎನ್ನಿಸಿದೆ. ಶ್ರೀ ವಾಯುದೇವರ ಮೂಲರೂಪ ಮತ್ತು ಅವತಾರತ್ರಯಗಳ ವೈಭವವನ್ನು ಅದ್ಭುತ ಶೈಲಿಯಲ್ಲಿ ಸರಸವಾಗಿ ನಿರೂಪಿಸುವ ಈ ಕೃತಿ ಹರಿದಾಸ ಸಾಹಿತ್ಯದ ಸಮಸ್ತ ವಾಯುಪರಸ್ತೋತ್ರಗಳಿಗೂ ನಾಂದಿ ಹಾಡಿದ ವಿಶಿಷ್ಟ ಕೃತಿಯಾಗಿದೆ. ಹರಿಕಥಾಮೃತಸಾರವನ್ನು ರಚಿಸಿದ ಶ್ರೀ ಜಗನ್ನಾಥದಾಸರು ಇದಕ್ಕೆ ಫಲಶೃತಿಯನ್ನು ರಚಿಸಿರುವುದು ಇದರ ಹಿರಿಮೆಗೆ ಹಿಡಿದ ಕನ್ನಡಿ. ಇದರ ನಿತ್ಯಪಠನೆಯಿಂದ ಸಿದ್ಧಿಪಡೆದ ಅನೇಕ ಜನಗಳನ್ನು ಇಂದಿಗೂ ಕಾಣಬಹುದು. ಅವರ ಶ್ರೀಲಕ್ಷ್ಮೀನೃಸಿಂಹಪ್ರಾದುರ್ಭಾವ ದಂಡಕ ಶ್ರೀಮದ್ಭಾಗವತದ ಶ್ರೀಲಕ್ಷ್ಮೀನೃಸಿಂಹಪ್ರಾದುರ್ಭಾವದ ಶ್ಲೋಕಗಳ ಅತ್ಯಂತ ಪರಿಣಾಮಕಾರಿಯಾದ ನಿರೂಪಣೆಯಾಗಿದೆ. ಇಂದಿಗೂ ಹರಿದಾಸ ಸಾಹಿತ್ಯದಲ್ಲಿ ಉಪಲಬ್ಧವಿರುವ ಏಕಮಾತ್ರ ದಂಡಕ ಎಂಬುದು ಇದರ ಪ್ರಶಸ್ತಿ. ಕೃತಿರಚನೆಯ ಮೂಲಕ ಮಾತ್ರವಲ್ಲದೆ ಶ್ರೀ ವ್ಯಾಸರಾಜರ ಮೂಲಕ ಹರಿದಾಸ ಸಾಹಿತ್ಯವನ್ನು ಚಿರಸ್ಥಾಯಿಯನ್ನಾಗಿಸುವಂತೆ ಮಾಡಿದ ವ್ಯವಸ್ಥೆಯು ಇವರದು. ರಂಗವಿಠಲ ಎಂಬ ಅಂಕಿತದಿಂದ ಇವರು ರಚಿಸಿದ ಅಸಂಖ್ಯ ಕೃತಿಗಳು ಸಾಹಿತ್ಯಕವಾಗಿಯೂ ಅತ್ಯಂತ ಮೌಲಿಕ ಎನ್ನಿಸಿ ಮಾನ್ಯವಾಗಿದೆ. ಶ್ರೀ ಶ್ರೀಪಾದರಾಜರ ಸಾಧನೆಯ ಮಕುಟಪ್ರಾಯವಾದ ಮಹತ್ವ ಶ್ರೀ ವ್ಯಾಸರಾಜರಂತಹ ಜಗತ್ತು ಕಂಡ ಮಹಾವಿದ್ವಾಂಸರನ್ನು ರೂಪಿಸಿದ್ದು.

ತಮ್ಮಲ್ಲಿ ಅಧ್ಯಯನಕ್ಕೆಂದು ಆಗಮಿಸಿದ ಶ್ರೀ ವ್ಯಾಸತೀರ್ಥರನ್ನು ಸಮಸ್ತ ಶಾಸ್ತ್ರಗಳಲ್ಲಿ ಅಪ್ರತಿಮ ಪಂಡಿತರಾಗುವಂತೆ ರೂಪಿಸಿದ್ದು ಇವರ ಅಧ್ಯಾಪನ ಕಾರ್ಯದ ಒಟ್ಟು ಫಲಶೃತಿ. ಇವರ ಬಳಿ ಕಳೆದ ಅವಧಿ ಶ್ರೀ ವ್ಯಾಸರಾಜರ ಪಾಲಿಗೆ ಜೀವನದ ಮುಖ್ಯ ಸ್ಫೂರ್ತಿ ಎನ್ನಿಸಿ ಅವರನ್ನು ದ್ವೈತ ವೇದಾಂತ ಕಂಡ ಅಪೂರ್ವ ವಾದಗ್ರಂಥಕಾರರು ಎನ್ನಿಸುವಂತೆ ಮಾಡಿದೆ. ತಮ್ಮ ವ್ಯಾಸತ್ರಯಗಳಿಂದ ಅವರು ಮಾಡಿದ ವಿದ್ವತ್ಕ್ರಾಂತಿ ಪರಕೀಯರು ಸಹ ಸ್ತುತಿಸುವಂತಹ ಅನುಪಮ ಸಾಧನೆ.

ಶ್ರೀ ವಿಭುದೇಂದ್ರತೀರ್ಥರಂತಹ ವಿಭೂತಿಪುರುಷರ ಶಿಷ್ಯರಾಗಿ, ಶ್ರೀ ವ್ಯಾಸರಾಜರಂತಹ ವಿದ್ವನ್ಮೇರುಗಳ ವಿದ್ಯಾಗುರುಗಳಾಗಿ ಹರಿದಾಸ ಸಾಹಿತ್ಯದ ಸಮಗ್ರ ನಿರ್ಮಾತೃಗಳಾಗಿ ರಾಜಮಹಾರಾಜರುಗಳನ್ನು ಉದ್ಧರಿಸಿದ ತಪೋನಿಧಿಗಳಾಗಿ ಪಾಠಪ್ರವಚನಗಳ ಮೂಲಕ ಮಧ್ವಸಿದ್ಧಾಂತವನ್ನು ವಿಶೇಷವಾಗಿ ದಕ್ಷಿಣಭಾರತದಲ್ಲಿ ಪ್ರಸಾರಗೊಳಿಸಿದ ವಿದ್ವದ್ವರೇಣ್ಯರಾಗಿ ಶ್ರೀ ಶ್ರೀಪಾದರಾಜರು ದ್ವೈತವೇದಾಂತದ ಆಗಸದಲ್ಲಿ ಧ್ರುವತಾರೆಯಂತೆ ಕಂಗೊಳಿಸುವ ಅಮರವ್ಯಕ್ತಿತ್ವವನ್ನು ಹೊಂದಿರುವರು.

ಉತ್ತರಾದಿಮಠದ ಶ್ರೀ ರಘುನಾಥತೀರ್ಥರಿಂದ ಶ್ರೀ ಶ್ರೀಪಾದರಾಜ ಪ್ರಶಸ್ತಿ, ಶ್ರೀ ರಾಘವೇಂದ್ರ ಮಠದ ಶ್ರೀ ವಿಭುದೇಂದ್ರತೀರ್ಥರ ಬಳಿ ಅಧ್ಯಯನ, ತಮ್ಮ ಹೆಸರಿನಿಂದ ಮಠಕ್ಕೆ ವ್ಯಾಸರಾಜಮಠವೆಂಬ ಪ್ರಸಿದ್ಧಿ ತಂದುಕೊಟ್ಟ ಶ್ರೀ ವ್ಯಾಸರಾಜರ ಗುರುತ್ವ.

ಹೀಗೆ ಘಟ್ಟದ ಮೇಲಿನ ಪ್ರಧಾನ ಮಠತ್ರಯಗಳಿಗೂ ಶ್ರೀ ಶ್ರೀಪಾದರಾಜರ ಸಂಪರ್ಕ ಅತ್ಯಂತ ಗಮನಾರ್ಹವಾದುದು. ಪ್ರಾತಃಕಾಲದ ಇವರ ಸ್ಮರಣೆ ಮೃಷ್ಟಾನ್ನ ಭೋಜನದಾಯಕ ಎಂಬ ಪ್ರತೀತಿ ಅನೇಕರ ಅನುಭವಸಿದ್ಧವಾದ ಸತ್ಯಸಂಗತಿ.



-ಲೇಖಕರು :
ಡಾ॥ ವ್ಯಾಸನಕೆರೆ
ಪ್ರಭಂಜನಾಚಾರ್ಯ

# ಪ್ರಿ ಡಯಾಬಿಟಿಸ್'ಗೆ ಸರಳ ಮದ್ದು



ನನ್ನ ಪ್ರಾಕ್ಟೀಸಿನಲ್ಲಿ ದಿನಕ್ಕೊಮ್ಮೆಯಾದರೂ ಕೇಳಿ ಬರುವ ಅತಿ ರೋಚಕವಾದ ಮತ್ತು ಅಷ್ಟೇ ಅಪಾಯಕಾರಿಯಾದ ಡೈಲಾಗ್ ಇದು: ರಕ್ತಪರೀಕ್ಷೆಯ ವರದಿಯನ್ನು ನನ್ನ ಮುಂದಿಟ್ಟು, ಮುಖದಲ್ಲಿ ಒಂದು ವಿಜಯದ ನಗೆ ಬೀರುತ್ತಾ ಹೇಳ್ತಾರೆ 'ನೋಡಿ ಡಾಕ್ಟ್ರೇ, ನನಗೇನೂ ಶುಗರ್ ಇಲ್ಲ! ರಿಪೋರ್ಟ್‌ನಲ್ಲಿ ಶುಗರ್ ಬರೀ 'ಬಾರ್ಡರ್'ನಲ್ಲಿದೆ ಅಂತ ಲ್ಯಾಬ್‌ನವರು ಹೇಳಿದ್ರು. ದಿನಕ್ಕೊಂದು ಸ್ವೀಟ್ ತಿಂದ್ರೆ ಏನಾಗಲ್ಲ ಅಲ್ವಾ?' ಅವರ ಈ ಬಾರ್ಡರ್ (ಗಡಿ) ಥಿಯರಿ ಕೇಳಿ ನನಗೆ ನಗಬೇಕೋ ಅಳಬೇಕೋ ತಿಳಿಯುವುದಿಲ್ಲ. ಹಲವರಿಗೆ ಈ 'ಬಾರ್ಡರ್' ಅನ್ನೋ ಪದದಲ್ಲಿ ಎಲ್ಲಿಲ್ಲದ ಪ್ರೀತಿ ಮತ್ತು ನಿರ್ಲಕ್ಷ್ಯ ಎರಡೂ ಸಹಾ! ಆದರೆ ವೈದ್ಯಕೀಯ ವಿಜ್ಞಾನದಲ್ಲಿ ಈ ಬಾರ್ಡರ್‌ಗೆ ಒಂದು ಸ್ಪಷ್ಟವಾದ ಹೆಸರಿದೆ, ಅದೇ 'ಪ್ರಿ- ಡಯಾಬಿಟಿಸ್'. ಸರಳವಾಗಿ ಹೇಳಬೇಕೆಂದರೆ, ಇದು ಮಧುಮೇಹದ ಹೊಸ್ತಿಲು! ಇದನ್ನು ಅರ್ಥ ಮಾಡಿಕೊಳ್ಳಲು ನಮ್ಮ ಟ್ರಾಫಿಕ್ ಸಿಗ್ನಲ್‌ನ ಉದಾಹರಣೆಯನ್ನೇ ತೆಗೆದುಕೊಳ್ಳೋಣ. **ಹಸಿರು ದೀಪ:** ಇದು ಉರಿಯುತ್ತಿದ್ದರೆ, ನಿಮ್ಮ ರಕ್ತದಲ್ಲಿ ಸಕ್ಕರೆಯ ಮಟ್ಟ ನಾರ್ಮಲ್, ಅಂದರೆ ಸರಿಯಿದೆ (ಉದಾಹರಣೆಗೆ: ಖಾಲಿ ಹೊಟ್ಟೆಯಲ್ಲಿ 100ಕ್ಕಿಂತ ಕಡಿಮೆ) ಎಂದರ್ಥ. ನೀವು ಟೆನ್ಷನ್ ಇಲ್ಲದೆ ಜೀವನದ ಗಾಡಿಯನ್ನು ಓಡಿಸಿಕೊಂಡು ಹೋಗಬಹುದು. ಇದು ಪಕ್ಕಾ ಮಧುಮೇಹ (ಖಾಲಿ ಹೊಟ್ಟೆಯಲ್ಲಿ 126ಕ್ಕಿಂತ ಹೆಚ್ಚು). ಇಲ್ಲಿ ನೀವು ಕಡ್ಡಾಯವಾಗಿ ಬ್ರೇಕ್ ಹಾಕಲೇಬೇಕು, ಆಹಾರದಲ್ಲಿ ಕಟ್ಟುನಿಟ್ಟು ತರಲೇಬೇಕು, ವೈದ್ಯರ ಸಲಹೆ ಅವಶ್ಯವಾಗಿ ಪಾಲನೆ ಮಾಡಬೇಕು ಹಾಗೂ ಔಷಧಿಗಳ ಅಗತ್ಯವಿದ್ದರೆ ತೆಗೆದುಕೊಳ್ಳಬೇಕು. **ಹಳದಿ ದೀಪ:** ಅಂದರೆ ರಕ್ತದಲ್ಲಿ ಸಕ್ಕರೆಯ ಮಟ್ಟ ನಾರ್ಮಲ್ ಕೂಡ ಅಲ್ಲ, ಹಾಗಂತ ಪೂರ್ತಿ ಮಧುಮೇಹವೂ ಅಲ್ಲ (ಖಾಲಿ ಹೊಟ್ಟೆಯಲ್ಲಿ 100 ರಿಂದ 125ರ ನಡುವೆ).

# ಧರ್ಮಸ್ಥಳದ ವಿರುದ್ಧ ಷಡ್ಯಂತ್ರ, ಪ್ರಕಾಶ್ ರಾಜ್ ಪಾತ್ರದ ಬಗ್ಗೆ ಸಮಗ್ರ ತನಿಖೆಗೆ ಪುಣ್ಯ ಸಂರಕ್ಷಣಾ ಸಮಿತಿ ಆಗ್ರಹ

• **ಉದಯವಾಹಿನಿ, ಧರ್ಮಸ್ಥಳ:**

ಧರ್ಮಸ್ಥಳದ ವಿರುದ್ಧ ನಡೆದಿದೆ ಎನ್ನಲಾದ ಷಡ್ಯಂತ್ರ ಪ್ರಕರಣದಲ್ಲಿ ಬಹುಭಾಷಾ ನಟ ಪ್ರಕಾಶ್ ರಾಜ್ ಅವರ ಪಾತ್ರದ ಬಗ್ಗೆ ಸಮಗ್ರ ತನಿಖೆಯಾಗಬೇಕು ಮತ್ತು ಪ್ರಕರಣದ ಎಸ್‌ಐಟಿ ಮಧ್ಯಂತರ ವರದಿಯನ್ನು ಸರ್ಕಾರ ತಕ್ಷಣವೇ ಬಹಿರಂಗಪಡಿಸಬೇಕು ಎಂದು ಪುಣ್ಯಕ್ಷೇತ್ರ ಸಂರಕ್ಷಣಾ ಸಮಿತಿ ಒತ್ತಾಯಿಸಿದೆ.ಸುದ್ದಿಗೋಷ್ಠಿಯಲ್ಲಿ ಜಂಟಿಯಾಗಿ ಮಾತನಾಡಿದ ಪ್ರಮುಖರಾದ ಚಕ್ರವರ್ತಿ ಸೂಲಿಬೆಲೆ ವಸಂತ್ ಗಿಳಿಯಾರ್, ವಿಕಾಸ್ ಪುತ್ತೂರು ಧರ್ಮಸ್ಥಳದ ವಿರುದ್ಧ ವ್ಯವಸ್ಥಿತ ಸಂಚು ರೂಪಿಸಲಾಗುತ್ತಿದೆ ಎಂದು ಗಂಭೀರ ಆರೋಪ ಮಾಡಿದರು.



ಉದಯವಾಹಿನಿ ಚಿತ್ರ

ಚಕ್ರವರ್ತಿ ಸೂಲಿಬೆಲೆ ಮಾತನಾಡಿ, ಆರಂಭದಲ್ಲಿ ಇದೊಂದು ಷಡ್ಯಂತ್ರ ಎಂದು ನಾವು ಧ್ವನಿ ಎತ್ತಿದಾಗ ನಮ್ಮ ಚಾರಿತ್ರ್ಯ ಹನನಕ್ಕೆ ಯತ್ನಿಸಲಾಯಿತು. ಈಗ ಚಿನ್ನಯ್ಯ ತನಗೆ ದುಡ್ಡಿನ ಆಮಿಷ ಒಡ್ಡಿದ್ದರಿಂದ ಹೀಗೆ ಮಾಡಿದೆ ಎಂದು ಕೋರ್ಟ್ ಮುಂದೆ ಹೇಳಿದ್ದಾನೆ. ಕೋಟ್ಯಂತರ ರೂಪಾಯಿ ತೆರಿಗೆ ಹಣವನ್ನು ಈ ತನಿಖೆಗೆ ವ್ಯಯಿಸಲಾಗಿದೆ. ಇದು ಕೇವಲ ಸರ್ಕಾರಕ್ಕೆ ಮಾಡಿದ ಮೋಸವಲ್ಲ, ರಾಜ್ಯದ 7 ಕೋಟಿ ಜನರಿಗೆ ಮಾಡಿದ ದ್ರೋಹ ಎಂದು ಆಕ್ರೋಶ ಹೊರಹಾಕಿದರು. ಎಸ್‌ಐಟಿ ಮುಖ್ಯಸ್ಥ ಪ್ರಣವ್ ಮೊಹಂತಿ ಅವರ ಜೊತೆ ನಾನು ಮಾತನಾಡಿದ್ದೆ. ಅವರು ಚಿನ್ನಯ್ಯನ ಜೊತೆ ಮಾತನಾಡದಂತೆ ನನಗೆ ಸೂಚಿಸಿದ್ದರು ಎಂದು ಪ್ರಕಾಶ್ ರಾಜ್ ಅವರೇ ಹೇಳಿದ್ದಾರೆ. ಸಾಕ್ಷಿಯಾಗಿದ್ದ ಚಿನ್ನಯ್ಯನ ಜೊತೆ ಮಾತನಾಡದಂತೆ ಹೇಳಲು ಹೇಗೆ ಸಾಧ್ಯ? ಪ್ರಕಾಶ್ ರಾಜ್ ಅವರ ಈ ಹೇಳಿಕೆಯಿಂದ ಹೊಸ ಅನುಮಾನ ವ್ಯಕ್ತವಾಗಿದೆ. ಎಸ್‌ಐಟಿ ಮಧ್ಯಂತರ ವರದಿಯಲ್ಲಿ ಪ್ರಕಾಶ್ ರಾಜ್ ಫೋನ್ ಕರೆಗಳ ವಿವರ ಉಲ್ಲೇಖವಾಗಿದೆಯೇ ಎಂಬುದನ್ನು ಸರ್ಕಾರ ಸ್ಪಷ್ಟಪಡಿಸಬೇಕು ಎಂದು ಸೂಲಿಬೆಲೆ ಪ್ರಶ್ನಿಸಿದರು.

# ದಾವಣಗೆರೆಯ ಈ ಗ್ರಾಮದಲ್ಲಿ 180 ಮನೆ, 140ಕ್ಕೂ ಹೆಚ್ಚು ಟ್ರ್ಯಾಕ್ಟರ್

**ಚನ್ನಗಿರಿ ತಾಲ್ಲೂಕಿನ ಭೀಮನೆರೆ ಗ್ರಾಮದಲ್ಲಿ ಒಟ್ಟು 180 ಮನೆಗಳಿವೆ. ಈ 180 ಮನೆಗಳ ಪೈಕಿ 140ಕ್ಕೂ ಹೆಚ್ಚು ಮನೆಯವರು ಟ್ರ್ಯಾಕ್ಟರ್ ಹೊಂದಿದ್ದಾರೆ.**

• **ಉದಯವಾಹಿನಿ, ದಾವಣಗೆರೆ:**

ಜಿಲ್ಲೆಯ ಭೀಮನೆರೆ ಗ್ರಾಮಕ್ಕೆ 'ಟ್ರ್ಯಾಕ್ಟರ್' ಮುಕುಟವಿದ್ದಂತೆ. ಟ್ರ್ಯಾಕ್ಟರ್‌ನೊಂದಿಗೆ ಈ ಗ್ರಾಮಸ್ಥರಿಗೆ ಅವಿನಾಭಾವ ಸಂಬಂಧವಿದೆ. ಟ್ರ್ಯಾಕ್ಟರ್‌ಗಳನ್ನು ಇಲ್ಲಿನ ಜನರು ಮನೆ ಮನೆಗಳ ನೋಡಿಕೊಳ್ಳುತ್ತಾರೆ. ಚೆಂದದ ಶಿಂಗಾರ ಮಾಡುತ್ತಾರೆ. ಹೆಚ್ಚು ಕಡಿಮೆ ಇಲ್ಲಿ ಮನೆಗೊಂದು ಟ್ರ್ಯಾಕ್ಟರ್ ಇರುವುದನ್ನು ನೀವು ನೋಡುವಿರಿ.

ಟ್ರ್ಯಾಕ್ಟರ್‌ಗಳೇ ಈ ಗ್ರಾಮದ ಜನರ ಆದಾಯದ ಮೂಲವಾಗಿವೆ. ಜನರ ಬದುಕಿನ ಬಂಡಿ ಸಾಗಲು ಜಮೀನುಗಳಲ್ಲಿ ಸದ್ದು ಮಾಡುವ ಈ ಟ್ರ್ಯಾಕ್ಟರ್‌ಗಳೇ ಆಸರೆಯಾಗಿವೆ. ಯಾವುದೇ ಗ್ರಾಮದಲ್ಲಿ ಬಿತ್ತನೆ ಕಾರ್ಯ ಇದ್ದರೆ ಅಲ್ಲಿ ಭೀಮನೆರೆ ಗ್ರಾಮದ ಟ್ರ್ಯಾಕ್ಟರ್‌ನ ಸದ್ದು ಜೋರಾಗಿ ಕೇಳಿಬರುತ್ತದೆ.ರೈತ ವಿಕ್ರಮ್ ಪಾಟೀಲ್,

> ನಾವು ಬಿತ್ತಲು 1,200 ರೂಪಾಯಿ ತೆಗೆದುಕೊಳ್ಳುತ್ತೇವೆ. ಕಲ್ಟಿವೇಟರ್, ಪ್ಲೋ ಎಂದರೆ 1,400–1,500 ರೂ.ಯತನಕ ಬಾಡಿಗೆ ತೆಗೆದುಕೊಳ್ಳುತ್ತೇವೆ. ರೋಟೋವೇಟರ್ ಒಂದು ಗಂಟೆಗೆ 1,100 ರೂ ಬಾಡಿಗೆ ಪಡೆಯುತ್ತೇವೆ. ಡೀಸೆಲ್ ಬೆಲೆ ಗಗನಕ್ಕೇರಿದೆ. ಒಂದು ಎಕರೆಗೆ ಐದು ಲೀಟರ್ ಡೀಸೆಲ್ ಬೇಕಾಗುತ್ತದೆ. ಬಾಡಿಗೆ ಹೆಚ್ಚು ಕೇಳಿದರೆ ಬೇರೆ ಗಾಡಿಗೆ ಹೇಳ್ತಾರೆ.
>
> ಟ್ರ್ಯಾಕ್ಟರ್ ಚಾಲಕ ರಂಗಸ್ವಾಮಿ

ಟ್ರ್ಯಾಕ್ಟರ್ ಮಾಲೀಕ ವಿಶ್ವನಾಥ್ ಅವರ ಪ್ರತಿಕ್ರಿಯೆ ಇಲ್ಲಿದೆ ದೂರದೂರುಗಳಲ್ಲಿ ಬೇಸಾಯ ನಡೆದರೆ ಅಲ್ಲಿಯೂ ಇವರು ಹಾಜರ್ ಆಗುತ್ತಾರೆ. ಇಲ್ಲಿನ ಟ್ರ್ಯಾಕ್ಟರ್‌ಗಳನ್ನು ಬಾಡಿಗೆ ಪಡೆದು ಬಿತ್ತನೆ ಕಾರ್ಯಗಳಿಗೆ ಬಳಸಿಕೊಳ್ಳುತ್ತಾರೆ.ಈ ಗ್ರಾಮ ಸಿರಿಧಾನ್ಯ ಬೆಳೆಗೂ ಹೆಸರುವಾಸಿಯಾಗಿದೆ. ಟ್ರ್ಯಾಕ್ಟರ್ ಬಾಡಿಗೆ ಬಿತ್ತನೆಗೆ


ಉದಯವಾಹಿನಿ ಚಿತ್ರ

> ನಮ್ಮೂರು ಚಿಕ್ಕ ಗ್ರಾಮ. ಆದ್ರೂ, ಇಡೀ ಚನ್ನಗಿರಿ ತಾಲೂಕಿನಲ್ಲಿ ಹೆಸರುವಾಸಿ. ಕೃಷಿ ಇಲಾಖೆಯಲ್ಲಿ ಏನೇ ಕೃಷಿ ಪರಿಕರಗಳು ಬಂದ್ರೂ ನಮ್ಮೂರಿನವರೇ ಮೊದಲು ಖರೀದಿ ಮಾಡ್ತಾರೆ. ಗ್ರಾಮದಲ್ಲಿ 60–67 ಕುರಿಗಳಿವೆ. ನಮ್ಮ ರೈತರು ಅಜ್ಜಂಪುರ, ಹೊಸದುರ್ಗ ತನಕ ಬಿತ್ತನೆಗೆ ಹೋಗ್ತಾರೆ.
>
> ಟ್ರ್ಯಾಕ್ಟರ್ ಮಾಲೀಕ ವಿಶ್ವನಾಥ್

1,200 ರೂಪಾಯಿ, ಒಂದು ಎಕರೆ ಪ್ಲೋ ಹೊಡೆಯಲು 5 ಸಾವಿರ ರೂ, 30 ಕಿಮೀ ವ್ಯಾಪ್ತಿಯಲ್ಲಿ ಮಾತ್ರ ಬಾಡಿಗೆ ಮಾಡುತ್ತೇವೆ ಎಂದು ತಿಳಿಸಿದರು.

ಹೀಗಾಗಿ, ಭೀಮನೆರೆ ಗ್ರಾಮದ ಟ್ರ್ಯಾಕ್ಟರ್‌ಗಳು ಅದೆಷ್ಟೋ ರೈತರ ಜಮೀನುಗಳಿಗೆ ಬಿತ್ತನೆಗೆ ನೆರವಾಗಿವೆ.ಭೀಮನೆರೆ ಗ್ರಾಮದಲ್ಲಿ ಒಟ್ಟು 180 ಮನೆಗಳಿವೆ. 180 ಮನೆಗಳ ಪೈಕಿ 140ಕ್ಕೂ ಹೆಚ್ಚು ಟ್ರ್ಯಾಕ್ಟರ್‌ಗಳಿವೆ.

## ಭೀಮನೆರೆ ಗ್ರಾಮ ಎಂದರೆ ದುಡಿಮೆಗೆ ಎತ್ತಿದ ಕೈ.

**ರೈತ ವಿಕ್ರಮ್ ಪಾಟೀಲ್ ಎಂಬುವರು ಮಾತನಾಡಿ, ಭೀಮನೆರೆ ಗ್ರಾಮ ಎಂದರೆ ದುಡಿಮೆಗೆ ಎತ್ತಿದ ಕೈ. ನಮಗೆ ದುಡಿಮೆಯೇ ದೇವರು. ಇಲ್ಲಿ ಎಲ್ಲಾ ಜನಾಂಗದವರೂ ಇದ್ದೇವೆ. ಬೇಧಭಾವದಿಂದ ಬದುಕಲ್ಲ. 180 ಮನೆಗಳಿವೆ.140ಕ್ಕೂ ಹೆಚ್ಚು ಟ್ರ್ಯಾಕ್ಟರ್‌ಗಳಿವೆ. ಸುತ್ತಮುತ್ತಲಿನ ಹಳ್ಳಿಗಳ ಜಮೀನುಗಳಲ್ಲಿ ಕುರಿಗೆ ಮಾಡುವುದು, ಬಿತ್ತನೆ ಮಾಡುವುದಾಗಲಿ ಎಲ್ಲದಕ್ಕೂ ಭೀಮನೆರೆ ಗ್ರಾಮದ ಟ್ರ್ಯಾಕ್ಟರ್‌ಗಳೇ ಇರುತ್ತವೆ. ಚಿಕ್ಕಜಾಜೂರು, ಕೋಗಿಲೂರು, ಬಸಾಪಟ್ಟಣ, ಅಜ್ಜಂಪುರ ಹೀಗೆ ದೂರದ ಊರುಗಳಿಗೆ ಬಾಡಿಗೆ ಪಡೆದು ಟ್ರ್ಯಾಕ್ಟರ್ ಸೇವೆ ನೀಡಲಾಗುತ್ತದೆ.**

ದಾವಣಗೆರೆ ಹಾಗೂ ಚಿತ್ರದುರ್ಗ ಜಿಲ್ಲೆಯ ಯಾವುದೇ ಭಾಗದಲ್ಲಿ ಬಿತ್ತನೆ, ಕುರಿಗೆ, ಪ್ಲೋ ಹೊಡೆಯಲು ಟ್ರ್ಯಾಕ್ಟರ್ ಬುಕ್ ಮಾಡುತ್ತಾರೆ. ಯಾವುದೇ ಗ್ರಾಮದಲ್ಲಿ ಬಿತ್ತನೆ ಕಾರ್ಯವಿದ್ದರೆ ಭೀಮನೆರೆ ಗ್ರಾಮದ ಟ್ರ್ಯಾಕ್ಟರ್ ಗಳನ್ನೇ ರೈತರು ಬುಕ್ ಮಾಡಿ, ಬಾಡಿಗೆ ನೀಡಿ ಬಿತ್ತನೆ ಕೆಲಸ ಮಾಡಿಕೊಳ್ಳುತ್ತಾರೆ.

ಇನ್ನು ಬಿತ್ತನೆ ಕುರಿಗೆ 1,200 ರೂ ಬಾಡಿಗೆ, ಮೆಕ್ಕೆಜೋಳ, ರಾಗಿ, ಈರುಳ್ಳಿ, ಸೂರ್ಯಕಾಂತಿ ಬೀಜ ಬಿತ್ತನೆ ಮಾಡ್ತೇವೆ. ನಮ್ಮದೊಂದು ಗಾಡಿ ಇದೆ. ನಮ್ಮಲ್ಲೇ ಬಿತ್ತನೆಗೆ ಕೂಲಿಕಾರರು. ಇಂದು ನಮ್ಮ ಟ್ರ್ಯಾಕ್ಟರ್‌ಗಳು ಬಿತ್ತನೆಗಾಗಿ ಹೊಳಲ್ಕೆರೆಗೆ ಹೋಗಿವೆ ಎಂದು ಮಾಹಿತಿ ನೀಡಿದರು.ನಮ್ಮೂರಿನ ಸುತ್ತಮುತ್ತಲಿನ ಹಳ್ಳಿಗಳು, ಚಿತ್ರದುರ್ಗ ತಾಲ್ಲೂಕು, ಬುಕ್ಕಂಬೂದಿ, ಹೊಳಲ್ಕೆರೆ, ಅಜ್ಜಂಪುರ ಕಡೆ ಹೋಗಿ ನಾವು ಬಿತ್ತನೆ ಕೆಲಸ ಮಾಡುತ್ತೇವೆ. ಇಲ್ಲಿ ಹೆಚ್ಚಿನವರಲ್ಲಿ ಟ್ರ್ಯಾಕ್ಟರ್ ಇದೆ ಎಂದು ಹೇಳಿದರು.

# ಗೃಹಲಕ್ಷ್ಮಿ ಯೋಜನೆಗೆ ಪುನಃ ಅರ್ಜಿ ಸಲ್ಲಿಕೆಗೆ ಆದೇಶವಿಲ್ಲ

• **ಉದಯವಾಹಿನಿ, ಸಿದ್ದಾಪುರ:**

ಗೃಹಲಕ್ಷ್ಮಿ ಯೋಜನೆಯ ಫಲಾನುಭವಿಗಳು ಪುನಃ ಅರ್ಜಿ ಸಲ್ಲಿಸಲು ಸರ್ಕಾರದ ಯಾವುದೇ ವಿಶೇಷ ಆದೇಶ ಬಂದಿಲ್ಲ' ಎಂದು ಪ್ರಭಾರ ಶಿಶು ಅಭಿವೃದ್ಧಿ ಯೋಜನಾಧಿಕಾರಿ ನಂದಕುಮಾರ್ ಹೇಳಿದರು.

ಪಟ್ಟಣದ ತಾಲ್ಲೂಕು ಪಂಚಾಯಿತಿ ಸಭಾಭವನದಲ್ಲಿ ತಾಲ್ಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಕೆ. ಜಿ. ನಾಗರಾಜ ಅವರ ಅಧ್ಯಕ್ಷತೆಯಲ್ಲಿ ನಡೆದ ಮಾಸಿಕ ಪ್ರಗತಿ ಪರಿಶೀಲನಾ ಸಭೆಯಲ್ಲಿ ಅವರು ಮಾತನಾಡಿದರು.

'ತಾಲ್ಲೂಕಿನಲ್ಲಿ 1,391 ಫಲಾನುಭವಿಗಳನ್ನು 'ಡಬಲ್ ಪೇಮೆಂಟ್' ಅಡಿ ಗುರುತಿಸಲಾಗಿದ್ದು, ಅವರಿಗೆ ತಾಂತ್ರಿಕವಾಗಿ ಎರಡು ಬ್ಯಾಂಕ್ ಖಾತೆಗಳು ತೋರಿಸುತ್ತಿದ್ದರೂ, ಹಣ ಒಂದೇ ಅಕೌಂಟ್‌ಗೆ ಜಮೆಯಾಗುತ್ತಿದೆ.

ತಾಲ್ಲೂಕಿನಲ್ಲಿ ಒಟ್ಟು 367 ಜನರ ಗೃಹಲಕ್ಷ್ಮಿ ಹಣ ತಡೆ ಹಿಡಿಯಲಾಗಿದೆ. ಯಜಮಾನಿ ಮೃತಪಟ್ಟ ಕಾರಣ 471 ಫಲಾನುಭವಿಗಳನ್ನು ಪಟ್ಟಿಯಿಂದ ತೆಗೆದುಹಾಕಲಾಗಿದ್ದು, ಹೊಸ ಯಜಮಾನಿಯ ಹೆಸರು ಸೇರ್ಪಡೆಗೆ 2 ತಿಂಗಳ ಕಾಲಾವಕಾಶ ಬೇಕಾಗುವುದರಿಂದ ಹಳೆಯ ಹಣ ಪಾವತಿಯಾಗುವುದಿಲ್ಲ. ಹಾಗಾಗಿ ಸಾರ್ವಜನಿಕರು ತಕ್ಷಣವೇ ಹೆಸರು ಬದಲಾಯಿಸಿಕೊಳ್ಳಬೇಕು ಮತ್ತು ಇದನ್ನು ಅಂಗನವಾಡಿ ಕಾರ್ಯಕರ್ತೆಯರ ಮೂಲಕ ಪರಿಶೀಲಿಸಲು ಕ್ರಮ ಕೈಗೊಳ್ಳಲಾಗಿದೆ' ಎಂದು ಮಾಹಿತಿ ನೀಡಿದರು.

ಗೃಹಜ್ಯೋತಿ ಯೋಜನೆಗೆ ವೋಟರ್ ಐಡಿ ಲಿಂಕ್ ಮಾಡುವ ಕುರಿತು ಯಾವುದೇ ಅಧಿಕೃತ ಸರ್ಕಾರಿ ಆದೇಶ ಬಂದಿಲ್ಲ ಎಂದು ಹೆಸ್ಕಾಂ ಅಧಿಕಾರಿ ನಾಗರಾಜ ಪಾಟೀಲ ಹೇಳಿದರು.

ಶಕ್ತಿ ಯೋಜನೆಗೆ ಸಂಬಂಧಿಸಿದಂತೆ ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಬಸ್ ನಿಲ್ದಾಣಾಧಿಕಾರಿ ಪಿ. ಜಿ. ನಾಯ್ಕ ಮಾತನಾಡಿ, ತಾಲ್ಲೂಕಿನಲ್ಲಿ ಸುಮಾರು 1,000 ಉಚಿತ ಬಸ್ ಪಾಸ್ ವಿತರಿಸಲಾಗಿದೆ ಎಂದರು. ಇದೇ ವೇಳೆ ನಾಣಿಕಟ್ಟಾ ಕಾಲೇಜಿಗೆ ಬೆಳಿಗ್ಗೆ 9 ಗಂಟೆಗೆ ಮತ್ತು ಸಂಜೆ 4:30ಕ್ಕೆ ಬಸ್ ಬೇಕು ಎನ್ನುವ ವಿದ್ಯಾರ್ಥಿಗಳ ಬೇಡಿಕೆಗೆ ತಕ್ಷಣ ಸ್ಪಂದಿಸುವಂತೆ ಅನುಷ್ಠಾನ ಸಮಿತಿ ಅಧ್ಯಕ್ಷ ಕೆ.ಜಿ.ನಾಗರಾಜ ಅಧಿಕಾರಿಗಳಿಗೆ ಸೂಚಿಸಿದರು.

## ಮಿನಿ ನ್ಯೂಸ್

### ಮದ್ಯ ಮಾರಾಟ ಅವ್ಯಾಹತ

• **ಉದಯವಾಹಿನಿ, ತೆಕ್ಕಲಕೋಟೆ:**

ಮದ್ಯ ಅಕ್ರಮ ಮಾರಾಟ ಮತ್ತೆ ಮುಂದುವರೆಸಿದಲ್ಲಿ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಸಿರುಗುಪ್ಪ ಅಬಕಾರಿ ಪಿಎಸ್ ಐ ಅಂಬಣ್ಣ ಹೇಳಿದರು. ಸಮೀಪದ ನಿಟ್ಟೂರು ಗ್ರಾಮದಲ್ಲಿ ಅಬಕಾರಿ ಇಲಾಖೆ, ಪೊಲೀಸ್ ಇಲಾಖೆ ಹಾಗೂ ಗ್ರಾಮ ಪಂಚಾಯಿತಿ ವತಿಯಿಂದ ನಡೆದ ನಶೆಮುಕ್ತ ಗ್ರಾಮ 'ಗ್ರಾಮಸಭೆ' ಯಲ್ಲಿ ಮಾತನಾಡಿದರು.ಗ್ರಾಮಸ್ಥೆ ಕೋರಿ ಮಾರಮ್ಮ ಮಾತನಾಡಿ, ಮದ್ಯ ಅಕ್ರಮ ಮಾರಾಟಗಾರರ ವಿರುದ್ಧ ಈಗಾಗಲೆ ಕ್ರಮ ಕೈಗೊಂಡಿದ್ದರೂ ದಂಡ ಕಟ್ಟಿ ಮತ್ತೆ ಮದ್ಯ ಮಾರಾಟ ಆರಂಭಿಸಿದ್ದಾರೆ. ಇವರ ವಿರುದ್ಧ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು. ಗ್ರಾಮದ ಗೂಡಂಗಡಿ, ಕಿರಾಣಿ ಹಾಗೂ ಹೋಟೆಲ್ ಗಳ ಮಾಲೀಕರು ಮದ್ಯ ಮಾರಾಟ ಮಾಡುತ್ತಿದ್ದು, ಗಂಡಸರು ಮನೆಯ ವಸ್ತುಗಳನ್ನು ಮಾರಾಟ ಮಾಡಿ ಕುಡಿಯುತ್ತಿದ್ದಾರೆ ಎಂದು ಗ್ರಾಮಕ್ಕೆ ಪದ್ದಮ್ಮ ಅಳಲು ತೋಡಿಕೊಂಡರು. ಈ ಸಂದರ್ಭದಲ್ಲಿ ನಡವಿ ಗ್ರಾಮ ಪಂಚಾಯಿತಿ ಪಿಡಿಒ ರಾಮಪ್ಪ, ತೆಕ್ಕಲಕೋಟೆ ಪೊಲೀಸ್ ಸಿಬ್ಬಂದಿ ದ್ಯಾಮನಗೌಡ, ಮೌನೇಶ ಗ್ರಾಮಸ್ಥರಾದ ಶಿವಕುಮಾರ, ಬಸವರಾಜ, ಕುಮಾರಸ್ವಾಮಿ ಹಾಗೂ ಮಹಿಳೆಯರು ಭಾಗವಹಿಸಿದ್ದರು.

### ಎಸ್‌ಐಆರ್‌ಗೆ ದಾಖಲೆ ಸಿದ್ಧಪಡಿಸಿಕೊಳ್ಳಿ

• **ಉದಯವಾಹಿನಿ, ಬಳ್ಳಾರಿ:**

'ಮತದಾರರ ಪಟ್ಟಿ ವಿಶೇಷ ಪರಿಷ್ಕರಣೆ (ಎಸ್‌ಐಆರ್)' ಪ್ರಕ್ರಿಯೆ 25 ವರ್ಷಗಳ ಬಳಿಕ ನಡೆಯುತ್ತಿದ್ದು, ನಾಗರಿಕರು ಅಗತ್ಯ ದಾಖಲೆಗಳನ್ನು ಸಲ್ಲಿಸಿ ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರನ್ನು ಸೇರ್ಪಡೆ ಮಾಡಿಸಿಕೊಳ್ಳಬೇಕು' ಎಂದು ಕಾಂಗ್ರೆಸ್ ಮುಖಂಡ ಐವಾನ್ ಡಿಸೋಜಾ ಹೇಳಿದರು.

ಕೌಲಬಜಾರ್‌ನಲ್ಲಿರುವ ಅಂಥೋನಿ ಹಾಲ್‌ನಲ್ಲಿ ಏರ್ಪಡಿಸಿದ್ದ ಎಸ್ ಐಆರ್ ಕುರಿತ ಕಾರ್ಯಕ್ರಮದಲ್ಲಿ ಮಾತನಾಡಿದರು.

'ಬಿಎಲ್‌ಒಗಳಿಗೆ ಕಲರ್ ಫೋಟೋ ಸೇರಿದಂತೆ ಅಗತ್ಯ ದಾಖಲೆಗಳನ್ನು ನೀಡಿ ಮತದಾರರ ಪಟ್ಟಿಯಲ್ಲಿ ಹೆಸರು ನೋಂದಾಯಿಸಿಕೊಳ್ಳಬಹುದಾಗಿದೆ. ಅಲೆಮಾರಿ ಸಮುದಾಯದವರು ಆರು ತಿಂಗಳ ವಾಸಸ್ಥಳ ಪ್ರಮಾಣ ಪತ್ರ ಸಲ್ಲಿಸುವ ಮೂಲಕ ಮತದಾರರ ಪಟ್ಟಿಗೆ ಹೆಸರು ಸೇರಿಸಿಕೊಳ್ಳಬಹುದು' ಎಂದು ತಿಳಿಸಿದರು. 'ಪಿಂಚಣಿ ಪತ್ರ, ಎಲ್‌ಐಸಿ ದಾಖಲೆ, ಜನನ ಪ್ರಮಾಣ ಪತ್ರ, ಪಾಸ್‌ಪೋರ್ಟ್, ಶೈಕ್ಷಣಿಕ ದಾಖಲೆಗಳು, ಜಾತಿ ಪ್ರಮಾಣ ಪತ್ರ, ವಸತಿ ಹಾಗೂ ಜಮೀನು ದಾಖಲೆಗಳು ಸೇರಿದಂತೆ ವಿವಿಧ ದಾಖಲೆಗಳನ್ನು ಸಲ್ಲಿಸಿ ಅರ್ಹತೆ ದೃಢೀಕರಿಸಬಹುದಾಗಿದೆ' ಎಂದರು.

'ಆಗಸ್ಟ್ 5ರಿಂದ ಸೆಪ್ಟೆಂಬರ್ 4ರವರೆಗೆ ಕರಡು ಮತದಾರರ ಪಟ್ಟಿಯನ್ನು ಆನ್‌ಲೈನ್‌ನಲ್ಲಿ ಪರಿಶೀಲಿಸಲು ಅವಕಾಶವಿದೆ. ಯಾವುದೇ ತಪ್ಪುಗಳಿದ್ದರೆ ತಿದ್ದುಪಡಿ ಮಾಡಿಸಿಕೊಳ್ಳಬಹುದು. ಅಂತಿಮ ಮತದಾರರ ಪಟ್ಟಿ ನವೆಂಬರ್‌ನಲ್ಲಿ ಪ್ರಕಟವಾಗಲಿದೆ' ಎಂದು ಹೇಳಿದರು.

### ಎರಡು ಹನಿ ಜೀವನದ ರಕ್ಷಣೆಗೆ

• **ಉದಯವಾಹಿನಿ,ಚಿಂಚೋಳಿ**


ಉದಯವಾಹಿನಿ ಚಿತ್ರ

ತಾಲ್ಲೂಕಿನಲ್ಲಿ ಇದೆ ಜೂ.28ರಿಂದ ಜುಲೈ 01ರ ವರೆಗೆ ರಾಷ್ಟ್ರೀಯ ಪಲ್ಸ್ ಪೋಲಿಯೋ ಕಾರ್ಯಕ್ರಮ ನಡೆಯಲಿದ್ದು 0–5 ವರ್ಷದ ಎಲ್ಲಾ ಮಕ್ಕಳಿಗೆ ಎರಡು ಹನಿ ಪಲ್ಸ್ ಪೋಲಿಯೋ ಹಾಕಿಸಬೇಕೆಂದು ಟಿಹೆಚ್‌ಓ ಡಾ.ಮಹ್ಮದ್ ಗಫಾರ್ ತಿಳಿಸಿದ್ದಾರೆ.

ಪತ್ರಿಕಾ ಪ್ರಕಟಣೆ ಹೊರಡಿಸಿದ ಅವರು,ಪಟ್ಟಣದ ತಾಲ್ಲೂಕಾ ಸಾರ್ವಜನಿಕ ಆಸ್ಪತ್ರೆ,ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರಗಳು,ಸಮೂದಾಯ ಆರೋಗ್ಯ ಕೇಂದ್ರಗಳು ಹಾಗೂ ಅಂಗನವಾಡಿ ಕೇಂದ್ರಗಳಲ್ಲಿ ಪಲ್ಸ್ ಪೋಲಿಯೋ ಭೂತ್ ಲಭ್ಯವಿರುತ್ತದೆ ಎಂದು ತಿಳಿಸಿದರು.

**ಪೋಲಿಯೋ ಕಾರ್ಯಕ್ರಮದ ವಿವರ:** ಒಟ್ಟು ಜನಸಂಖ್ಯೆ 284266, ಐದು ವರ್ಷದೊಳಗಿನ ಮಕ್ಕಳು 31488.ಲಸಿಕಾ ಕೇಂದ್ರಗಳು 164. ಮನೆ ಬೇಟಿ ತಂಡ 164.ಟ್ರಾನ್‌ಜಿಟ್ ಲಸಿಕಾ ತಂಡ 16.ಸಂಚಾರಿ ಲಸಿಕಾ ತಂಡ 2.ಒಟ್ಟು ತಂಡ–182 ಮೇಲ್ವಿಚಾರಕರು 36.ಒಟ್ಟು ಲಸಿಕಾ ಸಿಬ್ಬಂದಿಗಳು 364.ಇವೆ ಸದುಪಯೋಗ ಪಡೆದುಕೊಳ್ಳಬೇಕು ಎಂದು ಟಿಹೆಚ್‌ಓ ಡಾ.ಮಹ್ಮದ್ ಗಫಾರ್ ತಿಳಿಸಿದ್ದಾರೆ.

### ಕೆರೆ ಒತ್ತುವರಿ ತೆರವಿಗೆ ಕೋರ್ಟ್ ಆದೇಶ


ಉದಯವಾಹಿನಿ ಚಿತ್ರ

• **ಉದಯವಾಹಿನಿ, ಗಂಗಾವತಿ:**

ಸಮೀಪದ ವಿರೂಪಾಪುರ ತಾಂಡಾದ ರಾಮಲಿಂಗೇಶನ ಕೆರೆ ಒತ್ತುವರಿ ಮಾಡಿಕೊಂಡು, ಅನಧಿಕೃತವಾಗಿ ಮನೆ ನಿರ್ಮಿಸಿಕೊಂಡಿರುವವರು ಸ್ವಯಂ ಪ್ರೇರಿತರಾಗಿ ಜಾಗವನ್ನು ತೆರವುಗೊಳಿಸಬೇಕು ಎಂದು ತಹಶೀಲ್ದಾರ್ ಕಚೇರಿ ಸಿಬ್ಬಂದಿಯು, ತಾಂಡಾದ ನಿವಾಸಿಗಳಿಗೆ ನೋಟಿಸ್ ನೀಡಿದರು. ನಗರದ ವಿರೂಪಾಪುರ ತಾಂಡಾದ ಸೇವಾಲಾಲ ದೇವಸ್ಥಾನದಲ್ಲಿ ನಡೆದ ಸಭೆಯಲ್ಲಿ ಅಧಿಕಾರಿಗಳು, ನಿವಾಸಿಗಳಿಗೆ ನೋಟಿಸ್ ನೀಡಿದರು. ಗಂಗಾವತಿ ತಾಲ್ಲೂಕಿನ ಕೆರೆಗಳ ಸಂರಕ್ಷಣೆ ಭಾಗವಾಗಿ ಬೆಂಗಳೂರು ಹೈಕೋರ್ಟ್ ಕೆರೆ ಒತ್ತುವರಿ, ಅನಧಿಕೃತ ಸಾಗುವಳಿ ವಿರುದ್ಧ ಕ್ರಮ ಜರುಗಿಸಲು ಆದೇಶ ನೀಡಿರುತ್ತದೆ. ಈ ಆದೇಶದ ಅನ್ವಯ ಮೇ 15ರಂದು ಕೊಪ್ಪಳ ಜಿಲ್ಲಾಧಿಕಾರಿ ಅವರು, ಸಂಬಂಧಪಟ್ಟ ಅಧಿಕಾರಿಗಳ ಸಭೆ ನಡೆಸಿ, ಕ್ರಮ ಜರುಗಿಸಿ ವರದಿ ಸಲ್ಲಿಸಬೇಕು ಎಂದು ಅಧಿಕಾರಿಗಳಿಗೆ ಸೂಚಿಸಲಾಗಿತ್ತು. ಅದರಂತೆ ಗಂಗಾವತಿ ನಗರಸಭೆ ವ್ಯಾಪ್ತಿಗೆ ಸೇರಿದ ಸರ್ವೆ ನಂ. 55//, 33.06 ಗುಂಟೆ ರಾಮಲಿಂಗೇಶನ ಕೆರೆ(ಸರ್ಕಾರಿ ಕೆರೆ) ಜಮೀನಿನಲ್ಲಿ ಅನಧಿಕೃತವಾಗಿ ಸಾಗುವಳಿ ಮತ್ತು ಮನೆ ನಿರ್ಮಿಸಿಕೊಂಡು ವಾಸ ಮಾಡುತ್ತಿರುವ 216 ನಿವಾಸಿಗಳಿಗೆ ನೋಟಿಸ್ ನೀಡಿ, 10 ದಿನಗಳ ಒಳಗಾಗಿ ಸ್ವಯಂ ಪ್ರೇರಿತವಾಗಿ ತೆರವುಗೊಳಿಸಬೇಕು ಎಂದು ಸೂಚಿಸಲಾಗಿದೆ.

**ತಾಂಡಾ ನಿವಾಸಿಗಳಿಂದ ವಿರೋಧ, ಬೇಸರ:** ಸರ್ಕಾರಿ ಜಾಗ ಒತ್ತುವರಿ ಮಾಡಿಕೊಂಡು ಮನೆಗಳನ್ನು ನಿರ್ಮಿಸಿಕೊಳ್ಳಲಾಗಿದೆ ಎಂದು ತಹಶೀಲ್ದಾರ್ ಸಿಬ್ಬಂದಿಯು, ನಿವಾಸಿಗಳಿಗೆ ನೋಟಿಸ್ ನೀಡಲು ಬಂದಾಗ, ನಿವಾಸಿಗಳು ನೋಟಿಸ್ ಪಡೆಯಲು ವಿರೋಧ ವ್ಯಕ್ತಪಡಿಸಿದರು.

ನಂತರ ನಿವಾಸಿಗಳು ಮಾತನಾಡಿ, 'ಹಲವು ವರ್ಷಗಳಿಂದ ನೂರಾರು ಕುಟುಂಬಗಳು ರಾಮಲಿಂಗೇಶನ ಕೆರೆ ಸುತ್ತಮುತ್ತ ಮನೆಗಳು ನಿರ್ಮಿಸಿಕೊಂಡು ಜೀವನ ನಡೆಸುತ್ತಿದ್ದಾರೆ. ಇದೀಗ ಏಕಾಏಕಿ ಸರ್ಕಾರಿ ಕೆರೆ ಜಾಗ ಒತ್ತುವರಿ ಮಾಡಿಕೊಳ್ಳಲಾಗಿದೆ.

# ಟಾಟಾ ಪವರ್‌ಗೆ ವಿದ್ಯುತ್ ವಿತರಣೆ ವಿರೋಧಿಸಿ ರೈತ ಸಂಘದಿಂದ ಮನವಿ

• **ಉದಯವಾಹಿನಿ, ಶೃಂಗೇರಿ:**

ರಾಜ್ಯದಲ್ಲಿ ವಿದ್ಯುತ್ ವಿತರಣೆಗೆ ಟಾಟಾ ಪವರ್ ಕಂಪನಿಗೆ ಪರವಾನಗಿ ನೀಡುವ ಸರ್ಕಾರದ ಕ್ರಮವನ್ನು ರೈತ ಸಂಘದಿಂದ ವಿರೋಧಿಸಿ, ತಹಶೀಲ್ದಾರ್‌ರಿಗೆ ಮನವಿ ಪತ್ರ ನೀಡಿದರು. ರೈತ ಸಂಘದ ಅಧ್ಯಕ್ಷ ಕಾನೋಳ್ಳಿ ಚಂದ್ರಶೇಖರ್ ಮಾತನಾಡಿ, ಗ್ರಾಮೀಣ ಮತ್ತು ಹಿಂದುಳಿದ ಪ್ರದೇಶದಲ್ಲಿ ವಿದ್ಯುತ್ ಅಡಚಣೆಯನ್ನು ಸರಿಯಾದ ಸಮಯದಲ್ಲಿ ಸರಿಪಡಿಸಲು ಖಾಸಗಿ ಸಂಸ್ಥೆಯಿಂದ ಸಾಧ್ಯವಾಗುವುದಿಲ್ಲ. ಮುರಿದ ಕಂಬದ ನಿರ್ವಹಣೆಯಲ್ಲಿ ವಿಳಂಬವಾಗುವ ಸಾಧ್ಯತೆ ಇರುತ್ತದೆ. ವಿದ್ಯುತ್ ಮಾರ್ಗದ ನಷ್ಟವನ್ನು ಹಾಗೂ ವೀಲಿಂಗ್ ಮುಖಾಂತರ ಬರುವ ಖರ್ಚನ್ನು ನೇರವಾಗಿ ಗ್ರಾಹಕರ ಮೇಲೆ ಹೇರುವ ಸಾಧ್ಯತೆ ಇದೆ. ವಿದ್ಯುತ್ ಬಿಲ್ ಅಧಿಕವಾಗಲಿದ್ದು, ಗ್ರಾಹಕರಿಗೆ ತೀವ್ರ ನಷ್ಟವಾಗಲಿದೆ ಎಂದರು.

ಸಂಘದ ಪೂರ್ಣೇಶ್ ಉಳುವಳ್ಳಿ ಮಾತನಾಡಿ, ಖಾಸಗೀಕರಣದಿಂದ ನೌಕರರ ಸೇವಾ ಭದ್ರತೆ ಇಲ್ಲವಾಗುತ್ತದೆ. ಉದ್ಯೋಗಾವಕಾಶ ಕೈ ತಪ್ಪುತ್ತದೆ. ಯಾವುದೇ ಕಾರಣಕ್ಕೂ ವಿದ್ಯುತ್ ಸಂಸ್ಥೆಯನ್ನು ಖಾಸಗಿಗೆ ನೀಡದೆ, ಸರ್ಕಾರದ ಅಧೀನದಲ್ಲೇ ಕಾರ್ಯ ನಿರ್ವಹಿಸಬೇಕು ಎಂದು ಒತ್ತಾಯಿಸಿದರು. ತಹಶೀಲ್ದಾರ್ ಅನೂಪ್ ಸಂಜೋಗ್‌ಗೆ ಮನವಿ ಪತ್ರ ಸಲ್ಲಿಸಲಾಯಿತು. ಸಂಘದ ಸದಸ್ಯರಾದ ಚನ್ನಕೇಶವ್ ಮೆಣಸೆ, ಧರೆಕೊಪ್ಪ ಜಗದೀಶ ಇದ್ದರು.

# ಹಿಂದೂ ಮುಸ್ಲಿಂರ ಭಾವೈಕ್ಯತೆ ಸಾರುವ ಮೊಹರಂ


• **ಉದಯವಾಹಿನಿ,ಯಲಬುರ್ಗಾ :**

ಪ್ರತಿ ವರ್ಷ ನಡೆಯುವ ಮೊಹರಂ ಹಬ್ಬ ಹಿಂದೂ ಮುಸ್ಲಿಂರ ಭಾವೈಕ್ಯತೆ ಸಾರುವ ಮೊಹರಂ ಸಂಭ್ರಮಾಚರಣೆ ಎಂದು ಹಿಂದು–ಮುಸ್ಲಿಂ ಒಂದೇ ಎಂದು ಇಲ್ಲಿ ಅಲ್ಲಾನು ಒಂದೇ ಅಲ್ಲಮರು ಒಂದೇ ಎಂದು ಸಾರಿರುವ ಗ್ರಾಮದಲ್ಲಿ ಐತಿಹಾಸಿಕ ಮೊಹರಂ ಹಬ್ಬ ಇದು ಉತ್ತರ ಕರ್ನಾಟಕ ಭಾಗದಲ್ಲಿ ಐತಿಹಾಸಿಕವಾಗಿ ಭಾವೈಕ್ಯತೆಯಿಂದ ಆಚರಿಸುತ್ತಾರೆ.

ತಾಲ್ಲೂಕಿನ ಮುಧೋಳ ಗ್ರಾಮದಲ್ಲಿ ಮೊಹರಂನ ಮೊದಲ ದಿನದಿಂದ ಪ್ರಾರಂಭಗೊಂಡು ಮೊಹರಂ ಕೊನೆಯ ದಿನದ ವರೆಗೂ ಸಡಗರ ಸಂಭ್ರಮದಿಂದ ಆಚರಿಸುತ್ತಾರೆ.

ಮೊಹರಂ ಇಲ್ಲಿ ಕೇವಲ ಹಬ್ಬವಾಗದೇ ಐತಿಹಾಸಿಕ ಭಾವೈಕ್ಯತೆಯ ಸೇತುವೆಯಾಗಿದೆ. ಇಲ್ಲಿ ಪ್ರತಿಯೊಬ್ಬರು ಮೊಹರಂ ( ಅಲೆ ಹಬ್ಬ ) ಬಂತೆಂದರೆ ಸಾಕು ಹತ್ತು ದಿನಗಳ ಕಾಲ ಎಲ್ಲಿಲ್ಲದ ಸಡಗರ ಸಂಭ್ರಮ ದಿಂದ ಯಾವುದೇ ಜಾತಿ ಧರ್ಮ ಬೇಧವಿಲ್ಲದೆ ಆಚರಿಸುತ್ತಾರೆ.ಈ ಗ್ರಾಮದಲ್ಲಿ ಹತ್ತು ಸಾವಿರಕ್ಕೂ ಹೆಚ್ಚು ಭಕ್ತರು ಆಗಮಿಸಿ, ಹಸೇನ್ ಹುಸೇನ್ ದೇವರ ದರ್ಶನ ಪಡೆದರು. ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಯಿತು. ಹಜರತ್ ಸಯ್ಯದ್ ಶಾಹ ವಲಿ ಅಂಜುಮನ್ ಕಮಿಟಿಯ ಗುರು ಹಿರಿಯರು ಇದ್ದರು. ಹಾಗೂ ಯುವಕರ ಹಜರತ್ ಸಯ್ಯದ್ ಶಾಹ ವಲಿ ಅಂಜುಮನ್ ಕಮಿಟಿಯ, ಹೆಜ್ಜೆ ಕುಣಿತ ಮತ್ತು ಲಂಬಾಣಿ ವೇಷಗಾರರ ಕುಣಿತ ಗ್ರಾಮದ ಎಲ್ಲರ ಗಮನ ಸೆಳೆದವು. ತದ ನಂತರ ದೊಡ್ಡ ಮಸೂತಿ ಯಿಂದ ಚೌಡಿ ಮಸೂತಿ ವರೆಗೂ ಜನಸಾಗರದ ನಡುವೆ ಹಸೇನ್ ಹುಸೇನ್ ರ ಮೆರವಣಿಗೆ ಅದ್ದೂರಿಯಾಗಿ ನಡೆಯಿತು,

ಮೊಹರಂ ಕೊನೆಯ ಹಿಂದಿನ ದಿನದಂದು ಗುರುವಾರ ಕತಲ್ ರಾತ್ರಿ ದಿನದಂದು ಅಲಾಯಿ ದೇವರಿಗೆ ಸಕ್ಕರೆ ನೈವೇದ್ಯ, ಹರಕೆ ತೀರಿಸಿದರು. ನಂತರ ಮಾರನೇ ಶುಕ್ರವಾರ ಬೆಳಗಿನ ಜಾವ 4:30 ರ ಸುಮಾರಿಗೆ ಹಸೇನ್ ಹುಸೇನ್ ದೇವರು ಹೊತ್ತುವರು ಅಲಾಯಿ ಕುಣಿಯಲ್ಲಿ ಹಾಕಿದ ಅಗ್ನಿ ಕುಂಡ ತುಳಿದು, ಗ್ರಾಮದ ಜನರಿಗೆ ವಿಜೃಂಭಣೆ ಯಿಂದ ಹಬ್ಬವನ್ನು ಆಚರಿಸಿ ಎಂದು ವಾಕ್ಯವನ್ನು ನುಡಿದರು. ಭಕ್ತರು, ದೇವರಿಗೆ ಮಂಡಾಳು, ಉತ್ತತ್ತಿ ಸಮರ್ಪಿಸಿದರು. ಸಂಜೆ ವೇಳೆ ದೇವರನ್ನು ಹೊಳೆಗೆ ಕಳುಹಿಸ ಲಾಯಿತು. ಗ್ರಾಮದ ಹಿಂದೂ ಮುಸಲ್ಮಾನ್ ಬಾಂಧವರೆಲ್ಲರೂ ಭಾವೈಕ್ಯತೆಯಿಂದ ಮೆರವಣಿಗೆಯಲ್ಲಿ


ಉದಯವಾಹಿನಿ ಚಿತ್ರ

ಭಾಗವಹಿಸಿದರು. ಹಾಗೂ ಸುತ್ತ ಮುತ್ತಲಿನ ಗ್ರಾಮ ದಿಂದ ಬಂದ ಭಕ್ತರು ಆಗಮಿಸಿದ್ದರು. ಯಲಬುರ್ಗಾ ಪೊಲೀಸ್ ಠಾಣೆಯ ಪಿ ಎಸ್ ಐ ವಿಜೇಯ್ ಪ್ರತಾಪ್ ಮತ್ತು ಠಾಣಾ ಸಿಂಬದಿಗಳು ಆಗಮಿಸಿ ಬಿಗಿ ಪೊಲೀಸ್ ಬಂದೋಬಸ್ತ್ ಕೈಗೊಳ್ಳಲಾಗಿತ್ತು. ಹಜರತ್ ಸಯ್ಯದ್ ಶಾಹ ವಲಿ ಅಂಜುಮನ್ ಕಮಿಟಿಯ ಗುರು ಹಿರಿಯರು ಇದ್ದರು. ಹಾಗೂ ಯುವಕರ ಹಜರತ್ ಸಯ್ಯದ್ ಶಾಹ ವಲಿ ಅಂಜುಮನ್ ಕಮಿಟಿ. ಗ್ರಾಮದ ಸಾರ್ವಜನಿಕ ಹಿರಿಯ ಮುಖಂಡರು ಮತ್ತು ಮಹಿಳೆಯರು, ಪುಟಾಣಿ ಮಕ್ಕಳು ಎಲ್ಲರೂ ಮೆರವಣಿಗೆಯಲ್ಲಿ ಭಾಗವಹಿಸಿ ಸಂಭ್ರಮದಿಂದ ಮೊಹರಂ ಕೊನೆಯ ದಿನದ ಆಚರಣೆ ಸಡಗರ ಸಂಭ್ರಮದಿಂದ ಆಚರಣೆ ಮಾಡಿದರು,

# ತುಂಗಭದ್ರಾ ನದಿಯಲ್ಲಿ ನೀರಿನ ಪ್ರಮಾಣ ಇಳಿಕೆ ಮೀನುಗಾರರಿಗೆ ಸಂಕಷ್ಟ

• **ಉದಯವಾಹಿನಿ, ಮುಂಡರಗಿ:**

ಮಲೆನಾಡು ಹಾಗೂ ತುಂಗಭದ್ರಾ ಅಚ್ಚುಕಟ್ಟು ಪ್ರದೇಶದಲ್ಲಿ ನಿರೀಕ್ಷೆಯಷ್ಟು ಮಳೆ ಸುರಿಯದ ಕಾರಣ ತಾಲ್ಲೂಕಿನ ವಿವಿಧ ಗ್ರಾಮಗಳ ಮೂಲಕ ಹರಿಯುವ ತುಂಗಭದ್ರಾ ನದಿಯಲ್ಲಿ ನೀರಿನ ಪ್ರಮಾಣ ಗಣನೀಯವಾಗಿ ಕಡಿಮೆಯಾಗಿದೆ. ಇದರಿಂದಾಗಿ ಮೀನುಗಾರಿಕೆಯನ್ನೇ ನಂಬಿಕೊಂಡಿದ್ದ ನೂರಾರು ಮೀನುಗಾರರ ಕುಟುಂಬಗಳು ಸಂಕಷ್ಟಕ್ಕೀಡಾಗಿವೆ.

ತಾಲ್ಲೂಕಿನ ಕೊರ್ಲಹಳ್ಳಿ ಗ್ರಾಮವೊಂದರಲ್ಲೇ ನೂರಕ್ಕೂ ಹೆಚ್ಚು ಮೀನುಗಾರರ ಕುಟುಂಬಗಳಿವೆ. ಹಮ್ಮಿಗಿ, ಶಿಂಗಟಾಲೂರ, ಹೆಸರೂರು ಸೇರಿದಂತೆ ನದಿ ದಂಡೆಯ ಗ್ರಾಮಗಳಲ್ಲಿಯೂ ಹಲವಾರು ಮೀನುಗಾರರಿದ್ದಾರೆ.ಮೀನುಗಾರಿಕೆಯೊಂದೇ ಇವರ ಬದುಕಿನ ಕಾಯಕವಾಗಿದೆ.


ಪ್ರಸ್ತುತ ವರ್ಷ ಮಳೆಯ ಕೊರತೆಯಿಂದಾಗಿ ತುಂಗಭದ್ರಾ ನದಿಗೆ ಸಾಕಷ್ಟು ಪ್ರಮಾಣದಲ್ಲಿ ಹರಿದು ಬಂದಿಲ್ಲ. ತಾಲ್ಲೂಕಿನ ಹಮ್ಮಿಗಿ ಗ್ರಾಮದಲ್ಲಿರುವ ಶಿಂಗಟಾಲೂರ ಬ್ಯಾರೇಜಿಗೆ


ಉದಯವಾಹಿನಿ ಚಿತ್ರ

ಕಳೆದ ವರ್ಷ ಜೂನ್ 24ರಂದು 20,905 ಕ್ಯೂಸೆಕ್ ನೀರು ಹರಿದುಬಂದಿತ್ತು. ಈ ವರ್ಷ ಜೂನ್ 24ರಂದು ಕೇವಲ 400 ಕ್ಯೂಸೆಕ್ ನೀರು ಹರಿದುಬಂದಿದೆ. ನೀರು ಹರಿದುಬಂದಿಲ್ಲ.ನೀರಿಲ್ಲದ ಕಾರಣ ಮೀನುಗಾರಿಕೆಗೂ ತೀವ್ರ ಹಿನ್ನಡೆಯಾಗಿದ್ದು,ಉದ್ಯೋಗವಿಲ್ಲದೆ ಮೀನುಗಾರರ ಕುಟುಂಬಗಳು ಪರದಾಡುತ್ತಿವೆ. ಮಳೆ ಸುರಿಯದ ಕಾರಣ ಕೃಷಿ ಚಟುವಟಿಕೆಯೂ ಸ್ಥಗಿತಗೊಂಡಿದ್ದು, ಅಲ್ಲಿಯೂ ಕೆಲಸ ಇಲ್ಲವಾಗಿದೆ. ಹೀಗಾಗಿ, ಏನು ಮಾಡಬೇಕೆಂದು ತಿಳಿಯದೆ ಮೀನುಗಾರರು ಕಂಗಾಲಾಗಿದ್ದಾರೆ. 'ನದಿಯಲ್ಲಿ ಸಾಕಷ್ಟು ಪ್ರಮಾಣದಲ್ಲಿ ನೀರಿದ್ದರೆ ಮೀನುಗಾರರ ಒಂದು ಕುಟುಂಬವು ನಿತ್ಯ 75 ಕೆ.ಜಿಯಿಂದ 100 ಕೆ.ಜಿವರೆಗೆ ಮೀನುಗಳನ್ನು ಸಂಗ್ರಹಿಸುತ್ತಿತ್ತು. ಆದರೆ, ನದಿಯಲ್ಲಿ ನೀರಿಲ್ಲದೆ ಮುಂಜಾನೆಯಿಂದ ಸಂಜೆಯವರೆಗೆ ಕಾದರೂ 3 ಕೆ.ಜಿಯಿಂದ 4 ಕೆ.ಜಿಯಷ್ಟು ಮೀನು ಮಾತ್ರ ದೊರೆಯುತ್ತಿವೆ. ಇಷ್ಟಕ್ಕೆ ಹೆಚ್ಚಿನ ಹಣ ಸಿಗದ ಕಾರಣ, ದೈನಂದಿನ ಜೀವನ ನಡೆಸುವುದು ಕಷ್ಟವಾಗಿದೆ' ಎಂದು ಮಹೇಶ ಶಿಳ್ಳೆಕ್ಯಾತರ ತಿಳಿಸಿದರು.

ನದಿಯಲ್ಲಿ ಸಾಕಷ್ಟು ಮೀನುಗಳು ದೊರೆಯುತ್ತಿಲ್ಲ. ನಾವು ಮೀನುಗಾರಿಕೆಯನ್ನೇ ಅವಲಂಬಿಸಿದ್ದೇವೆ. ನದಿ ಉಕ್ಕಿ ಹರಿದಾಗ ಮೀನುಗಳು ಹಿನ್ನೀರು ಆಶ್ರಯಿಸುತ್ತವೆ. ಉಕ್ಕಿ ಹರಿಯುವ ನೀರಿನಲ್ಲಿ ತೆಪ್ಪದಲ್ಲಿ ಸಾಗಿ, ಬಲೆ ಹಾಕಿ ಮೀನು ಹಿಡಿಯುವುದು ಕಷ್ಟಸಾಧ್ಯ. ಹರಿಯುವ ನೀರಿನೊಂದಿಗೆ ಮೀನುಗಳೂ ವೇಗವಾಗಿ ಹರಿದು ಹೋಗುತ್ತವೆ. ಹೀಗಾಗಿ, ತುಂಬಿಹರಿಯುವ ನದಿಗಿಂತ ಹಿನ್ನೀರು ಪ್ರದೇಶಗಳು ಹೆಚ್ಚು ಆದಾಯ ನೀಡುತ್ತವೆ. ನದಿಯಲ್ಲಿ ನೀರಿಲ್ಲದೆ ಹಿನ್ನೀರು ಸಹ ಬರಿದಾಗಿದೆ ಎಂಬುದು ಮೀನುಗಾರರ ಅಳಲು.

# ರುಸ್ತಾಂಪೂರದಲ್ಲಿ ಭಕ್ತಿ ಶ್ರದ್ಧೆಯಿಂದ ಮೊಹರಂ ಹಬ್ಬ ಆಚರಣೆ


ಉದಯವಾಹಿನಿ ಚಿತ್ರ

• **ಉದಯವಾಹಿನಿ,ಚಿಂಚೋಳಿ**

ತಾಲ್ಲೂಕಿನ ರುಸ್ತಾಂಪೂರ ಗ್ರಾಮದಲ್ಲಿ ಅತ್ಯಂತ ಸಡಗರ ಸಂಭ್ರಮ ಭಕ್ತಿ ಶ್ರದ್ಧೆಯಿಂದ ಮೊಹರಂ ಹಬ್ಬ ವಿಜೃಂಭಣೆಯಿಂದ ಆಚರಣೆ ಮಾಡಲಾಯಿತು.ಹಜರತ್ ಮಹ್ಮದ್ ಹನೀಫ್ ಸಾಬ್ ಪೀರ್ (ಪಂಜಾಗಳು) ಗ್ರಾಮದಲ್ಲಿ 10 ದಿನಗಳ ಪ್ರತಿಷ್ಠಾಪನೆ ಮಾಡಿದರೆ ಇಮಾಮ್ ಖಾಸಿಂ 05 ದಿನಗಳು ಪ್ರತಿಷ್ಠಾಪನೆ ಭಕ್ತರು ಮಾಡಿ 10ನೇ ಮೊಹರಂ ದಿನ ಹಜರತ್ ಮಹ್ಮದ್ ಹನೀಫ್ ಸಾಬ್ ಪೀರ್,ಇಮಾಮ್ ಖಾಸಿಂ ಪೀರ್ ಪಂಜಗಳು ಬೆಳಿಗ್ಗೆ 07 ಗಂಟೆಗೆ ಎಬ್ಬಿಸಿ ಗ್ರಾಮದ ಹೊರವಲಯದಲ್ಲಿರುವ ಹಜರತ್ ಮಹ್ಮದ್ ಹನೀಫ್ ದರ್ಗಾಕ್ಕೆ ಮೆರವಣಿಗೆ ಮೂಲಕ ಆಗಮಿಸಿ ಭೇಟಿಯಾಗಿ ಅಪ್ಪಣೆ ಪಡೆದು ಮತ್ತೆ ಮೆರವಣಿಗೆ ಮೂಲಕ ಪೀರ್ ಕೂಡಿಸುವ ಸ್ಥಳಕ್ಕೆ ಹೋಗಿ ಪೀರ್ ಪ್ರತಿಷ್ಠಾಪನೆ ಮಾಡಿ ಭಕ್ತರು ಅಲಾಯಿ ಆಟವಾಡುತ್ತಾರೆ,ರಾತ್ರಿ ಪೀರ್ ದಫಾನ್ ಮಾಡುತ್ತಾರೆ.ಹಜರತ್ ಮಹ್ಮದ್ ಹನೀಫ್ ಸಾಬ್ ಭಕ್ತರು ಸುತ್ತಮುತ್ತಲಿನ ಗ್ರಾಮಗಳಾದ ಚಿಂಚೋಳಿ,ಕನಕಪುರ,ಹೂವಿನಭಾವಿ,ಪಸ್ತಾಪುರ,ಯಲಕಪಳ್ಳಿ, ಸೇರಿದಂತೆ ವಿವಿಧ ಗ್ರಾಮಗಳ ಹಿಂದೂ ಮುಸ್ಲಿಂ ಬಾಂಧವರು ಭಕ್ತರು ಆಗಮಿಸಿ ತಮ್ಮ ತಮ್ಮ ಹರಕೆ ತೀರಿಸಲು ಹೂ,ಕಾಯಿ,ತೆಂಗು,ಖಾರಿಖೀ,ನಾಣ್ಯ,ಅನ್ನಸಂತರ್ಪಣೆ ಮಾಡಿ ಭಕ್ತಿ ಅರ್ಪಿಸಿದರು. ಈ ಸಂದರ್ಭದಲ್ಲಿ ಮಾದಿಗ ಮಹಾಸಭಾ ಜಿಲ್ಲಾಧ್ಯಕ್ಷ ಗೋಪಾಲರಾವ ಕಟ್ಟಿಮನಿ,ಶಿವಯೋಗಿ ರುಸ್ತಾಂಪೂರ,ರೇವಣಸಿದಪ್ಪ,ನಾಗರೆಡ್ಡಿ,ಶ್ರೀಕಾಂತ್ ಮೇತ್ರಿ,ಸಂಜುರೆಡ್ಡಿ,ರಾಮಣ್ಣ ನಾಟೀಕಾರ,ಸಾಗರ್ ಆನಂದಿ,ಕರಿಂಸಾಬ,ನರಸಪ್ಪ,ಅನೇಕ ನೂರಾರು ಭಕ್ತರಿದ್ದರು.

# ಒಟಿಎಸ್ ಜಾರಿಗಾಗಿ ನಗರಾಭಿವೃದ್ಧಿ ಸಚಿವರ ಭೇಟಿಗೆ ನಿಯೋಗ ನಿರ್ಧಾರ

**ಜಾರಿಗಾಗಿ ಸರ್ಕಾರದ ಮೇಲೆ ನಿಯೋಗದಿಂದ ಒತ್ತಡ ಹಾಕೋಣ ಎಂದು ಮೇಯರ್ ಜ್ಯೋತಿ ಪಾಟೀಲ ಹೇಳಿದರು.**

• **ಉದಯವಾಹಿನಿ, ಹುಬ್ಬಳ್ಳಿ:**

ನೀರಿನ ಬಾಕಿ ಕರ ಪಾವತಿಗೆ 'ಒಂದು ಬಾರಿ ಪರಿಹಾರ' (ಒಟಿಎಸ್) ಯೋಜನೆ ಜಾರಿಗೊಳಿಸಬೇಕು. ಈ ಕುರಿತು ಪಾಲಿಕೆಯ ಸರ್ವಪಕ್ಷದ ಸದಸ್ಯರ ನಿಯೋಗದಿಂದ ನಗರಾಭಿವೃದ್ಧಿ ಸಚಿವರನ್ನು ಜುಲೈ 4ರೊಳಗೆ ಭೇಟಿ ಮಾಡಿ ಮನವಿ ಸಲ್ಲಿಸುವ ಕುರಿತು ಗುರುವಾರ ನಗರದಲ್ಲಿ ನಡೆದ ಹು–ಧಾ ಮಹಾನಗರ ಪಾಲಿಕೆ ಸಾಮಾನ್ಯ ಸಭೆಯಲ್ಲಿ ನಿರ್ಧರಿಸಲಾಯಿತು.

**1: ಖಾಲಿ ನಿವೇಶನ ಸ್ವಚ್ಛತೆ ಕ್ರಮವಹಿಸಿ**

**2:'ಒಟಿಎಸ್' ಜಾರಿಗೆ ಸರ್ಕಾರ**

**3: 5 ಸಾವಿರ ಗಿಡ ನೆಡಲು ಸೂಚನೆ**

'ಒಟಿಎಸ್' ಯೋಜನೆ ಜಾರಿಗಾಗಿ ಪಾಲಿಕೆಯಲ್ಲಿ ಠರಾವು ಮಾಡಿ ರಾಜ್ಯ ಸರ್ಕಾರಕ್ಕೆ ಈಗಾಗಲೇ ಕಳುಹಿಸಲಾಗಿದೆ. ಆದರೆ, ಸ್ಪಂದನೆ ದೊರೆಕಿಲ್ಲ. ಜಾರಿಗಾಗಿ ಸರ್ಕಾರದ ಮೇಲೆ ನಿಯೋಗದಿಂದ ಒತ್ತಡ ಹಾಕೋಣ' ಎಂದು ಮೇಯರ್ ಜ್ಯೋತಿ ಪಾಟೀಲ ಹೇಳಿದರು.

ಸದಸ್ಯರಾದ ಶಿವು ಮೆಣಸಿನಕಾಯಿ, ತಿಪ್ಪಣ್ಣ ಮಜ್ಜಗಿ ಅವರು ವಿಷಯ ಪ್ರಸ್ತಾಪಿಸಿ, 'ಅವಳಿ ನಗರದಲ್ಲಿ 195 ಕೋಟಿ ಅಸಲು ಹಾಗೂ 128 ಕೋಟಿ ಬಡ್ಡಿ ಸೇರಿ 324 ಕೋಟಿ ನೀರಿನ ಕರ ಪಾವತಿ ಬಾಕಿ ಇದೆ. ಅಸಲು ಮಾತ್ರ ಒಟಿಎಸ್ ವಿಧಾನದಿಂದ ಪಾವತಿಸಿದರೆ ಪಾಲಿಕೆಯ ಆದಾಯ ಹೆಚ್ಚುವುದಲ್ಲದೆ, ಗ್ರಾಹಕರಿಗೂ ಅನುಕೂಲ ಆಗಲಿದೆ' ಎಂದರು.

**ಸರ್ವ ಪಕ್ಷದವರು ಸೇರಿ ಹೋರಾಟ ಮಾಡೋಣ'**


ಉದಯವಾಹಿನಿ ಚಿತ್ರ

'ಒಟಿಎಸ್' ಜಾರಿಗೆ ಸರ್ಕಾರ ಸ್ಪಂದಿಸದಿದ್ದರೆ ಸರ್ವ ಪಕ್ಷದವರು ಸೇರಿ ಹೋರಾಟ ಮಾಡೋಣ' ಎಂದು ಕಾಂಗ್ರೆಸ್ ಸದಸ್ಯ ಆರೀಫ್ ಭದ್ರಾಪೂರ ಹೇಳಿದರು. 'ನೀರಿನ ಕರಕ್ಕೆ ಸಂಬಂಧಿಸಿ ಸದ್ಯ ಬಡ್ಡಿ ಬಿಟ್ಟು ಅಸಲು ಮಾತ್ರ ತುಂಬಿಸಿಕೊಳ್ಳಲಿ. ಸರ್ಕಾರದ ನಿರ್ಧಾರದ ಬಳಿಕ ಮುಂದಿನ ಯೋಚನೆ ಮಾಡೋಣ' ಎಂದು ಸಭಾ ನಾಯಕ ಈರೇಶ ಅಂಚಟಗೇರಿ ಹೇಳಿದರು.

**ಖಾಲಿ ನಿವೇಶನ ಸ್ವಚ್ಛತೆ ಕ್ರಮವಹಿಸಿ:** ಪಾಲಿಕೆ ವ್ಯಾಪ್ತಿಯಲ್ಲಿರುವ ಖಾಲಿ ನಿವೇಶನಗಳ ಸ್ವಚ್ಛತೆಗೆ ಕ್ರಮ ಕೈಗೊಳ್ಳುವಂತೆ ಸರ್ವಪಕ್ಷದ ಸದಸ್ಯರು ಆಗ್ರಹಿಸಿದರು. ವಿಷಯ ಪ್ರಸ್ತಾಪಿಸಿದ ಸದಸ್ಯ ಶಿವು ಹಿರೇಮಠ, 'ಅವಳಿ ನಗರದಲ್ಲಿ ಖಾಲಿ ನಿವೇಶನದಲ್ಲಿ ಕಸ, ಗಿಡಗಂಟಿಗಳು ಬೆಳೆದು ಅಕ್ಕಪಕ್ಕದ ನಿವಾಸಿಗಳಿಗೆ ತೊಂದರೆ ಆಗುತ್ತಿದೆ' ಎಂದರು.

> 'ಅರಣ್ಯ ಇಲಾಖೆಯಿಂದ 25 ಸಾವಿರ ಗಿಡಗಳನ್ನು ಖರೀದಿಸಿ, ಎರಡು ವರ್ಷದಲ್ಲಿ 20 ಸಾವಿರ ಗಿಡಗಳನ್ನು ಪಾಲಿಕೆ ವ್ಯಾಪ್ತಿಯಲ್ಲಿ ನೆಡಲಾಗಿದೆ' ಎಂದು ಪಾಲಿಕೆಯ ತೋಟಗಾರಿಕೆ ಇಲಾಖೆ ಅಧಿಕಾರಿ ಹೇಳಿದರು. 'ಉಳಿದ 5 ಸಾವಿರ ಗಿಡಗಳನ್ನು ಜುಲೈನೊಳಗೆ ನೆಡಬೇಕು. ಅಗತ್ಯವಿದ್ದರೆ ಹೆಚ್ಚುವರಿ ಗಿಡ ಖರೀದಿಸಬೇಕು' ಎಂದು ಸೂಚಿಸಿದರು –ಮೇಯರ್

'ಖಾಲಿ ನಿವೇಶನದಲ್ಲಿನ ಕಸದಿಂದಾಗಿ ಜನರು ಡೆಂಗಿ ರೋಗದ ಭೀತಿಯಲ್ಲಿದ್ದಾರೆ ಎಂದು ಸದಸ್ಯ ಮಂಜುನಾಥ ಬಟ್ಟೆಣ್ಣವರ ಹೇಳಿದರು. ಇದಕ್ಕೆ ಪ್ರತಿಕ್ರಿಯಿಸಿದ ಆಯುಕ್ತ ರುದ್ರೇಶ ಘಾಳಿ, 'ಖಾಲಿ ನಿವೇಶನ ಸ್ವಚ್ಛಗೊಳಿಸುವುದು ಮಾಲೀಕರ ಜವಾಬ್ದಾರಿ. ನೋಟಿಸ್ ನೀಡಿ ದಂಡ ವಿಧಿಸಲಾಗುವುದು' ಎಂದರು.

## ಪೌರಕಾರ್ಮಿಕರಿಗೆ ಉಪಾಹಾರದ ಬದಲಿಗೆ ಹಣ ನೀಡಿ

**'ಏಜೆನ್ಸಿ ಮೂಲಕ ಪೌರಕಾರ್ಮಿಕರಿಗೆ ಕಳಪೆ ತಿಂಡಿ ಪೂರೈಕೆ ಮಾಡಲಾಗುತ್ತಿದೆ' ಎಂಬ ದೂರುಗಳಿವೆ. ತಿಂಡಿ ನೀಡುವ ಬದಲಿಗೆ ಆ ಹಣವನ್ನು ವೇತನದ ಜೊತೆಗೆ ಪೌರಕಾರ್ಮಿಕರ ಖಾತೆಗೆ ಹಾಕಬೇಕು' ಎಂದು ಮೇಯರ್‌ಗೆ ಆರೀಫ್ ಭದ್ರಾಪೂರ ಮನವಿ ಮಾಡಿದರು.**

> 'ಇದಕ್ಕೆ ಕಾನೂನಾತ್ಮಕವಾಗಿ ಅವಕಾಶ ಇದ್ದರೆ ಮಾಡಲಾಗುವುದು. ಇಲ್ಲದಿದ್ದರೆ ವಾರ್ಡ್‌ವಾರು ಅಥವಾ ವಿಭಾಗವಾರು ಉಪಾಹಾರದ ವ್ಯವಸ್ಥೆ ಕಲ್ಪಿಸಲಾಗುವುದು' ಎಂದು ತಿಳಿಸಿದರು.
>
> ಮೇಯರ್

ಖಾಲಿ ನಿವೇಶನ ಸ್ವಚ್ಛಗೊಳಿಸುವಂತೆ ಮಾಲೀಕರಿಗೆ ಏಳು ದಿನ ಅವಕಾಶ ನೀಡಬೇಕು. ಮಾಡದಿದ್ದರೆ ದುಪ್ಪಟ್ಟು ದಂಡ ವಿಧಿಸಬೇಕು. ಸರ್ಕಾರಕ್ಕೆ ಸೇರಿದ ಖಾಲಿ ನಿವೇಶನಗಳನ್ನು ಸ್ವಚ್ಛಗೊಳಿಸಲು ಆಯಾ ಇಲಾಖೆಗಳಿಗೆ ಪತ್ರ ಬರೆದು ಸೂಚಿಸಬೇಕು' ಎಂದು ಪಾಲಿಕೆ ಆಯುಕ್ತರಿಗೆ ಮೇಯರ್ ಸೂಚಿಸಿದರು.

'ಪ್ರತಿ ವರ್ಷ ಮಳೆಗಾಲ ಆರಂಭಕ್ಕೂ ಮುನ್ನ ಸಸಿಗಳನ್ನು ನೆಡಲಾಗುತ್ತಿತ್ತು. ಈ ಬಾರಿ ಒಂದೇ ಒಂದು ಗಿಡಗಳನ್ನೂ ನೆಟ್ಟಿಲ್ಲ' ಎಂದು ಸುವರ್ಣಾ ಕಲ್ಲಕುಂಟ ಸಭೆಯ ಗಮನಕ್ಕೆ ತಂದರು.

## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಬೆಳಿಗ್ಗೆ | 09:00 ರಿಂದ 10:30 |
| ಗುಳಿಕ ಕಾಲ | ಬೆಳಿಗ್ಗೆ | 06:00 ರಿಂದ 07:30 |
| ಯಮಗಂಡ ಕಾಲ | ಮಧ್ಯಾಹ್ನ | 01:30 ರಿಂದ 03:00 |

**ಮೇಷ** ಅಸಾಧ್ಯವಾದ ಅನಗತ್ಯ ಚಿಂತೆಯಲ್ಲಿ ನಿಮ್ಮ ಶಕ್ತಿ ವ್ಯರ್ಥ ಮಾಡುವ ಬದಲು ಅದನ್ನು ಸರಿಯಾದ ದಿಕ್ಕಿನಲ್ಲಿ ಬಳಸಿ. ಹಣಕಾಸಿನಲ್ಲಿ ಸುಧಾರಣೆ ದೀರ್ಘಕಾಲದಿಂದ ಬಾಕಿಯಿರುವ ನಿಮ್ಮ ಬಾಕಿಗಳು ಮತ್ತು ಬಿಲ್ಲುಗಳನ್ನು ಪಾವತಿಸುವುದನ್ನು ಅನುಕೂಲಕರವಾಗಿಸುತ್ತದೆ.

**ವೃಷಭ** ದೂರದ ಸಂಬಂಧಿಗಳಿಂದ ಅನಿರೀಕ್ಷಿತವಾದ ಒಳ್ಳೆಯ ಸುದ್ದಿ ಇಡೀ ಕುಟುಂಬಕ್ಕೆ ಸಂತೋಷದ ಕ್ಷಣಗಳನ್ನು ತರುವುದು. ನಿಮ್ಮ ಪ್ರೀತಿಪಾತ್ರರೊಡನೆ ನಿಮ್ಮ ವೈಯಕ್ತಿಕ ಭಾವನೆಗಳು / ರಹಸ್ಯಗಳನ್ನು ಹಂಚಿಕೊಳ್ಳಲು ಇದು ಸರಿಯಾದ ಸಮಯವಲ್ಲ. ಕಟ್ಟುಕತೆಗಳು ಮತ್ತು ವದಂತಿಗಳಿಂದ ದೂರವಿರಿ.

**ಮಿಥುನ** ನಿಮ್ಮ ಶೀಘ್ರ ಕ್ರಮ ನಿಮ್ಮನ್ನು ಪ್ರೇರೇಪಿಸುತ್ತದೆ. ಯಶಸ್ಸು ಸಾಧಿಸಲು-ಸಮಯದ ಜೊತೆ ನಿಮ್ಮ ಆಲೋಚನೆಗಳನ್ನು ಬದಲಾಯಿಸಿಕೊಳ್ಳಿ -ಇದು ನಿಮ್ಮ ದೃಷ್ಟಿಯನ್ನು ವಿಸ್ತಾರಗೊಳಿಸುತ್ತದೆ ನಿಮ್ಮ ವ್ಯಕ್ತಿತ್ವವನ್ನು ವೃದ್ಧಿಸುತ್ತದೆ- ನಿಮ್ಮ ವ್ಯಕ್ತಿತ್ವವನ್ನು ಸುಧಾರಿಸುತ್ತದೆ ಮತ್ತು ನಿಮ್ಮ ಮನಸ್ಸನ್ನು ಪಕ್ವಗೊಳಿಸುತ್ತದೆ.

**ಕರ್ಕಟಕ** ನಿಮ್ಮ ಸ್ನೇಹಿತರು ಅಥವಾ ಕುಟುಂಬ ಸದಸ್ಯರೊಂದಿಗಿನ ಸಂತಸದ ಪ್ರಯಾಣ ನಿಮಗೆ ಸಮಾಧಾನ ನೀಡುತ್ತದೆ. ಇಂದು ನಿಮಗೆ ಅನೇಕ ಹೊಸ ಆರ್ಥಿಕ ಯೋಜನೆಗಳು ದೊರಕುತ್ತವೆ - ಯಾವುದೇ ಬದ್ಧತೆಗೊಳಗಾಗುವ ಮುನ್ನ ಸಾಧಕ ಬಾಧಕಗಳನ್ನು ಎಚ್ಚರಿಕೆಯಿಂದ ಪರಿಶೀಲಿಸಿ.

**ಸಿಂಹ** ಮದ್ಯಪಾನ ಮಾಡಿದಲ್ಲಿ ಅದು ನಿಮ್ಮ ನಿದ್ರೆಗೆ ಭಂಗ ತಂದು ಆಳವಾದ ವಿಶ್ರಾಂತಿ ತೆಗೆದುಕೊಳ್ಳುವುದನ್ನು ತಡೆಗಟ್ಟಬಹುದಾದ್ದರಿಂದ ಅದನ್ನು ಕಡಿಮೆ ಮಾಡಬೇಕು. ನಿಮ್ಮ ಆರ್ಥಿಕ ಸ್ಥಿತಿ ಸುಧಾರಿಸಿದರೂ ಹಣದ ಹೊರಹರಿವು ನಿಮ್ಮ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವಲ್ಲಿ ತೊಂದರೆಯುಂಟುಮಾಡುತ್ತದೆ.

**ಕನ್ಯಾ** ಹೊರಾಂಗಣ ಚಟುವಟಿಕೆಗಳು ಇಂದು ದಣಿವು ಮತ್ತು ಒತ್ತಡ ತರುತ್ತವೆ. ನಿಮ್ಮ ಜೀವನ ಸಂಗಾತಿಯೊಂದಿಗೆ ಹಣದ ಯಾವುದೇ ವಿಷಯದ ಬಗ್ಗೆ ಇಂದು ನಿಮ್ಮ ಜಗಳವಾಗಬಹುದು. ಆದಾಗ್ಯೂ ನೀವು ನಿಮ್ಮ ಶಾಂತ ಸ್ವಭಾವದಿಂದ ಎಲ್ಲವನ್ನು ಸರಿಗೊಳಿಸಬಹುದು. ಜನರು ನಿಮಗೆ ಹೊಸ ಭರವಸೆ ಕನಸುಗಳನ್ನು ನೀಡುತ್ತಾರೆ

**ತುಲಾ** ಇಂದು ನೀವು ಭರವಸೆಯ ಮಾಯಾಜಾಲದಲ್ಲಿದ್ದೀರಿ. ಇಂದು ಹೂಡಿಕೆಗಳನ್ನು ಮಾಡಬಾರದು. ಅಗತ್ಯವಿದ್ದರೆ ಸ್ನೇಹಿತರು ನಿಮ್ಮ ನೆರವಿಗೆ ಬರುತ್ತಾರೆ. ಇಂದು ರಾತ್ರಿ ಸಣ್ಣ ವಿಷಯಗಳಲ್ಲೂ ಕೂಡ ನಿಮ್ಮ ಪ್ರಿಯತಮೆಯ ಜೊತೆಗಿನ ಸಂಬಂಧಗಳು ಶಿಥಿಲಗೊಳ್ಳುತ್ತವೆ.

**ವೃಶ್ಚಿಕ** ಇಂದು ನೀವು ನಿಮ್ಮ ಜೀವನದಲ್ಲಿ ನಿಜವಾದ ಪ್ರೀತಿಯ ಅನುಪಸ್ಥಿತಿಯನ್ನು ಅನುಭವಿಸುತ್ತೀರಿ. ಚಿಂತಿಸಬೇಡಿ, ಕಾಲಕಳೆದಂತೆ ಎಲ್ಲವೂ ಬದಲಾಗುತ್ತದೆ, ನಿಮ್ಮ ಪ್ರಣಯ ಜೀವನವೂ ಸಹ. ಅಗತ್ಯದಲ್ಲಿರುವವರಿಗೆ ಸಹಾಯ ಮಾಡುವ ನಿಮ್ಮ ಸಾಮರ್ಥ್ಯ ನಿಮಗೆ ಗೌರವ ತರುತ್ತದೆ.

**ಧನಸ್ಸು** ಕೆಲವರಿಗೆ ಸುಂದರ ಉಡುಗೊರೆಗಳು ಮತ್ತು ಹೂಗಳಿಂದ ತುಂಬಿದ ಪ್ರಣಯದ ಸಂಜೆ. ನಿಮ್ಮ ಜೀವನದಲ್ಲಿ ಆಸಕ್ತಿದಾಯಕ ವಿಷಯಗಳು ಸಂಭವಿಸಲು ನೀವು ದೀರ್ಘಕಾಲದಿಂದ ಕಾಯುತ್ತಿದ್ದಲ್ಲಿ ನಿಮಗೆ ಈಗ ಸ್ವಲ್ಪವಾದರೂ ಪರಿಹಾರ ದೊರಕುವುದು ಖಚಿತ.

**ಮಕರ** ಸೃಜನಶೀಲ ಆಸಕ್ತಿಗಳು ನಿಮ್ಮನ್ನು ಶಾಂತವಾಗಿರಿಸುತ್ತವೆ. ಇಂದು, ಒಂದು ಪಾರ್ಟಿಯಲ್ಲಿ ನೀವು ಆರ್ಥಿಕ ಭಾಗವನ್ನು ಬಲಪಡಿಸಲು ಪ್ರಮುಖ ಸಲಹೆಯನ್ನು ನೀಡುವ ವ್ಯಕ್ತಿಯನ್ನು ಭೇಟಿ ಮಾಡಬಹುದು. ನಿಮ್ಮ ಕುಟುಂಬದೊಂದಿಗೆ ಸಾಮಾಜಿಕ ಚಟುವಟಿಕೆ ಎಲ್ಲರನ್ನೂ ಆರಾಮವಾಗಿ ಮತ್ತು ಉತ್ತಮ ಮನಸ್ಥಿತಿಯಲ್ಲಿರಿಸುತ್ತದೆ.

**ಕುಂಭ** ಇಂದಿನ ದಿನ ಯಾರಿಗೂ ಸಾಲ ನೀಡಬೇಡಿ ಮತ್ತು ಕೊಡುವುದು ಅಗತ್ಯವಾಗಿದ್ದರೆ ಕೊಡುವವರಿಂದ ಅವರು ಯಾವಾಗ ಹಣವನ್ನು ಮರುಪಾವತಿ ಮಾಡುತ್ತಾರೆಂದು ಬರವಣಿಗೆಯಲ್ಲಿ ತೆಗೆದುಕೊಳ್ಳಿ. ಮಕ್ಕಳ ಅವರ ಸಾಧನೆಗಳಿಂದ ನೀವು ಹೆಮ್ಮೆ ಪಡುವಂತೆ ಮಾಡಬಹುದು.

**ಮೀನ** ನೀವು ನಿಮ್ಮ ಕೋಪವನ್ನು ನಿಯಂತ್ರಿಸಿ ಮತ್ತು ಕಚೇರಿಯಲ್ಲಿ ಎಲ್ಲರೊಂದಿಗೆ ಉತ್ತಮವಾಗಿ ವರ್ತಿಸಿ, ಆಗ ನೀವು ಮಾಡದಿದ್ದರೆ ನಿಮ್ಮ ಕೆಲಸ ಹೋಗಬಹುದು. ದಿನದಲ್ಲಿ ಅನಿರೀಕ್ಷಿತವಾದ ಒಳ್ಳೆಯ ಸುದ್ದಿ ಇಡೀ ಕುಟುಂಬಕ್ಕೆ ಸಂತೋಷ ಮತ್ತು ಆನಂದ ತರೆದಿಡುತ್ತದೆ.

# ಡಿಕೆಶಿ ಜೊತೆ ನನಗಾವ ವ್ಯವಹಾರವೂ ಇಲ್ಲ, ಆತ್ಮೀಯತೆಯೂ ಇಲ್ಲ: ಧರ್ಮಸ್ಥಳದಲ್ಲಿ ವಿಜಯೇಂದ್ರ

**• ಉದಯವಾಹಿನಿ ಧರ್ಮಸ್ಥಳ:**

ನನ್ನ ಮತ್ತು ಡಿ.ಕೆ. ಶಿವಕುಮಾರ್ ಮಧ್ಯೆ ಯಾವುದೇ ರೀತಿಯ ವ್ಯವಹಾರವೂ ಇಲ್ಲ, ಆತ್ಮೀಯತೆಯೂ ಇಲ್ಲ. ಅವರು ಕೆಪಿಸಿಸಿ ಅಧ್ಯಕ್ಷರಾಗಿದ್ದಾಗ ಒಬ್ಬ ರಾಜಕಾರಣಿಯಾಗಿ ನೀಡಬೇಕಾದ ಮರ್ಯಾದೆಯನ್ನು ಮಾತ್ರ ನಾನು ನೀಡಿದ್ದೇನೆ ಅಷ್ಟೇ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿವೈ ವಿಜಯೇಂದ್ರ ಹೇಳಿದ್ದಾರೆ.

ಕಳೆದ ಮೂರ್ನಾಲ್ಕು ದಿನಗಳಿಂದ ದೆಹಲಿಯಲ್ಲೇ ಮೊಕ್ಕಾಂ ಹೂಡಿ ರಾಷ್ಟ್ರೀಯ ನಾಯಕರನ್ನು ಭೇಟಿ ಮಾಡಿದ್ದ ಅವರು, ನಿನ್ನೆ ರಾತ್ರಿ ದೆಹಲಿಯಿಂದ ನೇರವಾಗಿ ಮಂಗಳೂರಿಗೆ ಆಗಮಿಸಿ, ಮುಂಜಾನೆ ಶ್ರೀ ಕ್ಷೇತ್ರ ಧರ್ಮಸ್ಥಳದ ಮಂಜುನಾಥ ಸ್ವಾಮಿಯ ದರ್ಶನ ಪಡೆದರು. ಆ ಬಳಿಕ ನಡೆದ ಸುದ್ದಿಗೋಷ್ಠಿಯಲ್ಲಿ ವಿರೋಧಿಗಳಿಗೆ ತೀಕ್ಷ್ಣ ಪ್ರತಿಕ್ರಿಯೆ ನೀಡಿದ್ದಾರೆ. ಪರಿಷತ್ ಚುನಾವಣೆಯಲ್ಲಿ ನಡೆದ ಅಡ್ಡಮತದಾನದ ಬೆನ್ನಲ್ಲೇ ಕೇಳಿಬರುತ್ತಿರುವ ಆರೋಪಗಳಿಗೆ ಉತ್ತರಿಸಿದ ಅವರು, ಅಡ್ಡ ಮತದಾನ ನಡೆದಾಗ ಅದಕ್ಕೆ ನಾನೇ ಕಾರಣ ಎಂಬ ಚರ್ಚೆಗಳನ್ನು ಸೃಷ್ಟಿಸಲಾಗುತ್ತಿದೆ. ರಾಜ್ಯದ ಬಿಜೆಪಿ ಅಧ್ಯಕ್ಷರು ಮತ್ತು ರಾಜ್ಯದ ಮುಖ್ಯಮಂತ್ರಿಗಳು ಜೊತೆಯಾಗಿದ್ದಾರೆ ಎಂಬ ಅಪಪ್ರಚಾರ ಮಾಡಲಾಗುತ್ತಿದೆ. ಆದರೆ ಡಿ.ಕೆ. ಶಿವಕುಮಾರ್ ಮತ್ತು ನನ್ನ ಮಧ್ಯೆ ಯಾವುದೇ ವ್ಯವಹಾರವಿಲ್ಲ. ನನ್ನ ವಿರುದ್ಧ ಯಾರು ಅಪಪ್ರಚಾರ ಮಾಡುತ್ತಿದ್ದಾರೋ,

**ಶಾಸಕರು ಆಣೆ-ಪ್ರಮಾಣ ಮಾಡಬೇಕು**



☛ ಉದಯವಾಹಿನಿ ಚಿತ್ರ

ಅವರಿಗೆ ಆ ಭಗವಂತನೇ ಒಳ್ಳೆಯ ಬುದ್ಧಿ ಕೊಡಲಿ ಎಂದು ಮಂಜುನಾಥ ಸ್ವಾಮಿಯಲ್ಲಿ ಪ್ರಾರ್ಥಿಸಿದ್ದೇನೆ ಎಂದು ತಿರುಗೇಟು ನೀಡಿದರು.

ವಿಧಾನ ಪರಿಷತ್ ಚುನಾವಣೆಯಲ್ಲಿ ನಮ್ಮ ಇಬ್ಬರು ಅಭ್ಯರ್ಥಿಗಳು ಗೆಲುವು ಸಾಧಿಸಿದರೂ, ಚುನಾವಣೆಯಲ್ಲಿ ನಡೆದ ಅಡ್ಡ ಮತದಾನ ನನಗೆ ಹಾಗೂ ರಾಜ್ಯದ ಲಕ್ಷಾಂತರ ಕಾರ್ಯಕರ್ತರಿಗೆ ತೀವ್ರ ನೋವುಂಟು ಮಾಡಿದೆ. ಈ ಅಡ್ಡಮತದಾನವು ರಾಜ್ಯ ರಾಜಕಾರಣದಲ್ಲಿ ಬೇರೆ ಬೇರೆ ರೀತಿಯ ಚರ್ಚೆಗಳನ್ನು ಹುಟ್ಟುಹಾಕಿತು. ಫಲಿತಾಂಶದ ಮಾರನೇ ದಿನ ನನ್ನ ಮನಸ್ಸಿಗೆ ತೀವ್ರ ನೋವಾಗಿದ್ದರಿಂದ, ಶಾಸಕಾಂಗ ಪಕ್ಷದ ಸಭೆಯನ್ನು ಧರ್ಮಸ್ಥಳದಲ್ಲೇ ನಡೆಸಿ, ಶಾಸಕರು ಆಣೆ-ಪ್ರಮಾಣ ಮಾಡಬೇಕೆಂದು ಹೇಳಿದ್ದು ನಿಜ. ನಾನು ಕೂಡ ಭಾವನಾತ್ಮಕವಾಗಿ ಯೋಚಿಸುವ ಸಾಮಾನ್ಯ ಮನುಷ್ಯ. ಆದರೆ, ಪಕ್ಷದ ಹಿರಿಯರು ಕಿವಿಮಾತು ಹೇಳಿದಂತೆ, ಎಲ್ಲರ ಮಾತಿಗೆ ಗೌರವ ಕೊಟ್ಟು ಇಂದು ಕ್ಷೇತ್ರಕ್ಕೆ ಭೇಟಿ ನೀಡಿದ್ದೇನೆ ಎಂದರು.

ಶ್ರೀ ಮಂಜುನಾಥ ಸ್ವಾಮಿಗೆ ವಿಶೇಷ ಪೂಜೆ ಸಲ್ಲಿಸಿರುವುದಾಗಿ ತಿಳಿಸಿದ ವಿಜಯೇಂದ್ರ, ರಾಜ್ಯದಲ್ಲಿರುವ ಬರಗಾಲದ ಪರಿಸ್ಥಿತಿ ದೂರವಾಗಿ, ಜನರಿಗೆ ಒಳ್ಳೆಯ ದಿನಗಳು ಬರಲಿ ಎಂದು ಪ್ರಾರ್ಥಿಸಿದ್ದೇನೆ. ಇದರ ಜೊತೆಗೆ, ಕರ್ನಾಟಕ ರಾಜ್ಯದಲ್ಲಿ ಮತ್ತೊಮ್ಮೆ ನಮ್ಮೆಲ್ಲರ ನೇತೃತ್ವದಲ್ಲಿ ಜನಪರ, ಅಭಿವೃದ್ಧಿಪರ ಹಾಗೂ ಹಿಂದೂಗಳ ರಕ್ಷಣೆ ಮಾಡುವ ಸರ್ಕಾರ ಅಧಿಕಾರಕ್ಕೆ ಬರಬೇಕು ಎಂದು ದೇವರಲ್ಲಿ ಬೇಡಿಕೊಂಡಿದ್ದೇನೆ ಎಂದರು. ರಾಜ್ಯದ ಸದ್ಯದ ರಾಜಕೀಯ ಸ್ಥಿತಿಯ ಬಗ್ಗೆ ಮಾತನಾಡುತ್ತಾ ಯಡಿಯೂರಪ್ಪನವರ ಕಾಲದ ಇತಿಹಾಸವನ್ನು ನೆನಪಿಸಿದ ಅವರು, ಹಿಂದೆ ರಾಜ್ಯದಲ್ಲಿ 17 ಜನ ಶಾಸಕರು ರಾಜೀನಾಮೆ ನೀಡಿ ಬಿ.ಎಸ್. ಯಡಿಯೂರಪ್ಪ ಅವರ ನೇತೃತ್ವದಲ್ಲಿ ನಮ್ಮ ಪಕ್ಷಕ್ಕೆ ಬಂದಿದ್ದರು. ಪ್ರಸ್ತುತ ರಾಜ್ಯದಲ್ಲಿರುವ ಭ್ರಷ್ಟ, ಜನವಿರೋಧಿ ಹಾಗೂ ರೈತ ವಿರೋಧಿ ಕಾಂಗ್ರೆಸ್ ಸರ್ಕಾರವನ್ನು ಬುಡಸಮೇತ ಕಿತ್ತೊಗೆಯುವ ಕೆಲಸವನ್ನು ನಮ್ಮ ಕಾರ್ಯಕರ್ತರು ತಮ್ಮ ಶ್ರಮದಿಂದ ಮಾಡಲಿದ್ದಾರೆ ಎಂಬ ದೃಢ ನಂಬಿಕೆ ನನಗಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

# ಕರ್ನಾಟಕದ ಅಡಿಕೆ ಬೆಳೆಗಾರರ ಕತ್ತು ಹಿಸುಕಿದ ಮಹಾರಾಷ್ಟ್ರ ಸರ್ಕಾರ ಕುಸಿದ ಅಡಿಕೆ ವಹಿವಾಟು

### ಮಹಾರಾಷ್ಟ್ರದಲ್ಲಿ ಅಡಿಕೆ ಲಾರಿಗಳ ಸಂಚಾರಕ್ಕೂ ಅಡ್ಡಿ,ಕರ್ನಾಟಕವು ಭಾರತದ ಅತಿದೊಡ್ಡ ಅಡಿಕೆ ಉತ್ಪಾದಕ ರಾಜ್ಯವಾಗಿದೆ.

**• ಉದಯವಾಹಿನಿ ಕಾರವಾರ:**

ರಾಜ್ಯದಲ್ಲಿ ಕೃಷಿಕರಿಗೆ ಮಳೆ ಬಾರದೇ ಬೆಳೆದ ಬೆಳೆ ಉಳಿಸಿಕೊಳ್ಳಲು ಪರದಾಡುತ್ತಿದ್ದಾರೆ. ಆದರೆ, ಇದೀಗ ಬೆಳೆದ ಬೆಳೆಯನ್ನ ಹೊರರಾಜ್ಯಗಳಿಗೆ ಕಳುಹಿಸಲು ಮಹಾರಾಷ್ಟ್ರ ಸರ್ಕಾರ ಕಿರಿಕ್ ಮಾಡುತ್ತಿದ್ದು, ಕರ್ನಾಟಕದಿಂದ ಮಹಾರಾಷ್ಟ್ರ ಮೂಲಕ ಉತ್ತರ ಭಾರತಕ್ಕೆ ಸರಬರಾಜಾಗುವ ಅಡಿಕೆ ಬೆಳೆಗಳನ್ನ ತಡೆಹಿಡಿದು ಕರ್ನಾಟಕ ಅಡಿಕೆ ಬೆಳೆಗಾರರಿಗೆ ಸಂಕಷ್ಟ ತಂದೊಡ್ಡಿದ್ದಾರೆ.ಸುಮಾರು 6.7 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಅಡಿಕೆ ಬೆಳೆಯಲಾಗುತ್ತಿದ್ದು, ವಾರ್ಷಿಕವಾಗಿ ಸುಮಾರು 10 11 ಲಕ್ಷ ಟನ್ ಉತ್ಪಾದನೆಯಾಗುತ್ತದೆ. ಭಾರತದಲ್ಲಿ ಉತ್ಪಾದನೆಯಾಗುವ ಅಡಿಕೆಯ ಒಟ್ಟು ಮಾರುಕಟ್ಟೆ ಮೌಲ್ಯ ಸುಮಾರು 58,664 ಕೋಟಿ ರೂ. ಎಂದು ಅಂದಾಜಿಸಲಾಗಿದೆ. ಇದರಲ್ಲಿ ಕರ್ನಾಟಕದ ಪಾಲು ಅತಿಹೆಚ್ಚು.ರೈತರು, ಕೂಲಿ ಕಾರ್ಮಿಕರು, ವ್ಯಾಪಾರಿಗಳು, ಸಾಗಣೆದಾರರು, ಸಂಸ್ಕರಣಾ ಘಟಕಗಳು ಸೇರಿದಂತೆ ಲಕ್ಷಾಂತರ ಜನರು ಅಡಿಕೆ ಆಧಾರಿತ ಜೀವನ ನಡೆಸುತ್ತಿದ್ದಾರೆ. ದೇಶದಾದ್ಯಂತ ಸುಮಾರು 60 ಲಕ್ಷ ಜನರ ಜೀವನೋಪಾಯ ಅಡಿಕೆ ಕ್ಷೇತ್ರದ ಮೇಲೆ ಅವಲಂಬಿತವಾಗಿದೆ ಎನ್ನುತ್ತದೆ ಕೆಲವು ಅಂಕಿಅಂಶಗಳು.ರಾಜ್ಯದಲ್ಲಿ ಉತ್ತರ ಕನ್ನಡ, ಶಿವಮೊಗ್ಗ, ಚಿಕ್ಕಮಗಳೂರು, ದಕ್ಷಿಣ ಕನ್ನಡ, ಉಡುಪಿ, ದಾವಣಗೆರೆ, ಚಿತ್ರದುರ್ಗ ಸೇರಿದಂತೆ ಹಲವು ಜಿಲ್ಲೆಗಳಲ್ಲಿ ಅಡಿಕೆ ಮುಖ್ಯ ಆದಾಯದ ಮೂಲವಾಗಿದೆ.

ರೈತರ ಖರೀದಿ ಶಕ್ತಿ ಹೆಚ್ಚುವುದರಿಂದ ಸ್ಥಳೀಯ ವ್ಯಾಪಾರ, ಶಿಕ್ಷಣ, ಆರೋಗ್ಯ, ಕಟ್ಟಡ ನಿರ್ಮಾಣ ಮತ್ತು ಸೇವಾ ವಲಯವೂ ಬೆಳೆಯಲು ಸಹಾಯವಾಗಿದೆ.

**ಮಹಾರಾಷ್ಟ್ರ ಸರ್ಕಾರ ಕಿರಿಕ್**



☛ ಉದಯವಾಹಿನಿ ಚಿತ್ರ

> ರಾಜ್ಯದ ಅಡಿಕೆ ಬೆಳೆಗಾರರಲ್ಲಿ ಉತ್ತರ ಕನ್ನಡ ಜಿಲ್ಲೆಯಲ್ಲೇ ಅಂದಾಜು ಮೂರು ಲಕ್ಷಕ್ಕೂ ಹೆಚ್ಚು ಅಡಿಕೆ ಬೆಳೆಗಾರರಿದ್ದಾರೆ. ಇನ್ನು ಇದರ ಅವಲಂಭಿತ ಕಾರ್ಮಿಕರು ಪ್ರತ್ಯೇಕವಾಗಿದ್ದು, ಜಿಲ್ಲೆಯ ಆರ್ಥಿಕತೆಯ ಮುಖ್ಯ ಮೂಲಸಹ. ರಾಜ್ಯದ ಇತರ ಜಿಲ್ಲೆಯ ಪಾಲು ಸಹ ದೊಡ್ಡದಿದೆ. ಹೀಗಿರುವಾಗ ರಾಜ್ಯ ಸರ್ಕಾರ ಸಹ ಮಹಾರಾಷ್ಟ್ರದ ಈ ನಿರ್ಧಾರವನ್ನು ಪ್ರಶ್ನಿಸದೇ ಸುಮ್ಮನಿದೆ. ಹೀಗಾಗಿ ಅಡಿಕೆ ಬೆಳೆಗಾರರು ಹಾಗೂ ವರ್ತಕರು ಸರ್ಕಾರ ಮಧ್ಯಸ್ಥಿಕೆ ವಹಿಸಿ ಆದ ಗೊಂದಲ ಬಗೆಹರಿಸಿ ನಮ್ಮ ಹಿತ ಕಾಯಬೇಕೆಂದು ಬೆಳೆಗಾರರು ಆಗ್ರಹಿಸಿದ್ದಾರೆ.

ಉತ್ತರ ಕನ್ನಡ ಜಿಲ್ಲೆಯ ಅಡಿಕೆ ಬೆಳೆಯ ತವರು ಎಂದೇ ಖ್ಯಾತಿ ಪಡೆದ ಶಿರಸಿಯದ್ದು. ಅತಿವೃಷ್ಟಿ-ಅನಾವೃಷ್ಟಿ ಜೊತೆ ಅಡಿಕೆ ಬೆಳೆಗೆ ತಗಲಿದ ರೋಗದಿಂದ ಕಂಗೆಟ್ಟಿದ್ದ ಅಡಿಕೆ ಬೆಳೆಗಾರರು ಅಳಿದುಳಿದ ಫಸಲನ್ನ ಉಳಿಸಿಕೊಂಡು ಇನ್ನೇನು ಮಾರುಕಟ್ಟೆಗೆ ತಂದು ಹಾಕಿರುವಾಗಲೇ, ಮಹರಾಷ್ಟ್ರ ಸರ್ಕಾರ ಕೈಗೊಂಡ ಕ್ರಮದಿಂದ ಬೆಲೆ ಇಳಿಕೆ ಜೊತೆ ಅಡಿಕೆ ವಹಿವಾಟುಗಳೇ ಸ್ತಬ್ದವಾಗುವ ಸ್ಥಿತಿಗೆ ಬಂದಿದ್ದು ಬೆಳೆಗಾರ

**ಉತ್ತರ ಕನ್ನಡ ಅಡಿಕೆ ಮಾರುಕಟ್ಟೆಯಲ್ಲಿ ಉತ್ತಮ ಗುಣಮಟ್ಟ**

**ಸಧ್ಯ ಉತ್ತರ ಕನ್ನಡ ಅಡಿಕೆ ಮಾರುಕಟ್ಟೆಯಲ್ಲಿ ಉತ್ತಮ ಗುಣಮಟ್ಟದ ಬೆಟ್ಟೆ 40 ರಿಂದ 49 ಸಾವಿರ ಪ್ರತಿ ಕ್ವಿಂಟಲ್‌ಗೆ ಇದ್ದರೆ, ರಾಶಿ-49 ರಿಂದ 50 ಸಾವಿರ, ಚಾಲಿ -44 ರಿಂದ 48 ಸಾವಿರ ಕ್ವಿಂಟಲ್ ದರ ಇದ್ದು ಏರಿಳಿತ ಕಾಣುತ್ತಿದೆ. ಉತ್ತರ ಕನ್ನಡ ಜಿಲ್ಲೆಯಿಂದ ಮಧ್ಯಪ್ರದೇಶ ದೆಹಲಿ, ಉತ್ತರ ಪ್ರದೇಶ, ರಾಜಸ್ಥಾನ ಮಹಾರಾಷ್ಟ್ರ, ಗುಜರಾತ್‌ಗೆ ಹೆಚ್ಚು ಸರಬರಾಜಾಗುತ್ತದೆ. ಇದನ್ನು ಹೊರತುಪಡಿಸಿದರೆ ಪಾಕಿಸ್ತಾನ, ನೇಪಾಳ, ಮ್ಯಾನ್ಮಾರ್, ಖಿಜಕಿಸ್ತಾನ್, ಅಫ್ಘಾನಿಸ್ತಾನ ಸೇರಿದಂತೆ ಹಲವು ದೇಶಗಳಿಗೂ ಅಲ್ಪ ಪ್ರಮಾಣದಲ್ಲಿ ರಫ್ತಾಗುತ್ತದೆ.**

ಕಂಗೆಡುವಂತೆ ಮಾಡಿದೆ. ಉತ್ತರ ಕನ್ನಡ ಸೇರಿದಂತೆ ರಾಜ್ಯದ ಹಲವು ಜಿಲ್ಲೆಯಲ್ಲಿ ಅಡಿಕೆ ಬೆಳೆಗಾರರಿದ್ದು, ರಾಜ್ಯದ ಪ್ರಮುಖ ವಾಣಿಜ್ಯ ಬೆಳೆಗಳಲ್ಲಿ ಅಡಿಕೆ ಸಹ ಒಂದು. ಒಂದು ಕಾಲದಲ್ಲಿ ಬಂಗಾರದ ಬೆಳೆ ಎಂದೇ ಪ್ರಸಿದ್ಧಿ ಪಡೆದಿದ್ದ ಈ ಬೆಳೆ ಇದೀಗ ಹಲವು ಸವಾಲುಗಳಿಂದ ಮಾರುಕಟ್ಟೆ ಧಾರಣೆ ಕುಸಿತ ಕಂಡಿದೆ. ಹೀಗಿರುವಾಗ ಉತ್ತರ ಕನ್ನಡ ಜಿಲ್ಲೆಯಲ್ಲಿ ವರ್ಷಕ್ಕೆ ಸುಮಾರು 12,000 ರಿಂದ 15,000 ಮೆಟ್ರಿಕ್ ಟನ್‌ಗಳಷ್ಟು ಅಡಿಕೆ ಉತ್ಪಾದನೆ ಆಗುತ್ತದೆ. ಜಿಲ್ಲೆಯ ಸುಮಾರು 10,000 ರಿಂದ 15,000 ಹೆಕ್ಟೇರ್‌ಗಿಂತ ಹೆಚ್ಚು ಪ್ರದೇಶದಲ್ಲಿ ಅಡಿಕೆ ಬೆಳೆ ಇದೆ. ಉತ್ತರ ಕನ್ನಡ ಜಿಲ್ಲೆ ರಾಜ್ಯದ ಒಟ್ಟು ಅಡಿಕೆ ಉತ್ಪಾದನೆಯಲ್ಲಿ ಸುಮಾರು 14% ಪಾಲು ಹೊಂದಿದೆ. ಇದಲ್ಲದೇ ಅಡಿಕೆಯಲ್ಲಿ ರಾಸಾಯನಿಕ ಕಂಡುಬಂದರೆ ಸುಟ್ಟುಹಾಕುವುದಾಗಿ ಹೇಳಿದ್ದು, ಇದೀಗ ರಾಜ್ಯದ 600 ಕೋಟಿಗೂ ಹೆಚ್ಚು ಅಡಿಕೆ ಬೆಳೆ ಮಹಾರಾಷ್ಟ್ರದಲ್ಲಿ ಲಾಕ್ ಆಗಿದೆ. ವರ್ತಕರು ನಷ್ಟ ಹೊಂದುವ ಜೊತೆ ವ್ಯಾಪಾರವನ್ನೇ ನಿಲ್ಲಿಸುವ ಸ್ಥಿತಿಗೆ ಬಂದಿದ್ದಾರೆ.

# ಬ್ಯಾಂಕ್ ಖಾತೆಯಿಲ್ಲದವರಿಗೆ 60 ಕೋಟಿ ಹಣ ಜಮೆ ಎಂದ ಸಿಎಜಿ ವರದಿ ಸತ್ಯಕ್ಕೆ ದೂರವಾದದ್ದು

**• ಉದಯವಾಹಿನಿ ರಾಯಚೂರು:**

ಸಿಎಜಿ ವರದಿಯಲ್ಲಿ 60 ಕೋಟಿ ರೂ, ಬ್ಯಾಂಕ್ ಖಾತೆ ಇಲ್ಲದವರಿಗೆ ಹಣ ಜಮೆಯಾದ ವಿಚಾರ ಸತ್ಯಕ್ಕೆ ದೂರವಾಗಿದ್ದು ಎಂದು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ರಾಜ್ಯಾಧ್ಯಕ್ಷ ಹೆಚ್.ಎಂ ರೇವಣ್ಣ ಹೇಳಿದ್ದಾರೆ.

ರಾಯಚೂರಿನಲ್ಲಿ ಮಾತನಾಡಿದ ಅವರು, ಮೃತಪಟ್ಟೋರಿಗೆ ಹಣ ಹೋಗೋದು ಮಾತ್ರ ಸರಿಯಾಗಿ ಹೇಳಿದ್ದಾರೆ. ಇದರ ಹೊರತಾಗಿ ಒಂದೇ ಖಾತೆಯಲ್ಲಿ 20 ಜನ ಪಡೆದಿದ್ದಾರೆ ಅನ್ನೋದಿದೆ, ಅದರ ಮಾಹಿತಿ ಪಡೆಯುತ್ತೇನೆ. ಪಂಚ ಗ್ಯಾರಂಟಿ ಆರಂಭಿಕ ಹಂತದಲ್ಲಿ ಯಾರಿಗೂ ಕಷ್ಟ ಆಗದಂತೆ ಆನ್‌ಲೈನ್ ಅರ್ಜಿ ಮಾಡಿದ್ವಿ. ಆನ್‌ಲೈನ್ ರೆಜಿಸ್ಟ್ರೇಶನ್, ಆನ್ಲೈನ್ ಡಿಪಾಸಿಟ್, ಆನ್‌ಲೈನ್ ಎಂಟ್ರಿ ಮಾಡಲಾಯ್ತು. ಎಲ್ಲಾ ಆನ್‌ಲೈನ್ ಇದ್ದಿರೋದ್ರಿಂದ ನ್ಯೂನ್ಯತೆ ಆಗಿರೋದು ಕಂಡುಬಂದಿದೆ ಎಂದು ಹೇಳಿದ್ದಾರೆ.



☛ ಉದಯವಾಹಿನಿ ಚಿತ್ರ

ಗೃಹಲಕ್ಷ್ಮಿ ಪರಿಷ್ಕರಣೆ ಮಾಡಿದಾಗ 2.80 ಲಕ್ಷ ಮಂದಿ ಮೃತಪಟ್ಟಿದ್ದಾರೆ ಎನ್ನುವುದು ಗೊತ್ತಾಗಿದೆ. 115 ಕೋಟಿ ರೂ. ಮೃತಪಟ್ಟೋರಿಗೆ ಜಮೆ ಆಗಿತ್ತು. ಈಗಾಗಲೇ 15 ಕೋಟಿ ರೂ. ವಾಪಸ್ ಪಡೆದಿದ್ದೇವೆ. ಬಾಕಿ 100 ಕೋಟಿ ರೂ.ಗಾಗಿ ಬ್ಯಾಂಕ್ ಜೊತೆ ಚರ್ಚೆ ನಡೆದಿದೆ.

ಗೃಹ ಜ್ಯೋತಿಯಲ್ಲಿ 200 ಯುನಿಟ್ ಹೇಳಿದ್ವಿ. ಅಂಗಡಿ, ಮಷಿನ್‌ಗಳಿಗೆ ಉಪಯೋಗಿಸುವ ಮಾಹಿತಿ ಬಂದಿದೆ. ಅನ್ನಭಾಗ್ಯದಲ್ಲಿ ಕಾರ್ಡ್‌ಗಳನ್ನ ಹೆಚ್ಚಿಗೆ ಮಾಡಿಕೊಂಡಿರೋದು ಗೊತ್ತಾಗಿದೆ. ಅದನ್ನು ಪರಿಶೀಲನೆ ಮಾಡುತ್ತಿದ್ದೇವೆ ಎಂದು ತಿಳಿಸಿದ್ದಾರೆ.

ರಾಮನ ಲೆಕ್ಕ 'ರಹಸ್ಯ' ಬಯಲಾಗಿದ್ದು ಹೇಗೆ..? ಕಳೆದ 20 ದಿನಗಳಲ್ಲಿ ಏನೇನಾಯ್ತು..?ಗ್ಯಾರಂಟಿ ಯೋಜನೆಗಳ ಹಣ ಪೋಲಾಗ್ತಿರೋ ಬಗ್ಗೆ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಗ್ಯಾರಂಟಿ ಯೋಜನೆಗಳ ಸಮಿತಿ ಕತ್ತೆ ಕಾಯ್ತಿದೆಯಾ ಎಂದಿರೋ ವಿಚಾರಕ್ಕೆ ಪ್ರತಿಕ್ರಿಯಿಸಿದ ಅವರು, ಆ ಪದಗಳೆಲ್ಲಾ ಅವರಿಗೆ ಅನ್ವಯಿಸೋದು, ಇಂತಹ ಕಾರ್ಯಕ್ರಮ ಅವರು ಮಾಡಿದ್ರಾ.

ಮಾಡಿದ್ರೆ ಕತ್ತೆ ಕಾಯ್ತಿದ್ರೋ, ನಾಯಿ ಕಾಯ್ತಿದ್ರೋ ಅವರೇ ಹೇಳಬೇಕು. ಗ್ಯಾರಂಟಿ ನಾವೇ ಕಂಡುಹಿಡಿದಿದ್ದು, ಪರಿಷ್ಕರಣೆ ಮಾಡಲಾಗ್ತಿದೆ. ವ್ಯತ್ಯಾಸ ಆಗಿದೆ ಸರಿಪಡಿಸ್ತಿದ್ದೇವೆ, ಅವರು ಬರೀ ಹೇಳೋದೆ ಆಯ್ತು. ಗ್ಯಾರಂಟಿ ಆಗಲ್ಲ ಅಂದಿರೋರಿಗೆ ಮುಖಕ್ಕೆ ಹೊಡೆದಂಗೆ ಈಗ ಆಗಿಲ್ವಾ ಎಂದಿದ್ದಾರೆ.

## ಮನೆಗೊಂದು 'ಗ್ರಂಥಾಲಯ' ಅನುಷ್ಠಾನ ಸಮಾರಂಭ

**• ಉದಯವಾಹಿನಿ ಹಾಸನ,**

ಕರ್ನಾಟಕ ಸರ್ಕಾರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು ಹಾಗೂ ಜಿಲ್ಲಾ ಜಾಗೃತ ಸಮಿತಿ, ಹಾಸನ ಜಿಲ್ಲೆ ಇವರ ವತಿಯಿಂದ 'ಮನೆಗೊಂದು ಗ್ರಂಥಾಲಯ' ಅನುಷ್ಠಾನ ಸಮಾರಂಭ ಜೂನ್ 29ರಂದು ಸೋಮವಾರ ಹಮ್ಮಿಕೊಳ್ಳಲಾಗಿದೆ. ಸಂಜೆ 5 ಗಂಟೆಗೆ ಸಾಹಿತಿ ಹಾಗೂ ಉದ್ದಿಮೆದಾರ ವಿಶ್ವಾಸ್ ಡಿ. ಗೌಡ ಅವರ ನಿವಾಸ 'ದುಶಾನ್ ನಿಲಯ' (ಆರ್ಯಾ ಮ್ಯಾನ್ಸನ್ ಹೋಟೆಲ್ ಎದುರುಗಡೆ, ವಾರ್ಡ್ ನಂ. 35, ಹೊಸಕೊಪ್ಪಲು, ಹಾಸನ)ದಲ್ಲಿ ಹಾಗೂ ಸಂಜೆ 6 ಗಂಟೆಗೆ ಡಾ. ನಾಯಕರಹಳ್ಳಿ ಮಂಜೇಗೌಡ ಅವರ ನಿವಾಸ 'ಚೈತ್ರ', ನಂ. 203, 3ನೇ ಮೇನ್, ಕವಿರಾಜ ಮಾರ್ಗ ರಸ್ತೆ, ಹಲ್ಮಿಡಿ ಶಾಸನ ವೃತ್ತ, ಶಾಂತಿನಗರ, ಹಾಸನದಲ್ಲಿ ಕಾರ್ಯಕ್ರಮ ನಡೆಯಲಿದೆ.ಕನ್ನಡ ಪುಸ್ತಕ ಪ್ರಾಧಿಕಾರದ ಸದಸ್ಯ ಡಾ. ಕುಶಾಲ ಬರಗೂರು ಕಾರ್ಯಕ್ರಮವನ್ನು ಉದ್ಘಾಟಿಸುವರು.

ಜಿಲ್ಲಾ ಜಾಗೃತ ಸಮಿತಿಯ ಸಂಚಾಲಕ ಗೊರೂರು ಅನಂತರಾಜ ಕಾರ್ಯಕ್ರಮದ ಅಧ್ಯಕ್ಷತೆ ವಹಿಸುವರು.ಜಿಲ್ಲಾ ಜಾಗೃತ ಸಮಿತಿ ಸದಸ್ಯ ಚಿನ್ನೇನಹಳ್ಳಿ ಸ್ವಾಮಿ ಅವರು ವಿಶ್ವಾಸ್ ಡಿ. ಗೌಡ ಅವರ ಕೃತಿಯನ್ನು ಪರಿಚಯ ಮಾಡಿಕೊಡುವರು ಹಾಗೂ ಚಂದ್ರಕಾಂತ ಪಡೇಸೂರು ಅವರು ಡಾ. ನಾಯಕರಹಳ್ಳಿ ಮಂಜೇಗೌಡ ಅವರ ಕೃತಿಯನ್ನು ಪರಿಚಯ ಮಾಡಿಕೊಡುವರು.

# ವಿದ್ಯಾರ್ಥಿಗಳ ಅಗತ್ಯಕ್ಕೆ ತಕ್ಕಂತೆ ಕೆಎಸ್‌ಆರ್‌ಟಿಸಿ ಬಸ್ ಓಡಿಸಲು ಸೂಚನೆ

**• ಉದಯವಾಹಿನಿ ಕುಂದಾಪುರ:**

ಶಾಲಾ-ಕಾಲೇಜು ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಯಾವ ಮಾರ್ಗಕ್ಕೆ ತುರ್ತಾಗಿ ಕೆಎಸ್‌ಆರ್‌ಟಿಸಿ ಬಸ್ ಅವಶ್ಯಕತೆ ಇದೆ ಎಂದು ತಿಳಿದು ಅಧಿಕಾರಿಗಳು ಬಸ್ ಸಂಚಾರಕ್ಕೆ ಕ್ರಮ ಕೈಗೊಳ್ಳಬೇಕು ಎಂದು ತಾಲ್ಲೂಕು ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಅಧ್ಯಕ್ಷ ಎಚ್.ಹರಿಪ್ರಸಾದ್ ಶೆಟ್ಟಿ ಕಾನ್ಮಕ್ಕಿ ಹೇಳಿದರು.

ಇಲ್ಲಿನ ತಾಲ್ಲೂಕು ಪಂಚಾಯಿತಿ ಸಭಾಂಗಣದಲ್ಲಿ ನಡೆದ ಕುಂದಾಪುರ ತಾಲ್ಲೂಕು ಗ್ಯಾರಂಟಿ ಅನುಷ್ಠಾನ ಸಮಿತಿ ಸಭೆಯಲ್ಲಿ ಅವರು ಮಾತನಾಡಿದರು. ಅರ್ಹ ಫಲಾನುಭವಿಗಳಿಗೆ ಪಂಚ ಗ್ಯಾರಂಟಿ ಯೋಜನೆ ತಲುಪಬೇಕು ಎನ್ನುವ ಸದುದ್ದೇಶದಿಂದ ಯೋಜನೆ ಅನುಷ್ಠಾನಗೊಂಡು ಮೂರು ವರ್ಷದ ನಂತರ ಆಡಳಿತಾತ್ಮಕವಾಗಿ ಪಾರದರ್ಶಕತೆ ಕಾಪಾಡಿಕೊಳ್ಳುವ ಸಲುವಾಗಿ ಪರಿಷ್ಕರಣೆ ಆಗುತ್ತದೆ. ಗ್ಯಾರಂಟಿ ಯೋಜನೆಯ ದುರ್ಬಳಕೆ ತಡೆಗಟ್ಟುವುದು ಉದ್ದೇಶವಾಗಿದೆ. ನಿಜವಾದ ಫಲಾನುಭವಿ ಸೌಲಭ್ಯದಿಂದ ವಂಚಿತರಾಗದಂತೆ ತಡೆಯುವಲ್ಲಿ ಅಧಿಕಾರಿಗಳು ಹಾಗೂ ಸಮಿತಿ ಸದಸ್ಯರ ಜವಬ್ದಾರಿಯೂ ಇದೆ ಎಂದರು.

ಗೃಹಲಕ್ಷ್ಮಿ ಯೋಜನೆಯಲ್ಲಿ ಫೆಬ್ರುವರಿ ತಿಂಗಳವರೆಗೆ ಹಣ ಪಾವತಿಯಾಗಿದೆ. 47,564 ಫಲಾನುಭವಿಗಳ ಪೈಕಿ 2,256 ಮಂದಿಗೆ ಒಂದಕ್ಕಿಂತ ಹೆಚ್ಚು ಖಾತೆಗಳಿಗೆ ಹಣ ಪಾವತಿಯಾಗಿರುವ ಮಾಹಿತಿ ಸಿಕ್ಕಿದೆ. ಫಲಾನುಭವಿಗಳು ಬೇರೆ ಬೇರೆ ಬ್ಯಾಂಕ್‌ಗಳಲ್ಲಿ ಆಧಾರ್ ಸೀಡಿಂಗ್ ಮಾಡಿರುವುದರಿಂದ ಈ ರೀತಿ ಗೊಂದಲ ಉಂಟಾಗಿದೆ ಎಂದು ಅಧಿಕಾರಿಗಳು ಮಾಹಿತಿ



☛ ಉದಯವಾಹಿನಿ ಚಿತ್ರ

ನೀಡಿದರು. ಆಧಾರ್ ಸೀಡಿಂಗ್ ಸಮಸ್ಯೆಯಿಂದ ಈ ಸಮಸ್ಯೆ ಕಂಡು ಬಂದಿದೆ ಹೊರತು ಹಣ ದುರುಪಯೋಗವಾಗಿಲ್ಲ ಎಂದು ಅಧ್ಯಕ್ಷ ಎಚ್.ಹರಿಪ್ರಸಾದ್ ಶೆಟ್ಟಿ ತಿಳಿಸಿದರು. ಹಾಲಾಡಿ-ಹುಣ್ಣೆಮಕ್ಕಿ ರಸ್ತೆಯಲ್ಲಿ ಎರಡು ಕಡೆ ಅಕೇಶಿಯ ಮರಗಳು, ವಿದ್ಯುತ್ ತಂತಿಗೆ ತಾಗಿಕೊಂಡಿವೆ. ವಿದ್ಯುತ್ ತಂತಿಯ ಮೇಲ್ಭಾಗದಲ್ಲಿ ಆಕೇಶಿಯಾ ಮರಗಳ ರೆಂಬೆ ಕೊಂಬೆಗಳು ಬಾಗಿಕೊಂಡಿದ್ದು, ಅರಣ್ಯ ಇಲಾಖೆ ಸಮನ್ವಯತೆ ಕೊರತೆಯಿಂದ ಅಪಾಯಕಾರಿ ಮರಗಳ ಗೆಲ್ಲುಗಳನ್ನು ತೆರವು ಮಾಡಿಲ್ಲ. ಮಳೆಗಾಲದಲ್ಲಿ ಈ ಮರಗಳು ಬಿದ್ದರೆ ವಿದ್ಯುತ್ ಸಂಚಾರಕ್ಕೆ ಸಮಸ್ಯೆಯಾಗುತ್ತದೆ. ಕಂಬಗಳು ಮುರಿದು ಹೋಗುತ್ತವೆ. ಕೂಡಲೇ ತೆರವು ಮಾಡಬೇಕು ಎಂದು ಸಮಿತಿ ಸದಸ್ಯ ವಸುಂಧರ ಹೆಗ್ಡೆ ಹಾಗೂ ಚಂದ್ರ ಅಮೀನ್ ದೂರಿದರು. ಇದಕ್ಕೆ ಪ್ರತಿಕ್ರಿಯಿಸಿದ ಮೆಸ್ಕಾಂ ಅಧಿಕಾರಿಗಳು, ಅಪಾಯಕಾರಿ ಮರಗಳು ಇರುವ ಸ್ಥಳಗಳ ಪಟ್ಟಿ ಮಾಡಿದ್ದೇವೆ. ಲಿಖಿತವಾಗಿ ಆರ್‌ಎಫ್‌ಒ ಗಮನಕ್ಕೂ ತಂದಿದ್ದೇವೆ ಎಂದರು.

## ಉಪಕೇಂದ್ರದ ಕಾಮಗಾರಿ ಶೀಘ್ರ ಆರಂಭ ಮೆಸ್ಕಾಂ

**• ಉದಯವಾಹಿನಿ ಕಾಪು :**

ಪಡುಬಿದ್ರಿಯಲ್ಲಿ ವಿದ್ಯುತ್ ಉಪಕೇಂದ್ರ ನಿರ್ಮಾಣ ಸಂಬಂಧ ಖಾಸಗಿ ಜಾಗದ ಮಾಲೀಕರ ರಸ್ತೆಯ ವಿಚಾರವಾಗಿ ಸರ್ವೆ ಕಾರ್ಯ ನಡೆಯಲಿದ್ದು, ಶೀಘ್ರದಲ್ಲೇ ಉಪಕೇಂದ್ರ ಕಾಮಗಾರಿ ಆರಂಭಿಸಲಾಗುವುದು ಎಂದು ಮೆಸ್ಕಾಂ ಅಧೀಕ್ಷಕ ಇಂಜಿನಿಯರ್ ರಾಕೇಶ್ ಹೇಳಿದರು.ಮೆಸ್ಕಾಂ ಕಾಪು ಉಪವಿಭಾಗದ ಜನಸಂಪರ್ಕ ಸಭೆಯಲ್ಲಿ ಅವರು ಮಾತನಾಡಿದರು.

ಪ್ರಸ್ತಾವಿತ ಪ್ರದೇಶದಲ್ಲೇ ಮೆಸ್ಕಾಂ ಶಾಖಾ ಕಚೇರಿ ತೆರೆಯುವಂತೆ ಗ್ರಾಹಕರಿಂದ ಆಗ್ರಹ ವ್ಯಕ್ತವಾಗುತ್ತಿದೆ. ಆದರೆ ಕಚೇರಿ ನಿರ್ಮಾಣಕ್ಕೆ ಅಗತ್ಯ ಸ್ಥಳಾವಕಾಶದ ಕೊರತೆ ಇರುವುದರಿಂದ ಸೂಕ್ತ ಸರ್ಕಾರಿ ಜಮೀನನ್ನು ಗುರುತಿಸುವಂತೆ ಶಾಖಾಧಿಕಾರಿಗೆ ಸೂಚಿಸಿದರು.

**ವಿದ್ಯುತ್ ವ್ಯತ್ಯಯಕ್ಕೆ ಗ್ರಾಹಕರ ಆಕ್ಷೇಪ:** ಮಲ್ಲಾರು ಗ್ರಾಮದ ವಿದ್ಯುತ್ ಪರಿವರ್ತಕದಲ್ಲಿ ಉಂಟಾದ ತಾಂತ್ರಿಕ ದೋಷದಿಂದ ವಿದ್ಯುತ್ ಸರಬರಾಜು ಸ್ಥಗಿತಗೊಂಡಿದ್ದು, ಸುತ್ತಮುತ್ತಲಿನ ಮನೆಗಳು ಸುಮಾರು 15 ಗಂಟೆಗಳ ಕಾಲ ವಿದ್ಯುತ್ ಇಲ್ಲದೆ ಪರದಾಡಬೇಕಾಯಿತು ಎಂದು ದೂರಿದರು.ಸಮಸ್ಯೆ ಕುರಿತು ದೂರು ನೀಡಿದರೂ ಸಿಬ್ಬಂದಿ ರಜೆಯಲ್ಲಿದ್ದಾರೆ ಎಂಬ ಕಾರಣ ನೀಡಿ ಸ್ಪಂದನೆ ದೊರಕಿಲ್ಲ ಎಂದು ಅವರು ಅಸಮಾಧಾನ ವ್ಯಕ್ತಪಡಿಸಿದರು.

# ಪೊಲೀಸರಿಂದ 9.41 ಕೋಟಿ ಮೌಲ್ಯದ ಮಾದಕ ವಸ್ತು ನಾಶ

**• ಉದಯವಾಹಿನಿ ಬೀದರ್:**

ಜಿಲ್ಲೆಯಾದ್ಯಂತ ವಿವಿಧ ಕಡೆಗಳಲ್ಲಿ ದಾಳಿ ನಡೆಸಿ, ಜಪ್ತಿ ಮಾಡಲಾಗಿದ್ದ 9.41 ಕೋಟಿ ರೂ. ಮೌಲ್ಯದ ಮಾದಕ ವಸ್ತುವನ್ನು ಬೀದರ್ ಪೊಲೀಸರು ನಾಶಪಡಿಸಿದ್ದಾರೆ.ಬೀದರ್ ಜಿಲ್ಲೆಯ ಭಾಲ್ಕಿ ತಾಲ್ಲೂಕಿನ ಧನ್ನೂರು ಸಮೀಪದ ಜೈವಿಕ ತ್ಯಾಜ್ಯ ವಿಲೇವಾರಿ ಕುಲುಮೆ ಘಟಕದಲ್ಲಿ 997 ಕೆ.ಜಿ ಗಾಂಜಾ, 51 ಸಾವಿರಕ್ಕೂ ಅಧಿಕ ನಶೆ ಗುಳಿಗೆಗಳು ಮತ್ತು 743 ಮಾದಕ ಸಿರಪ್‌ಗಳನ್ನು ನಾಶಪಡಿಸಿದ್ದಾರೆ. ಜಿಲ್ಲಾ ಡ್ರಗ್ಸ್ ವಿಲೇವಾರಿ ಸಮಿತಿಯ ನಿಯಮಗಳ ಪ್ರಕಾರ ಎಸ್ಪಿ ಪ್ರದೀಪ್ ಗುಂಟಿ ನೇತೃತ್ವದಲ್ಲಿ ಕೋಟಿ ಕೋಟಿ ಮೌಲ್ಯದ ಮಾದಕ ವಸ್ತುಗಳನ್ನು ನಾಶ ಮಾಡಲಾಗಿದೆ. ಎನ್‌ಡಿಪಿಎಸ್ ಕಾಯ್ದೆ ಅಡಿಯಲ್ಲಿ ದಾಖಲಾಗಿದ್ದ 22 ಪ್ರಕರಣಗಳಲ್ಲಿ ಜಪ್ತಿಯಾಗಿದ್ದ ಮಾದಕ ದ್ರವ್ಯಗಳನ್ನು ನಾಶ ಮಾಡಿ, ಅಕ್ರಮ ಮಾದಕ ದ್ರವ್ಯ ಮಾರಾಟ ಮಾಡುವ ದಂಗೆಕೋರರಿಗೆ ಎಸ್ ಪಿ ವಾರ್ನಿಂಗ್ ನೀಡಿದ್ದಾರೆ.

# ಅಂಬಲಪಾಡಿ ಸರ್ವಿಸ್ ರಸ್ತೆ ಅವ್ಯವಸ್ಥೆ

**• ಉದಯವಾಹಿನಿ ಉಡುಪಿ:**

ನಗರದ ಅಂಬಲಪಾಡಿಯ ರಾಷ್ಟ್ರೀಯ ಹೆದ್ದಾರಿಯ ಇಕ್ಕೆಲಗಳಲ್ಲಿರುವ ಸರ್ವಿಸ್ ರಸ್ತೆ ಮತ್ತೆ ತೀರಾ ಹದಗೆಟ್ಟಿದ್ದು, ವಾಹನ ಸವಾರರು ಸಂಕಷ್ಟ ಅನುಭವಿಸುವಂತಾಗಿದೆ. ಅಂಬಲಪಾಡಿಯ ರಾಷ್ಟ್ರೀಯ ಹೆದ್ದಾರಿಯಲ್ಲಿ ಮೇಲೇತುವೆ ಕಾಮಗಾರಿ ನಡೆಯುತ್ತಿದ್ದ ಕಾರಣಕ್ಕೆ ಭಾರಿ ವಾಹನಗಳು ಸರ್ವಿಸ್ ರಸ್ತೆಯಲ್ಲಿ ಸಂಚಾರ ನಡೆಸಿರುವುದರ ಪರಿಣಾಮ ರಸ್ತೆಯು ತೀರಾ ಹದಗೆಟ್ಟಿದೆ.

ಇದೀಗ ಮೇಲ್ಸೇತುವೆಯ ಕಾಮಗಾರಿ ಬಹುತೇಕ ಪೂರ್ಣಗೊಂಡಿದ್ದು, ಅದನ್ನು ವಾಹನ ಸಂಚಾರಕ್ಕೆ ಮುಕ್ತಗೊಳಿಸಲಾಗಿದೆ. ಆದರೆ ಮೇಲೇತುವೆ ಕಾಮಗಾರಿಯ ಜತೆಗೆ ಸರ್ವಿಸ್ ರಸ್ತೆಯ ಕಾಮಗಾರಿಯನ್ನೂ ನಡೆಸದಿರುವುದರಿಂದ ಸಮಸ್ಯೆ ಎದುರಾಗಿದೆ ಎಂದು ಸಾರ್ವಜನಿಕರು ಆರೋಪಿಸಿದ್ದಾರೆ.

ಮೇಲೇತುವೆ ಕಾಮಗಾರಿ ಪೂರ್ಣಗೊಳ್ಳುವುದಕ್ಕೂ ಮುನ್ನವೇ ಸರ್ವಿಸ್ ರಸ್ತೆಯನ್ನೂ ದುರಸ್ತಿಗೊಳಿಸಬೇಕೆಂಬ ಬೇಡಿಕೆಗಳೂ ಜನರಿಂದ ಕೇಳಿ ಬಂದಿದ್ದವು. ಕಿನ್ನಿಮುಲ್ಕಿಯಿಂದ ಕರಾವಳಿ ಬೈಪಾಸ್‌ವರೆಗಿನ ಸರ್ವಿಸ್ ರಸ್ತೆಯಲ್ಲಿ ಅಲ್ಲಲ್ಲಿ ಡಾಂಬರ್ ಕಿತ್ತು ಹೋಗಿ ಹೊಂಡ ನಿರ್ಮಾಣವಾಗಿದೆ. ಮಳೆ ಬರುವಾಗ ಆ ಹೊಂಡಗಳಲ್ಲಿ ಮಳೆ ನೀರು ನಿಂತು ವಾಹನ ಸವಾರರಿಗೆ ಸಮಸ್ಯೆಯಾಗುತ್ತಿದೆ. ಈ ಸರ್ವಿಸ್ ರಸ್ತೆಯ ಬದಿಯಲ್ಲಿ ಸಮರ್ಪಕವಾದ ಚರಂಡಿ ವ್ಯವಸ್ಥೆ ಇಲ್ಲದ ಕಾರಣಕ್ಕೆ ಮಳೆನೀರು ರಸ್ತೆಯಲ್ಲೇ ಹರಿಯುತ್ತದೆ. ಅದು ಇನ್ನಷ್ಟು ಸಮಸ್ಯೆಯನ್ನು ತಂದೊಡ್ಡುತ್ತಿದೆ. ಸರ್ವಿಸ್ ರಸ್ತೆಯಲ್ಲಿ ರಾತ್ರಿ ವೇಳೆ ದ್ವಿಚಕ್ರ ವಾಹನಗಳ ಸಂಚಾರ ಅಪಾಯಕಾರಿಯಾಗಿ ಪರಿಣಮಿಸಿದೆ ಎಂದು ಜನರು ದೂರುತ್ತಾರೆ.

# ವಿದ್ಯುತ್ ತಗುಲಿ ರೈತ ಸಾವು

**• ಉದಯವಾಹಿನಿ ಅಫಜಲಪುರ:**

ತಾಲ್ಲೂಕಿನ ಅಳ್ಳಗಿ ಗ್ರಾಮದಲ್ಲಿ ವಿದ್ಯುತ್ ತಗುಲಿ ರೈತನೊಬ್ಬ ಮೃತಪಟ್ಟಿದ್ದು, ರೈತನ ಸಾವಿಗೆ ಲೈನ್‌ಮ್ಯಾನ್ ನಿರ್ಲಕ್ಷ್ಯವೇ ಕಾರಣ ಎಂದು ಆರೋಪಿಸಿ ಪಟ್ಟಣದ ಬಸವೇಶ್ವರ ವೃತ್ತದ ಬಳಿ ಕಲಬುರಗಿ -ವಿಜಯಪುರ ರಾಜ್ಯ ಹೆದ್ದಾರಿ ತಡೆದು ಗ್ರಾಮಸ್ಥರು ಪ್ರತಿಭಟನೆ ನಡೆಸುತ್ತಿದ್ದಾರೆ. ಮೃತರನ್ನು ಬಸಪ್ಪ ಮಹದೇವಪ್ಪ ಪೂಜಾರಿ ವಯಸ್ಸು (42) ಎಂದು ಗುರುತಿಸಲಾಗಿದೆ. ಬಸಪ್ಪ ರೈತರಾಗಿದ್ದು, ಅವರಿಗೆ ಪತ್ನಿ, ಇಬ್ಬರು ಪುತ್ರರು ಹಾಗೂ ಒಬ್ಬ ಪುತ್ರಿ ಇದ್ದಾರೆ.

ಶುಕ್ರವಾರ ಬೆಳಿಗ್ಗೆ ಸುಮಾರು 10 ಗಂಟೆಗೆ ಗ್ರಾಮದ ಲೈನ್‌ಮ್ಯಾನ್ ಗುಂಡುಜಿ ಚವ್ಹಾಣ ಸೂಚನೆಯ ಮೇರೆಗೆ ಬಸಪ್ಪ ಪೂಜಾರಿ ಅವರು ವಿದ್ಯುತ್ ಕಂಬ ಹತ್ತಿದ್ದಾರೆ. ಕಂಬ ಹತ್ತಿದ ಕೆಲವೇ ಕ್ಷಣಗಳಲ್ಲಿ ವಿದ್ಯುತ್ ತಂತಿ ತಗುಲಿ ಬಸಪ್ಪ ಪೂಜಾರಿ ಗಂಭೀರವಾಗಿ ಗಾಯಗೊಂಡಿದ್ದಾರೆ. ಸ್ಥಳದಲ್ಲೇ ಇದ್ದ ಸಾರ್ವಜನಿಕರು ರೈತನನ್ನು ಸರ್ಕಾರಿ ಸಾರ್ವಜನಿಕ ಆಸ್ಪತ್ರೆಗೆ ಧಾಖಲಿಸಿದ್ದಾರೆ. ಆದರೆ ಚಿಕಿತ್ಸೆಗೆ ಸ್ಪಂದಿಸದೇ ರೈತ ಬಸಪ್ಪ ಪೂಜಾರಿ ಮೃತಪಟ್ಟಿದ್ದಾರೆ ಎಂದು ತಿಳಿದುಬಂದಿದೆ.

# ಬಾಮೈದನ ಮೇಲಿನ ಇಡಿ ದಾಳಿ ನನಗೆ ಅಚ್ಚರಿ ತಂದಿದೆ: ಸತೀಶ್ ಜಾರಕಿಹೊಳಿ

### ಲೋಕಾಯುಕ್ತದಲ್ಲಿ ಅವರ ಮೇಲಿರುವ ಕೇಸ್ ಬಗ್ಗೆ ನನಗೆ ಗೊತ್ತಿಲ್ಲ. ಆದರೆ ಹಿಂದೆ ಹೈಕೋರ್ಟ್ ಒಂದು ಹಳೆಯ ಕೇಸ್ ಅನ್ನು ರದ್ದು ಮಾಡಿತ್ತು.

**• ಉದಯವಾಹಿನಿ ಬೆಳಗಾವಿ:**

ಬಾಮೈದನ ಮೇಲಿನ ಜಾರಿ ನಿರ್ದೇಶನಾಲಯ ದಾಳಿ ನನಗೆ ಅಚ್ಚರಿ ತಂದಿದೆ ಎಂದು ಲೋಕೋಪಯೋಗಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಸತೀಶ್ ಜಾರಕಿಹೊಳಿ ಹೇಳಿದ್ದಾರೆ.

ವೈ. ಮಂಜುನಾಥ್ ಅವರ ಮೇಲಿನ ಇಡಿ ದಾಳಿಗೆ ಪ್ರತಿಕ್ರಿಯಿಸಿದ ಅವರು, ಲೋಕಾಯುಕ್ತದಲ್ಲಿ ಅವರ ಮೇಲಿರುವ ಕೇಸ್ ಬಗ್ಗೆ ನನಗೆ ಗೊತ್ತಿಲ್ಲ. ಆದರೆ ಹಿಂದೆ ಹೈಕೋರ್ಟ್ ಒಂದು ಹಳೆಯ ಕೇಸ್ ಅನ್ನು ರದ್ದು ಮಾಡಿತ್ತು.

ಹೀಗಿರುವಾಗ ಭ್ರಷ್ಟಾಚಾರದ ಆರೋಪದ ಮೇಲೆ ಇಡಿ ದಾಳಿ ಮಾಡಿರುವುದು ನನಗೂ ಅಚ್ಚರಿ ಮೂಡಿಸಿದೆ ಎಂದರು. ಭ್ರಷ್ಟಾಚಾರದ ತನಿಖೆ ನಡೆಸಲು ರಾಜ್ಯ ಸರ್ಕಾರ ಹಾಗೂ ಎಸಿಬಿ/ಲೋಕಾಯುಕ್ತಗಳಿವೆ. ಕೇಂದ್ರ ಸರ್ಕಾರದ ಕೈಯಲ್ಲಿದ್ದರೆ ಸಿಬಿಐನವರು ತನಿಖೆ ಮಾಡಬೇಕಿತ್ತು. ಆದರೆ ಇಡಿ ದಾಳಿ ಮಾಡಿರುವುದರ ಹಿಂದೆ ರಾಜಕೀಯ ಪ್ರೇರಿತ ಸಂಚು ಇದೆಯೇ ಎಂಬುದನ್ನು ಕಾದು ನೋಡಬೇಕಿದೆ. ತನಿಖೆ ಯಾವ ದಿಕ್ಕಿನಲ್ಲಿ ಹೋಗುತ್ತದೆ ಎಂಬುದರ ಮೇಲೆ ಮುಂದಿನ ದಿನಗಳಲ್ಲಿ ಸ್ವರೂಪ ಮತ್ತು ಪರಿಣಾಮ ಗೊತ್ತಾಗಲಿದೆ ಎಂದು ಹೇಳಿದರು.

ನನ್ನ ಪ್ರಭಾವದಿಂದ ಆಸ್ತಿ ಮಾಡಿಲ್ಲ ಸತೀಶ್ ಜಾರಕಿಹೊಳಿ ಅವರ ಸಂಬಂಧಿ ಎಂಬ ಕಾರಣಕ್ಕೇ ದಾಳಿ ಮಾಡಲಾಗಿದೆಯೇ? ಮತ್ತು ಸಚಿವರ ಪ್ರಭಾವದಿಂದಲೇ ಇಷ್ಟೊಂದು ಆಸ್ತಿ



> ಸಿದ್ದರಾಮಯ್ಯ ಅವರೇ ಸತೀಶ್ ಜಾರಕಿಹೊಳಿ ಅವರಿಗೆ ಕೆಪಿಸಿಸಿ ಅಧ್ಯಕ್ಷಗಾದಿ ತಪ್ಪಿಸಿದರು ಎಂಬ ಚರ್ಚೆಗೆ ಇತಿಹಾಸದ ಪುಟಗಳನ್ನು ತೆರೆದಿಟ್ಟ ಸಚಿವರು, ಒಂದು ಹುದ್ದೆಗೆ ಒಬ್ಬ ವ್ಯಕ್ತಿ ಇರಬೇಕು ಎಂದು ನಾನು ಸಾಕಷ್ಟು ಬಾರಿ ಹೇಳಿದ್ದೇನೆ. ಕೆಪಿಸಿಸಿ ಅಧ್ಯಕ್ಷ ಹುದ್ದೆಯ ಆಫರ್ ನನಗೆ ಮೊದಲೇ ಇತ್ತು. ಮಂತ್ರಿ ಸ್ಥಾನ ಮತ್ತು ಅಧ್ಯಕ್ಷ ಸ್ಥಾನ ಎರಡರಲ್ಲಿ ಯಾವುದು ಬೇಕು ಎಂದು ನಾಯಕರು ಕೇಳಿದಾಗ, ನಾನು 'ಎರಡನ್ನೂ ಕೊಡಿ' ಎಂದು ಕೇಳಿದ್ದೆ. ಕೊನೆಗೆ ಆ ಚರ್ಚೆ ಇಲ್ಲಿಯವರೆಗೆ ಜಗ್ಗಿ, ಅಂತಿಮವಾಗಿ ನನಗೆ ಮಂತ್ರಿ ಸ್ಥಾನ ನೀಡಿದ್ದಾರೆ ಎಂದು ತಿಳಿಸಿದರು. -ಸತೀಶ್ ಜಾರಕಿಹೊಳಿ

**ಸಂಬಂಧವನ್ನು ಯಾವ ಮಾಪನದಲ್ಲಿ ಅಳೆಯುತ್ತೀರಿ?**

**ಭಿನ್ನಾಭಿಪ್ರಾಯ ಬಂದಿಲ್ಲ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ತಮ್ಮ ನಡುವಿನ ಸಂಬಂಧದ ಕುರಿತು ಕೇಳಲಾದ ಪ್ರಶ್ನೆಗೆ ಚಟಾಕಿ ಹಾರಿಸಿದ ಅವರು, ''ನಮ್ಮಿಬ್ಬರ ನಡುವಿನ ಸಂಬಂಧವನ್ನು ಯಾವ ಮಾಪನದಲ್ಲಿ ಅಳೆಯುತ್ತೀರಿ? ಇಬ್ಬರ ನಡುವೆ ಇಲ್ಲಿಯವರೆಗೆ ಯಾವುದೇ ತರಹದ ಮತಭೇದ ಆಗುವ ಸಂದರ್ಭವೇ ಬಂದಿಲ್ಲ'' ಎಂದರು.**

ಸಂಪಾದಿಸಿದ್ದಾರಾ? ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, ''ಆತ ಎಲ್ಲೇ ಇದ್ದರೂ ಒಬ್ಬ ಅಧಿಕಾರಿಯಷ್ಟೇ.

ಅವರ ಇಲಾಖೆಯಲ್ಲಿ ನಮ್ಮ ಪ್ರಭಾವ ಏನೂ ಇರುವುದಿಲ್ಲ, ಅದು ಸೀಮಿತ ಪೋಸ್ಟ್. ಇನ್ನು ಮಾವಲಿ ಚೆಕ್ ಪೋಸ್ಟ್ ಹತ್ತಿರ ಇರುವ ರೆಸಾರ್ಟ್ ಮಂಜುನಾಥ್ ಹೆಸರಿನಲ್ಲಿ ಇಲ್ಲ, ಅದು ಅವರ ಬ್ರದರ್ಸ್ ಹೆಸರಿನಲ್ಲಿದೆ. ಕಳೆದ 30 ವರ್ಷಗಳಿಂದ ಅವರ ಕುಟುಂಬದವರು ರೆಸಾರ್ಟ್ ವ್ಯವಹಾರದಲ್ಲಿದ್ದಾರೆ.

ದಾಳಿಯಾಗಿ ಮೂರು ದಿನಗಳಾಗಿದ್ದು, ಇಡಿಯವರು ಕೇಳುವ ಪ್ರಶ್ನೆಗಳ ಆಧಾರದ ಮೇಲೆ ಉತ್ತರ ನೀಡಲು ಸಮಯ ಬೇಕಾಗುತ್ತದೆ. ಇಂದು ಮಂಜುನಾಥ್ ಸಿಗಲಿದ್ದು,

> ಬಿಡದಿ ಟೌನ್‌ಶಿಪ್ ಯೋಜನೆಗೆ ರೈತರು ವಿರೋಧಿಸಿದರೆ ಟೌನ್‌ಶಿಪ್ ಮಾಡಲ್ಲ ಅಂತಾ ಕೆಪಿಸಿಸಿ ಅಧ್ಯಕ್ಷ ಬಿ.ಕೆ.ಹರಿಪ್ರಸಾದ್ ಹೇಳಿಕೆಗೆ, ಆ ಬಗ್ಗೆ ಸಿಎಂ, ವರಿಷ್ಠರು ಚರ್ಚೆ ಮಾಡಿ ನಿರ್ಧರಿಸಬೇಕು. ಅಲ್ಲದೇ ಬಿಡದಿ ಟೌನ್‌ಶಿಪ್ ನಿರ್ಮಾಣದಲ್ಲಿ ಪರ-ವಿರೋಧ ಚರ್ಚೆ ಆಗುತ್ತಿದೆ. ಹಿಂದಿನ ಸರ್ಕಾರದಲ್ಲಿ ಯೋಜನೆ ರದ್ದು ಪಡಿಸಬೇಕಿತ್ತು ಎಂಬುದು ನಮ್ಮ ಮುಖ್ಯಮಂತ್ರಿಗಳ ವಾದ ಆಗಿದೆ. ಗೊಂದಲ ಅಂತೂ ಇದೆ. ವರಿಷ್ಠರು ಹೇಗೆ ಅದನ್ನು ಪರಿಹರಿಸುತ್ತಾರೆ ಕಾದು ನೋಡೋಣ ಎಂದರು. -ಸತೀಶ್ ಜಾರಕಿಹೊಳಿ

ಅವರೊಂದಿಗೆ ಮಾತನಾಡುತ್ತೇನೆ ಎಂದು ಸ್ಪಷ್ಟಪಡಿಸಿದರು. ಭ್ರಷ್ಟಾಚಾರ ಎಲ್ಲಾ ಕಡೆಯೂ ಇದೆ, ಅದು ಕೇವಲ ಒಂದೇ ಇಲಾಖೆಗೆ ಸೀಮಿತವಾಗಿಲ್ಲ. ಎಲ್ಲಿ ಅಧಿಕಾರಿಗಳು ಸಿಕ್ಕಿಬೀಳುತ್ತಾರೋ ಅಲ್ಲಿ ಭ್ರಷ್ಟಾಚಾರ ಹೊರಗಡೆ ಬರುತ್ತದೆ ಎಂದು ತಿಳಿಸಿದರು. ಕಾಂಗ್ರೆಸ್ ನಾಯಕರಿಗೆ ಇಡಿ ದಾಳಿಯ ಆತಂಕವಿದೆಯೇ ಎಂಬ ಪ್ರಶ್ನೆಗೆ, ಖಂಡಿತವಾಗಿಯೂ ಆತಂಕ ಇದ್ದೇ ಇದೆ. 2028ರ ವಿಧಾನಸಭಾ ಚುನಾವಣೆ ಹತ್ತಿರ ಬರುತ್ತಿರುವುದರಿಂದ ಇಂತಹ ದಾಳಿಗಳು ಹೊರಗಡೆ ಬರುತ್ತವೆ ಎಂದು ಮಾರ್ಮಿಕವಾಗಿ ನುಡಿದರು.